# ದೆಹಲಿ ಕರ್ನಾಟಕ ಸಂಘದ ಅಭಿಮತ

ಆಗಸ್ಟ್ 2012
ಬೆಲೆ ರೂ. 1



## ರಾಷ್ಟ್ರದ ಪ್ರಗತಿಗೆ ಸಮರ್ಥ ಸಾರಥಿ

# ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಜಗದೀಶ್ ಶೆಟ್ಟರ್



ಉತ್ತರ ಕರ್ನಾಟಕದ ಸಜ್ಜನ ರಾಜಕಾರಣಿ ಮತ್ತು ಸೋಲಿಲ್ಲದ ಸರದಾರ ಎಂದೇ ಪ್ರಸಿದ್ಧರಾದ ಹುಬ್ಬಳ್ಳಿಯ ಶಾಸಕ ಜಗದೀಶ್ ಶೆಟ್ಟರ್ ಕರ್ನಾಟಕದ 27ನೇ ಮುಖ್ಯಮಂತ್ರಿಯಾಗಿ ಹಾಗೂ ನಾಲ್ಕು ವರ್ಷಗಳ ಅವಧಿಯ ಬಿ.ಜೆ.ಪಿ. ಸರ್ಕಾರದ ಮೂರನೇ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿ, ಅಧಿಕಾರ ಸ್ವೀಕರಿಸಿದ್ದಾರೆ. ಆರ್.ಎಸ್.ಎಸ್. ಸಂಘಟನೆಯ ನಿಷ್ಠಾವಂತ ಅನುಯಾಯಿಯಾಗಿ, ಬಿ.ಜೆ.ಪಿ. ಕಾರ್ಯಕರ್ತನಾಗಿ ಮೂರು ದಶಕಗಳ ಕಾಲ ದುಡಿದು, 1994ರಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಆರ್, ಬೊಮ್ಮಾಯಿ ಅವರನ್ನು ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಮಣಿಸಿ, ವಿಧಾನಸಭೆ ಪ್ರವೇಶಿಸಿದ ಜಗದೀಶ್ ಶೆಟ್ಟರ್, ಮೃದು ಹೃದಯದ ಹಾಗೂ ಮಿತವಾದ ಮಾತಿಗೆ ಹೆಸರಾದವರು. ಬಿ.ಜೆ.ಪಿ. ಪಕ್ಷದಲ್ಲಿ ಇರುವ ಹಲವು ಸಜ್ಜನ ರಾಜಕಾರಣಿಗಳಲ್ಲಿ ಇವರೂ ಒಬ್ಬರು. ಅತ್ಯಂತ ಸಜ್ಜನಿಕೆ ಸ್ವಭಾವದ ಜಗದೀಶ್ ಶೆಟ್ಟರ್ ಅವರು ತಮ್ಮ ಒಂದು ವರ್ಷದ ಆಡಳಿತಾವಧಿಯಲ್ಲಿ, ಸ್ವಚ್ಛ ಹಾಗೂ ಪಾರದರ್ಶಕ ಆಡಳಿತ ನೀಡಬಲ್ಲರೆಂಬ ಭರವಸೆ ನಾಡಿನ ಜನತೆಗಿದೆ.

ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲೂಕಿನ ಕೆರೂರ್ ಗ್ರಾಮದಲ್ಲಿ ಶಿವಪ್ಪ ಶಿವಮೂರ್ತೆಪ್ಪ ಶೆಟ್ಟರ್ ಮತ್ತು ಬಸವಣ್ಣೆಮ್ಮ ದಂಪತಿಯ ಪುತ್ರನಾಗಿ 1955 ರಲ್ಲಿ ಡಿಸೆಂಬರ್ 17 ರಂದು ಜನಿಸಿದರು. ಅವರ ತಂದೆ ಜನ ಸಂಘದ ಹಿರಿಯ ಕಾರ್ಯಕರ್ತ. ಹುಬ್ಬಳ್ಳಿ–ಧಾರವಾಡ ಪುರಸಭೆಗೆ ಐದು ಬಾರಿ ಚುನಾಯಿತರಾಗಿ, ಜನ ಸಂಘದ ಮೊದಲ ಮೇಯರ್ ಆಗಿದ್ದರು. ಚಿಕ್ಕಪ್ಪ ಸದಾಶಿವ್ ಶೆಟ್ಟರ್ ಕೂಡ ಜನ ಸಂಘದ ನಾಯಕರಾಗಿದ್ದರು. ಶೆಟ್ಟರ್ ಬಿಕಾಂ ಮತ್ತು ಕಾನೂನು ವಿಷಯದಲ್ಲಿ ಪದವಿ ಪಡೆದು ವಕೀಲರಾಗಿ ಹುಬ್ಬಳ್ಳಿಯಲ್ಲಿ 20 ವರ್ಷಗಳಿಂದ ಅಭ್ಯಾಸಮಾಡುತ್ತಿದ್ದರು. ತಾಳ್ಮೆ ಅವರ ದೊಡ್ಡ ಗುಣ, ಎಲ್ಲರೂ ನಮ್ಮವರೆಂಬ ಭಾವ. ತಮ್ಮ ಸರಳ, ಸಜ್ಜನಿಕೆಯಿಂದಾಗಿ ಒದಗಿ ಬಂದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುತ್ತ ಒಂದೊಂದೇ ಮೆಟ್ಟಿಲು ಹತ್ತಿ ಮೇಲೇರಿದವರು.

ಶೆಟ್ಟರ್ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೂಲಕ ತಮ್ಮ ಸಾರ್ವಜನಿಕ ಜೀವನಕ್ಕೆ ಅಡಿಪಾಯವಿಟ್ಟರು. ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಕ್ರಿಯ ಸದಸ್ಯರಾಗಿದ್ದರು. 1990 ರಲ್ಲಿ ಬಿಜೆಪಿ ಪಕ್ಷದ–ಹುಬ್ಬಳ್ಳಿ ಗ್ರಾಮೀಣ ಘಟಕದ ಅಧ್ಯಕ್ಷರಾದರು ಮತ್ತು 1994 ರಲ್ಲಿ ಧಾರವಾಡ ಜಿಲ್ಲಾ ಘಟಕಕ್ಕೆ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಮೊದಲ ಬಾರಿಗೆ ಕರ್ನಾಟಕ ಶಾಸಕಾಂಗಕ್ಕೆ ಆಯ್ಕೆಯಾದರು. ಆ ನಂತರ ಶಾಸಕರಾಗಿ ಸತತ ನಾಲ್ಕು ಬಾರಿ ಗೆದ್ದಿದ್ದಾರೆ. 1996 ರಲ್ಲಿ ಅವರು ಬಿಜೆಪಿ ರಾಜ್ಯ ಕಾರ್ಯದರ್ಶಿಯಾಗಿ ಹಾಗೂ 1999 ರಲ್ಲಿ ರಾಜ್ಯದ ಚುನಾವಣೆಯಲ್ಲಿ ಬಿಜೆಪಿ ಸೋಲಿನ ನಂತರ ವಿಧಾನಸಭೆಯಲ್ಲಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡಲಾಯಿತು. ಆಗ ಎಸ್.ಎಂ ಕೃಷ್ಣ ಮುಖ್ಯಮಂತ್ರಿಯಾಗಿದ್ದರು. ಜಗದೀಶ್ ಶೆಟ್ಟರ್ ವಿರೋಧ ಪಕ್ಷದ ನಾಯಕರಾಗಿ ತಮ್ಮ ಕರ್ತವ್ಯಗಳಿಗೆ ಚ್ಯುತಿಬಾರದಂತೆ ಸಮರ್ಪಕವಾಗಿ ನಡೆದುಕೊಂಡರು.

2005ರಲ್ಲಿ ಅವರು ಭಾರತೀಯ ಜನತಾ ಪಕ್ಷದ ರಾಜ್ಯ ಅಧ್ಯಕ್ಷರಾಗಿ ನೇಮಕಗೊಂಡರು. 2006 ರಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದ ಜೆಡಿಎಸ್ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಕಂದಾಯ ಸಚಿವರಾದರು. 2008ರಲ್ಲಿ ಕರ್ನಾಟಕ ಶಾಸಕಾಂಗದಲ್ಲಿ ಬಿಜೆಪಿ ವಿಜಯದ ನಂತರ ಶೆಟ್ಟರ್ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಆದರು. ಆದರೆ 2009 ರಲ್ಲಿ ಈ ಸ್ಥಾನಕ್ಕೆ ರಾಜೀನಾಮೆ ನೀಡಿ ಯಡಿಯೂರಪ್ಪ ಅವರ ಸಂಪುಟದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿಯ ರಾಜ್ ಸಚಿವರಾದರು.

ಸಜ್ಜನಿಕೆ ಅವರಿಗೆ ಅವಕಾಶ ಒದಗಿಸಿಕೊಡುತ್ತ ಬಂದಿದೆ. ಜನಪರ ಮತ್ತು ರೈತಪರ ಚಳವಳಿಗಳಲ್ಲಿ ಸಕ್ರಿಯ ಹೋರಾಟ. ನಿರ್ಲಕ್ಷಿತ ಉತ್ತರ ಕರ್ನಾಟಕ ಅಭಿವೃದ್ಧಿಗಾಗಿ ಹೋರಾಟ. ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗುವಲ್ಲಿ ಪ್ರಮುಖ ಪಾತ್ರ. ಸರ್ವಧರ್ಮಗಳ ಸಮನ್ವಯ ಸಾಧನೆ. ಸತತ ಜನಸಂಪರ್ಕ, ಪಾದಯಾತ್ರೆ ಹಾಗೂ ಸಮಸ್ಯೆಗಳಿಗೆ ಸ್ಪಂದನ. ವಿಧಾನಸಭೆಯಲ್ಲಿ 5ವರ್ಷ ಪ್ರತಿಪಕ್ಷದ ನಾಯಕನಾಗಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದ ಜಗದೀಶ್ ಶೆಟ್ಟರ್ ಅವರು ಇದೀಗ ಕರ್ನಾಟಕದ ನೂತನ ಪ್ರಧಾನ ಮಂತ್ರಿಯಾಗಿ ನಾಡಿನ ಚುಕ್ಕಾಣಿ ಹಿಡಿದು ಹಲವಾರು ಸವಾಲುಗಳನ್ನು, ಸಂಕೀರ್ಣತೆಗಳನ್ನು ದಕ್ಷತೆಯಿಂದ ಎದುರಿಸುತ್ತಾ ತಮ್ಮ ಆಡಳಿತಾವಧಿಯನ್ನು ಸಮರ್ಥವಾಗಿ ಮುನ್ನಡೆಸಲೆಂದು ಹಾರೈಸುತ್ತೇವೆ.

## ಉಪ ಮುಖ್ಯಮಂತ್ರಿಗಳು



**ಕೆ.ಎಸ್. ಈಶ್ವರಪ್ಪ :** 1989ರಲ್ಲಿ ಮೊದಲ ಬಾರಿ ಶಾಸಕರಾಗಿ ರಾಜಕೀಯಕ್ಕಿಳಿದ ಕೆ.ಎಸ್. ಈಶ್ವರಪ್ಪ ಅವರು ಈಗ ಉಪಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದಾರೆ. ಹಿಂದೆ ಬಿಜೆಪಿ ರಾಜ್ಯಾಧ್ಯಕ್ಷ ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರಾಗಿದ್ದ ಇವರು, 2006ರಲ್ಲಿ ಜಲಸಂಪನ್ಮೂಲ ಸಚಿವ, 2008ರಲ್ಲಿ ಇಂಧನ ಸಚಿವ, 2010ರಲ್ಲಿ ರಾಜ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. 1982ರಲ್ಲಿ ಶಿವಮೊಗ್ಗ ನಗರ ಘಟಕದ ಅಧ್ಯಕ್ಷರಾಗಿದ್ದ ಕೆ.ಎಸ್. ಈಶ್ವರಪ್ಪ ಅವರು ಜೀತ ವಿಮುಕ್ತಿ, ಬಗರ್‌ಹುಕುಂ ರೈತಪರ ಹಾಗೂ ಪಂಚಾಯಿತಿಗಾಗಿ ಚುನಾವಣೆ ನಡೆಸಲು ಹೋರಾಟ ನಡೆಸಿದ ಅನುಭವಿಗಳು.



**ಆರ್. ಅಶೋಕ್ :** 1998ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ರಾಜಕೀಯದ ಕಣಕ್ಕಿಳಿದ ಆರ್. ಅಶೋಕ್ ಈಗ ನಾಡಿನ ಉಪಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದಾರೆ. ಅತೀ ದೊಡ್ಡ ವಿಧಾನಸಭೆ ಕ್ಷೇತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಉತ್ತರಹಳ್ಳಿ ಕ್ಷೇತ್ರದ ಉಪ ಚುನಾವಣೆಯಲ್ಲಿ 1998ರಲ್ಲಿ ಸ್ಪರ್ಧಿಸುವ ಮೂಲಕ ರಾಜಕೀಯ ಪ್ರವೇಶಿಸಿದ್ದರು. ಜೆಡಿಎಸ್–ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ, ಬಿಜೆಪಿ ಸರ್ಕಾರದಲ್ಲಿ ಸಾರಿಗೆ ಮತ್ತು ಗೃಹ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವಿಗಳು.

**ಕರ್ನಾಟಕದ ನೂತನ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳಿಗೆ**
**ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು**

ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 22 ಸಂಚಿಕೆ 11
ಆಗಸ್ಟ್ 2012, ಬೆಲೆ ರೂ. 1

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**ಹಿಂಬದಿ ಚಿತ್ರ ಕಲಾವಿದ**
ಆನಂದ್ ಶೆಣೈ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

1971ರ ಬಳಿಕ ನಮ್ಮ ರಾಜ್ಯಕ್ಕೆ ಭೀಕರ ಬರಗಾಲ ಬಂದು ಅಪ್ಪಳಿಸಿದೆ. 176 ತಾಲ್ಲೋಕುಗಳ ಪೈಕಿ 146 ತಾಲ್ಲೋಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಜನ ಜಾನುವಾರು ಹಸಿವು ನೀರಡಿಕೆಗಳಿಂದ ತತ್ತರಿಸುವಂತಾಗಿದೆ. ಈ ಬರದ ಪರಿಣಾಮ ಮತ್ತಷ್ಟು ಘೋರ. ಅದು ಅದರ ಕೆನ್ನಾಲಿಗೆಗಳನ್ನು ಮುಂಬರುವ ದಿನಗಳಿಗೂ ಚಾಚಿದೆ. ಏಕೆಂದರೆ ನಮ್ಮ ಗುರಿಯ ಪ್ರಕಾರ 74.70 ಲಕ್ಷ ಹೆಕ್ಟೇರ್‌ನಲ್ಲಿ ಇಷ್ಟರಲ್ಲಿ ಬಿತ್ತನೆಯಾಗಬೇಕಿತ್ತು. ಆದರೆ ಬಿತ್ತನೆಯ ಕಾರ್ಯ ಸಾಧ್ಯವಾಗಿರುವುದು ಕೇವಲ 34.98 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ. ಇದರಿಂದ ಫಸಲಿಗೆ ಏಟು, ಅಲ್ಲದೆ ಮುಂದೆ ಬೀಳಬಹುದಾದ ಮಳೆಯನ್ನೂ ಪ್ರಕೃತಿ ಕುಂಠಿತಗೊಳಿಸಿ ಎದಿರೇಟು ನೀಡಿದರೆ ಪರಿಸ್ಥಿತಿ ಮತ್ತಷ್ಟು ಚಿಂತಾಜನಕಗೊಳ್ಳುತ್ತದೆ. ಈಗಾಗಲೇ ಮೋಡಗಳ ಅವಕೃಪೆಯಿಂದ 2.30 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದಿದ್ದ ಫಸಲು ನಷ್ಟವಾಗಿದೆ. ನಮ್ಮ ಬಳಿ ಇರುವ ಆಯ್ಕೆಗಳು ಕೇವಲ ಎರಡು. ಒಂದು–ನೆರವಿಗಾಗಿ ಕೇಂದ್ರ ಸರ್ಕಾರವನ್ನು ಕೋರುವುದು, ಎರಡು–ಮಳೆಗಾಗಿ ದೇವರನ್ನು ಪ್ರಾರ್ಥಿಸುವುದು. ಈ ನಡುವೆ ನಮ್ಮ ರಾಜ್ಯ ಸರ್ಕಾರ ತನ್ನೆಲ್ಲ ಶಕ್ತಿಯನ್ನು ಕ್ರೋಡೀಕರಿಸಿ ಬರಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಇಲ್ಲಿ ರಾಜಕೀಯ ಹಿತಾಸಕ್ತಿಗಳು ಗೌಣವಾಗಬೇಕು. ಹಸಿವು, ನೀರಡಿಕೆಗಳಂತ ಅತ್ಯಂತ ಮೂಲಭೂತ ಜ್ವಲಂತ ಸಮಸ್ಯೆಗಳತ್ತ ಎಲ್ಲ ರಾಜಕೀಯ ಪಕ್ಷಗಳೂ ಒಕ್ಕೊರಲಿನಿಂದ ಸ್ಪಂದಿಸಬೇಕು. ಮಾತ್ರವಲ್ಲ ಸರ್ಕಾರದ ಜತೆ ಸಾರ್ವಜನಿಕರೂ ಸಹಾಯ ಹಸ್ತ ಜೋಡಿಸಿ ಕಾರ್ಯತತ್ಪರರಾಗಬೇಕು. ದೇಶ ವಿದೇಶದಲ್ಲಿರುವ ಕನ್ನಡ ಬಾಂಧವರು ತಮ್ಮ ನಾಡಿನ ಈ ಕಠಿಣ ಸಂದರ್ಭದಲ್ಲಿ ನೆರವನ್ನು ನೀಡಿ ಕನ್ನಡ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಔದಾರ್ಯತೆಯನ್ನು ಮೆರೆಯಬೇಕು. ಇವೆಲ್ಲವೂ ಈಡೇರಲಿ, ನಾಡಿಗಪ್ಪಳಿಸಿದ ಬರ ತೊಲಗಲಿ, ಶಾಂತಿ ಸಮೃದ್ಧಿ ಎಲ್ಲೆಲ್ಲೂ ನೆಲೆಸಲಿ ಎಂಬುದು ನಮ್ಮ ಹಾರೈಕೆ.

ಒಂದೆಡೆ ಭೀಕರ ಬರಗಾಲ, ಇನ್ನೊಂದೆಡೆ ಶಾಂತಿ, ಸಹನೆ ಪ್ರೀತಿಗಳಿಗೂ ಸಂಚಕಾರ. ಇದು ನಮ್ಮ ನಾಡಿನ ಇಂದಿನ ದುಸ್ಥಿತಿ. ನಮ್ಮ ನಾಡಿನ ಕರಾವಳಿಯ ಸುಂದರ ಪಟ್ಟಣ, ಹಸಿರ್ದಾಣ, ಜ್ಞಾನ ದೇಗುಲವಾಗಿದ್ದ ಮಂಗಳೂರು ಇತ್ತೀಚಿನ ದಿನಗಳಲ್ಲಿ ಕೆಲ ಕುತ್ಸಿತ ಮನಸ್ಸಿನ ವ್ಯಕ್ತಿಗಳ ಕುಕೃತ್ಯದಿಂದಾಗಿ ಇತಿಹಾಸದ ಕಪ್ಪು ಪುಟಗಳಲ್ಲಿ ದಾಖಲಾಗುವ ಸಾಧ್ಯತೆ ಇದೆ. ಒಂದಿಷ್ಟು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹುಟ್ಟಿದ ಹಬ್ಬದ ಆಚರಣೆಯಲ್ಲಿ ಹೋಮ್‌ಸ್ಟೇ ಒಂದರಲ್ಲಿ ತೊಡಗಿದ್ದಾಗ 'ನೈತಿಕತೆ'ಯನ್ನು ಕಾಪಾಡುವ ಸಲುವಾಗಿ ಗುಂಪೊಂದು ದಾಳಿ ನಡೆಸಿದೆ. ಸಂತೋಷ, ನೆಮ್ಮದಿ ಹಾಗೂ ಗೆಳೆತನಗಳನ್ನು ತುಳಿದು ಗಹಗಹಿಸುವುದೇ–ನೈತಿಕತೆ ಎಂದು ತಿಳಿಯುವುದಾದರೆ ಅದಕ್ಕಿಂತ ಅಧಃಪತನ ಮತ್ತೊಂದಿಲ್ಲ. ಇಂತಹ ಘಟನೆಗಳು ಎಂದೆಂದೂ ಮರುಕಳಿಸಬಾರದು. ಸರ್ಕಾರ ಹಾಗೂ ಕಾನೂನು ಈ 'ನೈತಿಕ' ವೀರರನ್ನು ಬಂಧಿಸಿ, ಶಿಕ್ಷಿಸಿ ನೈತಿಕತೆಯ ಸಹಜ ಪಥ್ಯವನ್ನು ಸಮಾಜಕ್ಕೆ ನಿವೇದಿಸಬೇಕು. ಬಹುಶಃ ನಮ್ಮ ಕರಾವಳಿಯ ಬಂಧುಗಳು ಈ ನಿಟ್ಟಿನಲ್ಲಿ ಒಗ್ಗೂಡಿ ಧರ್ಮದ ಹೆಸರಿನಲ್ಲಿ ಆಗಾಗ್ಗೆ ಸ್ಫೋಟ ಮಾಡುವ ಧರ್ಮಾಂಧರನ್ನು ಬಗ್ಗು ಬಡಿಯಬೇಕು. ಆಗಷ್ಟೇ ಈ ತೆರೆನ ಕಾರ್ಯಗಳು ಒಂದು ತಾರ್ಕಿಕ ಕೊನೆ ಕಾಣುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ, ಸಮಾಜ ಚಿಂತಿಸಲಿ, ಕಾರ್ಯೋನ್ಮುಖವಾಗಲಿ ಎಂಬುದು ನಮ್ಮ ಅಭಿಲಾಷೆ.

ಈವೆಲ್ಲ ಪ್ರಾಕೃತಿಕ ವಿಕೋಪ, ಅತಿರೇಕಗಳ ಸಮಸ್ಯೆಗಳ ನಡುವೆ ದಶಕಗಳ ಕನಸಾದ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿ ಸಂವಿಧಾನದ 371ನೇ ಕಲುಮಿಗೆ ತಿದ್ದುಪಡಿ ತರುವ ಮಹತ್ವಪೂರ್ಣ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟದ ರಾಜಕೀಯ ಸಮಿತಿ ಒಪ್ಪಿಗೆ ಸೂಚಿಸಿರುವುದು ಅಪಾರ ಹರ್ಷ ತಂದಿದೆ. ಬೀದರ್, ಗುಲ್ಬರ್ಗ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಈ ಪ್ರಸ್ತಾವನೆ ಅನುಮೋದನೆಗೊಂಡರೆ ಚಾಲನೆ ಸಿಗುತ್ತದೆ. ಏಕೆಂದರೆ ಈ ಭಾಗದ ಅಭಿವೃದ್ಧಿಗೆ ಸ್ಥಾಪನೆಗೊಳ್ಳುವ ಅಭಿವೃದ್ಧಿ ಮಂಡಳಿ ತನ್ನದೇ ಚುನಾಯಿತ ಪ್ರತಿನಿಧಿಗಳು ಹಾಗೂ ಪ್ರತ್ಯೇಕ ಬಜೆಟ್ ಹೊಂದಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೇರವಾಗಿ ಮಂಡಳಿಗೆ ನೆರವು ನೀಡಲಿವೆ. ಬಹುಶಃ 2/3 ರಷ್ಟು ಬಹುಮತದೊಂದಿಗೆ ಈ ತಿದ್ದುಪಡಿಗೆ ಸಂಸತ್ತಿನ ಅನುಮೋದನೆ ದೊರಕುವುದರಲ್ಲಿ ಸಂಶಯವಿಲ್ಲ. ಏಕೆಂದರೆ ಎಲ್ಲ ರಾಜಕೀಯ ಪಕ್ಷಗಳೂ ಈ ತಿದ್ದುಪಡಿಗಾಗಿ ರಾಜಕೀಯ ಮರೆತು ಶ್ರಮಿಸಿದ್ದವು. ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಸಚಿವರಾಗಿರುವ ಶ್ರೀ ಎಸ್.ಎಂ. ಕೃಷ್ಣ, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ವೀರಪ್ಪ ಮೊಯಿಲಿ ಹಾಗೂ ಶ್ರೀ ಕೆ.ಎಚ್. ಮುನಿಯಪ್ಪ ಅವರನ್ನು ಅಭಿನಂದಿಸಲೇಬೇಕು. ಏಕೆಂದರೆ ಅವರ ಬೆಂಬಲವಿಲ್ಲದೆ ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ. ಅತ್ಯಂತ ಕ್ಷಿಪ್ರ ಅವಧಿಯಲ್ಲಿ ತಿದ್ದುಪಡಿ ಜಾರಿಗೆ ಬರಲಿ, ಹಿಂದುಳಿದ ಹಣೆಪಟ್ಟಿ ಕಟ್ಟಿಕೊಂಡಿದ್ದ ಹೈದ್ರಾಬಾದ್ ಕರ್ನಾಟಕ ಪ್ರದೇಶ ಪ್ರಗತಿಯ ದಾಪುಗಾಲುಗಳನ್ನಿಡಲಿ ಎಂಬುದು ನಮ್ಮ ಕಳಕಳಿಯ ಬಯಕೆ. ಎಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.

❑ ಉಷಾ ಭರತಾದ್ರಿ

# ಬಾರೊ ಬಾರೋ ಮಳೆರಾಯ

ಈ ಬಾರಿ ಯಾಕೊ ಮಳೆಗಾಲ ಸರಿಯಾಗಿ ಪ್ರಾರಂಭವಾಗಿಲ್ಲ. ದೆಹಲಿಗೆ ಜೂನ್ ತಿಂಗಳ ಕೊನೆಗೊ, ಜುಲೈ ಮೊದಲ ವಾರದಲ್ಲಿ ಪಾದಾರ್ಪಣೆ ಮಾಡಬೇಕಿದ್ದ ಮಳೆ ತಿಂಗಳು ಉರುಳಿದರೂ ಉಸಿರು ಬಿಡಲಿಲ್ಲ. ಬೆವರು ಬರಿಸುವ ಬಿಸಿಲು–ಮೋಡದ ಒಡನಾಟದಿಂದಾಗಿ ದೆಹಲಿಗರಿಗೆ ಸಾಕುಬೇಕಾಗಿತ್ತು. ನಾಲ್ಕಾರು ದಿನಗಳಿಂದ ಒಂದು ಬಗೆಯ ಮಬ್ಬಿನ ವಾತಾವರಣ ಉತ್ತರ ಭಾರತದ ತುಂಬ ಆವರಿಸಿಕೊಂಡಿತ್ತು. ಪೂರ್ವ–ಪಶ್ಚಿಮಗಳೆಡೆಯಿಂದ ಗಾಳಿಯಲ್ಲಿ ಓಲಾಡಿಕೊಂಡು ಬರುವ ಮೋಡಗಳ ಉದರದಲ್ಲಿ ನೀರು ಇದ್ದಂತಿರಲಿಲ್ಲ. ಒಂದು ಬಗೆಯ ಉರಿಯುವ ಬೇಗೆ ತುಂಬಿಕೊಂಡಂತೆ ಇತ್ತು. ಅಲ್ಲೊಂದು ಬಾರಿ, ಇಲ್ಲೊಂದು ಬಾರಿ–ಯಾರೋ ನೀರು ಸಿಂಪಡಿಸಿದಂತೆ ಹತ್ತಾರು ಹನಿಗಳಲ್ಲೇ ಈ ಮಳೆಗಾಲವೇ ಮುಗಿದು ಹೋಯಿತೇನೊ ಎಂಬಂತೆ. ಶ್ರಾವಣವೂ ಕಳೆದು ಹೋಯಿತು. ಆದ್ರ, ಪುನರ್ವಸು. . . .ಇನ್ನಾವುದೋ ಮಳೆ ತುಂಬಿಕೊಂಡು ಬರುವ ನಕ್ಷತ್ರಗಳ ಕಾಲವು ಮುಗಿದು ಹೋಯಿತೆಂದು ನಮ್ಮ ಬದಿಯ ಮಲೆನಾಡಿನ ಜನ ಗೊಣಗಾಡಿದ್ದನ್ನು ಕೇಳಿಕೊಂಡು ಮತ್ತೆ ದೆಹಲಿಗೆ ಮರಳಿ ಬಂದಿದ್ದೂ ಆಯಿತು.

ಅತ್ತ ಕರ್ನಾಟಕದಲ್ಲಿ ಮಳೆರಾಯ ಯಾಕೋ ಕಣ್ಣುಮುಚ್ಚಾಲೆ ಬಿಡುತ್ತಿದ್ದಾನೆ. ಪರ್ಜನ್ಯ ಮಾಡುವವರೇನು? ಕತ್ತೆ–ಕುದುರೆಗಳ ಮೆರವಣಿಗೆ ಮಾಡುವವರೇನು? ಏನೆಲ್ಲ ಮಾಡಿದರೂ ಕಾವೇರಿ. . .ಕಬಿನಿ. . .ಲಿಂಗನಮಕ್ಕಿಗಳಲ್ಲಿ, ಕೃಷ್ಣಾ, ತುಂಗೆ, ಶರಾವತಿ, ನೇತ್ರಾವತಿಗಳಲ್ಲಿ ನೀರಿನ ಪಾತಳಿ ಏರುವುದೇ ಇಲ್ಲ. ಕರ್ನಾಟಕದಲ್ಲಿ ಬರಗಾಲದ ಪರಿಸ್ಥಿತಿ ಉಲ್ಬಣಿಸುತ್ತಿದೆ. ಮಳೆರಾಯ ಬರುವ ಕಾಲದಲ್ಲಿ ಬರದಿದ್ದರೆ, ಬಿತ್ತಿಗೆಯ ಎಲ್ಲ ಕೆಲಸಗಳು ಏರುಪೇರು. "ಅಪ್ಪಾ ಮಳೆರಾಯ ಬರುವುದಾದರೆ ಸರಿಯಾದ ವೇಳೆಗೆ ಇಳಿದು ಬಾರಯ್ಯ" ಎಂದರೆ ಅವನು ಕೇಳಿಯಾನೇ? ಮಳೆಯ ಹನಿಗಳನ್ನು ಹೊತ್ತು ತರುವ ಮೋಡಗಳಿಗೆ ಬೇಲಿ ಕಟ್ಟಲು ಸಾಧ್ಯವೇ?

ಇತ್ತ ದೆಹಲಿಯಲ್ಲಿ ನಮ್ಮ ದೆಹಲಿಗರು ಆದಾಯ ಕರದ ಜಮಾವಣೆಯಲ್ಲಿ ಅದಕ್ಕೆ ಕುರಿತಾದ ಲೆಕ್ಕಪತ್ರಗಳನ್ನು ಜೋಡಿಸಿಡುವಲ್ಲಿ ತೊಡಗಿಕೊಂಡ ಕಾಲದಲ್ಲಿ ಏನೋ ಅನುಕಂಪವನ್ನು ತೋರಲೆಂಬಂತೆ ಮಳೆರಾಯ ನಿಧಾನವಾಗಿ ಮುಂಜಾವಿನ ಬೆಳಕಿನಲ್ಲಿ ಬಂದ ಪರಿಯನ್ನು ನಾನು ಮರೆಯಲಾದೀತೆ? ಏನೆ ಆಗಲಿ ಕೊನೆಗೂ ಬಂದನಲ್ಲ ನಮ್ಮ ಈ ಮಳೆರಾಯ ಎಂದುಕೊಂಡು ನಾವು ಉಸಿರನ್ನು ತಹಬದಿಗೆ ತಂದುಕೊಳ್ಳುವಷ್ಟರಲ್ಲಿ, ಇನ್ನೇನೂ ಆಗಿ ಬಿಡಬೇಕೆ?

ಎರಡು ದಿನಗಳ ಕಾಲ ನಮ್ಮ ದೇಶದ ಅರ್ಧಕ್ಕೂ ಮಿಗಿಲಾದ ಭಾಗದಲ್ಲಿ ವಿದ್ಯುತ್ತು ಸರಬರಾಜು ಹತ್ತಾರು ಗಂಟೆಗಳ ಕಾಲದ ನಿಂತುಹೋಗಬೇಕೆ? ಮಳೆರಾಯನ ಕೃಪೆಯಿಂದಾಗಿ ವಿದ್ಯುತ್ ಇಲ್ಲದೇ ಹೋದರೂ ನೂರಾರು ಜನ ಬದುಕಿಕೊಂಡರು. ಮಳೆರಾಯ ಬರದಿದ್ದರೆ ಸೆಕೆಯ ಉರಿಯುವ ಬೇಗೆಯಲ್ಲಿ ಸಿಕ್ಕಿಕೊಂಡು ಇನ್ನೂ ನೂರಾರು ಜನ ಉತ್ತರ ಭಾರತದಲ್ಲಿ ಸಾವಿಗೀಡಾಗುತ್ತಿದ್ದರು.

ದೆಹಲಿಯಲ್ಲಿ ಹರಿಯುವ ಯಮುನೆ ತುಂಬಿ ಹರಿಯುವಂತೆ ಈ ಮಳೆರಾಯ ಬರಬೇಕು. ಇಲ್ಲಿಯ ತನಕ ಯಮುನೆಯಲ್ಲಿ ನೀರು ತುಂಬಿ ಹರಿಯಲೇ ಇಲ್ಲ. ಯಮುನೆಯ ಉದರದಲ್ಲಿ ನೀರು ತುಂಬದಿದ್ದರೆ ಏನಾದೀತು? ದೆಹಲಿಯ ಎಲ್ಲ ಕಲ್ಮಷಗಳು ಈ ಯಮುನೆಯ ಉಡಿಯಲ್ಲಿ ತುಂಬಿವೆ. ಕಡು ಬೇಸಿಗೆಯ ದಿನಗಳಲ್ಲಿ ನೀವು ಯಮುನೆಯನ್ನು ಕಂಡಿರಾದರೆ ಕಣ್ಣೀರು ಬರುತ್ತದೆ. ನೊಯಿಡದತ್ತ ಹೋಗುವಾಗ ಸಿಗುವ ಕಾಳಿಂದಿಕುಂಜ್‌ನ ಯಮುನೆಯ ಸೇತುವೆಯ ಮೇಲೆ ಕೆಲ ಕ್ಷಣ ನಿಂತು ಯಮುನೆಯನ್ನು ಅರಸಲು ಹೊರಟರೆ ಕಾಣುವುದೇನು? ಒಂದು ಕಡೆ ಪಾಚಿಗಟ್ಟಿದ ನೀರಿನ ತುಂಬ ಬಳ್ಳಿಗಳು ಹರಡಿಕೊಂಡಿದ್ದರೆ, ಇನ್ನೊಂದೆಡೆ ಯಮುನೆಯ ತಡಿಯ ತುಂಬ ನೊರೆಗಳು; ಬಗೆಬಗೆಯ ಬಿಳಿಯ ಹತ್ತಿಯ ಗುಡ್ಡದಾಕಾರದ ಬೃಹತ್ ನೊರೆಗಳ ಸಮೂಹ, ತುಂಬಾ ಸುಂದರವಾಗಿ, ವಿನೂತನವಾಗಿ ಕಾಣುವ ಈ ನೊರೆಗಳ ಸಮೂಹ; ದೆಹಲಿಯ ಕಲ್ಮಷದ ನೀರಿನ ಸೆಲೆಗಳಿಂದ ಉದ್ಭವವಾಗಿ ಬಂದಿದೆಯೆಂಬುದು ನಮ್ಮ ಮನದ ಆಳದಲ್ಲಿ ಇಳಿದಾಗ ಯಮುನೆಯ ಉದರದಲ್ಲಿ ತುಂಬಿದ ವಿಷದ ಅರಿವು ನಮಗಾಗುತ್ತದೆ. ಈ ಮಳೆರಾಯ ಅಬ್ಬರಿಸಿ ಹತ್ತಾರು ದಿನಗಳ ಕಾಲ ತನ್ನ ವರ್ಷಾಧಾರೆಯನ್ನು ಉತ್ತರ ಭಾರತದಲ್ಲಿ ಉಣಿಸಿದರೆ ಈ ಯಮುನೆಯ ಉದರದಲ್ಲಿ ವರ್ಷವಿಡೀ ತುಂಬಿದ ವಿಷದ ಕಣಜ ತಾನೇತಾನಾಗಿ ಮಾಯವಾಗುತ್ತದೆ.

ಈ ವಿಷದ ಕಣಜವನ್ನು ಯಮುನೆಯ ಉದರದಿಂದ ಉಚ್ಚಾಟಿಸಲು ದೆಹಲಿಯ ರಾಜ್ಯ ಸರ್ಕಾರ ನೂರಾರು–ಸಾವಿರಾರು ಕೋಟಿ ರೂಪಾಯಿಗಳ ಯೋಜನೆಗಳ ರೂಪರೇಷೆಯನ್ನು ಹಾಕಿಕೊಂಡಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಯಮುನೆಯ ಉದರದ ಪರಿಸರವನ್ನು ಉಳಿಸಿಕೊಳ್ಳಲು ಮೊಕದ್ದಮೆಯೂ ದಾಖಲಾಗಿದೆ. ಹತ್ತಾರು ವರ್ಷಗಳಿಂದ ನಡೆಯುತ್ತಿರುವ ಈ ಮೊಕದ್ದಮೆಯಿಂದ ಯಮುನೆಗೆ ಇಲ್ಲಿಯ ತನಕ ಯಾವ ಲಾಭವೂ ಆಗಲಿಲ್ಲ. ಆದರೆ, ನಮ್ಮ ಈ ಯಮುನೆಗೆ ಪ್ರತಿ ವರ್ಷ ಬರುವ ಮಳೆರಾಯನ ಚಿಂತೆ. ಈ ಮಳೆರಾಯ ಅಬ್ಬರದಿಂದ ಎಂದು ಬಂದಾನೋ? ಬಂದವನು ತನ್ನ ಉದರದಲ್ಲಿ ನೀರು–ನೆಗಸು ತಂದಾನೋ? ಏನೇ ಆದರೂ ಈ ಮಳೆರಾಯ ಬಂದವನು ಯಮುನೆಯ ಉದರಲ್ಲಿ ಹೊಸ ಜೀವದ ಆಶಯವನ್ನು ಬಿತ್ತಿ ಹೋಗುತ್ತಾನೆ. ಈ ಸಾವಿರಾರು ಕೋಟಿ ರೂಪಾಯಿಗಳ ಸರ್ಕಾರದ ಬೊಕ್ಕಸದ ಕೆಲಸವನ್ನು ಅವನು ಮಾಡಿಕೊಟ್ಟು ಸದ್ದಿಲ್ಲದೇ ಮರೆಯಾಗುತ್ತಾನೆ. ಇಲ್ಲಿಯವರೆಗೆ ಈ ಮಳೆರಾಯ ತನ್ನ ಅಬ್ಬರವನ್ನು ತೋರಿಸಲು ಮರೆತಂತೆ ಕುಳಿತಿದ್ದಾನೆ. ಯಮುನೆ ಒಂದು ಬಗೆಯಲ್ಲಿ ಅನಾಥವಾಗಿ ಬಿಟ್ಟಿದ್ದಾಳೆ.

ಉತ್ತರ ಭಾರತದಲ್ಲಿ ಇನ್ನೂ ಮಳೆಯ ರಭಸ ಪ್ರಾರಂಭವಾಗಿದ್ದರೂ, ದೇಶದ ಪೂರ್ವ ಭಾಗದಲ್ಲಿ, ನೆರೆ ಹಾವಳಿಯ ಸಮಸ್ಯೆಯನ್ನು ತಂದೊಡ್ಡುವಷ್ಟರ ಮಟ್ಟಿಗೆ ಮಳೆರಾಯ ಅಲ್ಲಿ ನರ್ತಿಸುತ್ತಿದ್ದಾನೆ. ಒಂದೆಡೆ ಮಳೆರಾಯನ ಕಿರಿಕಿರಿ, ಇನ್ನೊಂದೆಡೆ ಎರಡು ಸಮುದಾಯಗಳ ನಡುವೆ ಕಲಹ, ಹೀಗಾಗಿ ಪೂರ್ವ ಭಾಗದ ಅಸ್ಸಾಂನಲ್ಲಿ ಎಲ್ಲಿಲ್ಲದ ಸಮಸ್ಯೆ. ಇನ್ನೂ ಉತ್ತರಕ್ಕೆ ಹೋದರೆ, ಹಿಮಾಚಲ ಹಾಗೂ ಉತ್ತರಕಾಂಡಗಳಲ್ಲಿ ಮಳೆಗಾಲವೆಂದರೆ ಕಾಲ ಕೆಳಗಿನ ನೆಲ ಕುಸಿದಂತೆ, ಒಮ್ಮೊಮ್ಮೆ ಈ ಭಾಗಗಳಲ್ಲಿ ಪರ್ವತಗಳ ಸಾಲಿನಲ್ಲಿ ಬಿರುಕು, ಪರ್ವತದ ಒಂದು ಭಾಗವೇ ಜರಿದು ರಸ್ತೆ, ಮನೆಮಠಗಳನ್ನು ನೆಲಸಮ ಮಾಡುತ್ತದೆ. ಮಳೆ, ಹಿಮ, ನೆಲ, ಜಲ–ಇವೆಲ್ಲ ಅಲ್ಲಿನ ಪರಿಸರದ ಭಾಗಗಳು. ಮಳೆರಾಯ ಬರದಿದ್ದರೆ, ಸರಿಯಾಗಿ ಹಿಮ ಬೀಳದಿದ್ದರೆ, ಆಗಾಗ್ಗೆ ನೆಲ ಕುಸಿಯದಿದ್ದರೆ ಅಲ್ಲಿನ ಜನರ ಜೀವನವೇ ದುಸ್ತರವಾಗಿ ಬಿಡುತ್ತದೆ. ಇವೆಲ್ಲ ಪ್ರಕ್ರಿಯೆ ಇವತ್ತು ನಿನ್ನೆಯದೇ? ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ಪ್ರಕ್ರಿಯೆಯಲ್ಲಿ ತುಸು ಏರುಪೇರಾದರೂ ಜನರ ಬದುಕೇ ಕಷ್ಟಸಾಧ್ಯವಾಗಿ ಬಿಡುತ್ತದೆ.

ಮಲೆನಾಡಿನವರಿಗೆ ಮಳೆಯೆಂದರೆ ನಾಲ್ಕಾರು ಹನಿ ಮಳೆ ಬಂದರೆ ಸಾಕೇ? ಮಳೆ ಬಂದರೆ ಕಿತ್ತುಕೊಂಡು ಹೋಗುವ ತರದಲ್ಲಿ ಬರಬೇಕು. ಅಡಿಕೆ–ತೆಂಗಿನ ಮರಗಳು ಉರುಳಿ ಹೋದರೂ ಸರಿ. ದಡ ಮೀರಿ ನೀರು ಹರಿದು ಜಮೀನು–ಮನೆಗಳ ತುಂಬ ನೀರು ಆವರಿಸಿದರೂ ಸರಿ. ನಮಗೆ ಈ ಬಗೆಯ ಮಳೆಯೇ ಆಗಬೇಕು. ಎಲ್ಲಿ ಹೋದೆಯೊ ಮಳೆರಾಯ? ಬಾರೊ ಬಾರೋ ಮಳೆರಾಯ. ನಾವೆಲ್ಲ ಇನ್ನೂ ನಿನಗಾಗಿ, ನಿನ್ನ ಆಟಕ್ಕಾಗಿ ಕಾದಿದ್ದೆವಲ್ಲೋ?

❑ **ಡಾ. ವೆಂಕಟಾಚಲ ಹೆಗಡೆ**

## ದೆಹಲಿ ಕರ್ನಾಟಕ ಸಂಘ
## ಏಕಾಂಕ ನಾಟಕ ಸ್ಪರ್ಧೆ–2012

ಈ ಸಾಲಿನ ಏಕಾಂಕ ನಾಟಕ ಸ್ಪರ್ಧೆಯನ್ನು ಅಕ್ಟೋಬರ್ 12, 13 ಮತ್ತು 14, 2012ರಂದು ಆಯೋಜಿಸಿದ್ದು, ಆಸಕ್ತಿಯುಳ್ಳವರು ತಮ್ಮ ತಂಡದ ಹೆಸರನ್ನು ಸಂಪೂರ್ಣ ವಿವರಗಳೊಂದಿಗೆ ಸಂಘದ ಕಚೇರಿಯಲ್ಲಿ ಸೆಪ್ಟೆಂಬರ್ 30, 2012ರ ಸಾಯಂಕಾಲ 5 ಗಂಟೆಯ ಒಳಗಾಗಿ ನೊಂದಾಯಿಸಬೇಕಾಗಿ ವಿನಂತಿ.

ಸ್ಪರ್ಧೆಯಲ್ಲಿ ಪಾಲ್ಗೊಂಡ ತಂಡಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು.

ನಿಯಮಾವಳಿ ಹಾಗೂ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

**011–26109615 / 26104818**

## ಮುನ್ನೋಟ

ದೆಹಲಿಯಲ್ಲಿ ಈ ಬಾರಿ ಎಷ್ಟು ಬೇಸಿಗೆ ಇತ್ತು ಅಷ್ಟೇ ಮಳೆಯೂ ಆಗುತ್ತಿದೆ. ಸ್ವಲ್ಪ ಮಟ್ಟಿಗೆ ದೆಹಲಿಯಲ್ಲಿ ತಂಪಾದ ವಾತಾವರಣ, ಆದರೆ ಕರ್ನಾಟಕದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಮಳೆಗಾಗಿ ರೈತರು ಕಾಯುತ್ತಿದ್ದಾರೆ. ಸರ್ಕಾರವು ಮಳೆಗಾಗಿ ದೇವಾಲಯಗಳಲ್ಲಿ ಹವನ, ಪೂಜೆ–ಪುನಸ್ಕಾರಗಳನ್ನು ಮಾಡಿದರೂ ಸಹ ಮಳೆಯೇ ಅಗಿಲ್ಲ. ಆದಷ್ಟು ಬೇಗನೆ ಕರ್ನಾಟಕದಲ್ಲಿ ಮಳೆಯಾಗಿ ರೈತರ ಬೇಸಾಯಕ್ಕೆ ನೆರವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ.

ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಶುರುವಾಗಿವೆ. ದೆಹಲಿಯ ಕುಂದ ಕುಂದ ಭಾರತೀ ಜೈನ ಸಂಸ್ಥೆ ಹಂಪನಾ ಅವರು ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ್ದನ್ನು ಗಮನಿಸಿ ಅವರಿಗೆ 'ಚಾರಿತ್ರ ಚಕ್ರವರ್ತಿ' ಪುರಸ್ಕಾರ ನೀಡಿ ಗೌರವಿಸಿದೆ. ಈ ಪುರಸ್ಕಾರ ಒಂದು ಲಕ್ಷ ರೂ. ಹಾಗೂ ಪದಕವನ್ನು ಹೊಂದಿದೆ. ಈ ಪುರಸ್ಕಾರವನ್ನು ದೆಹಲಿಯ ತ್ಯಾಗರಾಜ ಸ್ಟೇಡಿಯಂನಲ್ಲಿ ದಿನಾಂಕ 29.7.2012ರಂದು ನೀಡಲಾಯಿತು. ಕುಂದ ಕುಂದ ಭಾರತೀಯ ಆಚಾರ್ಯ ವಿದ್ಯಾನಂದ ಮುನಿಗಳು ಕರ್ನಾಟಕದ, ಶೇಡಬಾಳದವರು. ಇದೇ ಸಮಯದಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ಅವರಿಗೆ ಸ್ವರ್ಣ ಕಿರೀಟವನ್ನು ತೊಡಿಸಿ ಗೌರವಿಸಲಾಯಿತು.

ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ನಾಡೋಜ ಹಂಪನಾ ಅವರು ಜೈನ ಸಾಹಿತ್ಯದಲ್ಲಿ ಅನನ್ಯತೆ ಎಂಬ ವಿಷಯವಾಗಿ ಮಾತನಾಡಿದರು. ಜೊತೆಗೆ ಪ್ರೊ. ಎಸ್.ಎಸ್. ಮೂರ್ತಿಯವರು ಸೇವಾ ನಿವೃತ್ತಿಯ ನಂತರ ತಾಯ್ನಾಡಿಗೆ ಮರಳುತ್ತಿರುವ ಸಂದರ್ಭದಲ್ಲಿ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು. ಹಾಗೆಯೇ ಶ್ರೀ ರಾಘವೇಂದ್ರ ಭಟ್ ಉಡುಪಿ ಅವರ ಎರಡು ಪುಸ್ತಕಗಳನ್ನು ನಾಡೋಜ ಕಮಲಾ ಹಂಪನಾ ಅವರು ಬಿಡುಗಡೆಗೊಳಿಸಿದರು. ಸಂಘದಲ್ಲಿ ಈಗ ಬರುವ ಮುಖ್ಯ ಕಾರ್ಯಕ್ರಮಗಳು ಯಮುನೆಯ ತಡಿಯಲ್ಲಿ ಕನ್ನಡ ನುಡಿ–ಸಾಂಸ್ಕೃತಿಕ ಮಾಲಿಕೆಯಲ್ಲಿ ಮೊದಲ ಕಾರ್ಯಕ್ರಮ ಶ್ರೀಮತಿ ಶುಭ ಧನಂಜಯ ತಂಡದಿಂದ ನೃತ್ಯ ರೂಪಕ 'ಬೆಳ್ಳಿ ಚುಕ್ಕಿ' ಕಿತ್ತೂರು ರಾಣಿ ಚೆನ್ನಮ್ಮ ಕಾರ್ಯಕ್ರಮ ದಿನಾಂಕ 11.8.2012ರ ಶನಿವಾರದಂದು ನಡೆಯಲಿದೆ. ದಯಮಾಡಿ ಎಲ್ಲ ಕನ್ನಡಿಗರು ಬನ್ನಿ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ.

❑ ಸಿ ಎಂ ನಾಗರಾಜ

# ನಿಮಗಿದು ತಿಳಿದಿರಲಿ

ಸಂಶೋಧನೆಯನ್ನು ತಮ್ಮ ವೃತ್ತಿಯಾಗಿಸಿಕೊಳ್ಳಬಯಸುವ ವಿಜ್ಞಾನ ವಿಷಯಗಳನ್ನು ಓದುತ್ತಿರುವ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಫೆಲೋಷಿಪ್ ಅನ್ನು "ಕಿಶೋರ ವೈಜ್ಞಾನಿಕ ಪ್ರೋತ್ಸಾಹನ ಯೋಜನೆ' *(KVPY)* ಅಡಿಯಲ್ಲಿ ನೀಡಲಾಗುತ್ತಿದೆ. ಭಾರತ ಸರ್ಕಾರದ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯವರು ಭಾರತೀಯ ವಿಜ್ಞಾನ ಸಂಸ್ಥೆ–ಬೆಂಗಳೂರು ಇವರ ಮುಖಾಂತರ ಕಿಶೋರ ವೈಜ್ಞಾನಿಕ ಪ್ರೋತ್ಸಾಹನ ಯೋಜನೆ ಫೆಲೋಷಿಪ್ ಅವಾರ್ಡ್–2012ನ್ನು 1ನೇ ಏಪ್ರಿಲ್/ 1ನೇ ಆಗಸ್ಟ್ 2012 ಕ್ಕೆ ಅನ್ವಯವಾಗುವಂತೆ ನೀಡಲು, ಶಾಲಾ–ಕಾಲೇಜುಗಳಲ್ಲಿನ ವಿಜ್ಞಾನ ವಿಷಯಗಳಲ್ಲಿ ಅಂದರೆ *Basic Science* ನಲ್ಲಿ ಸಂಶೋಧನೆಯನ್ನು ತಮ್ಮ ವೃತ್ತಿಯನ್ನಾಗಿಸಿಕೊಳ್ಳ ಬಯಸುವ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಆಕರ್ಷಕ ಫೆಲೋಷಿಪ್ (24000 ದಿಂದ 27000 ಪ್ರತಿ ತಿಂಗಳು) ಹಾಗೂ ಕಂಟಿಜೆನ್ಸಿ ಗ್ರ್ಯಾಂಟ್ಸ್ (ನಾಲ್ಕು ತಿಂಗಳ ಫೆಲೋಷಿಪ್‌ಗೆ ಸಮನಾದಷ್ಟು ಹಣ ಪ್ರತಿ ವರ್ಷ) 11ನೇ ತರಗತಿಯಿಂದ ಪ್ರಥಮ ವರ್ಷದ ಬಿ.ಎಸ್.ಸಿ. / ಬಿ.ಎಸ್/ ಇಂಟಿಗ್ರೇಟೆಡ್ ಎಂ.ಎಸ್ಸಿ. / ಎಂ.ಎಸ್. / ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಾಮಾನ್ಯ ವಿಜ್ಞಾನಗಳಲ್ಲಿನ ಸಂಶೋಧನೆ ಒತ್ತು ನೀಡಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಈ ಯೋಜನೆಯನ್ನು ಜಾರಿಗೆ ತಂದಿದೆ.

**ಅರ್ಹತೆಗಳು – ಸಾಮಾನ್ಯ ವಿಜ್ಞಾನ**

**ಸ್ಟ್ರೀಮ್ SA** : 2012–13ನೇ ಶೈಕ್ಷಣಿಕ ವರ್ಷದಲ್ಲಿ 11ನೇ ತರಗತಿಯಲ್ಲಿ (ವಿಜ್ಞಾನ) ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಯಾರು 80% *(70% SC / ST)* ಅಂಕಗಳನ್ನು 10ನೇ ತರಗತಿಯಲ್ಲಿ ವಿಜ್ಞಾನ ಮತ್ತು ಗಣಿತಗಳಲ್ಲಿ ಪಡೆದಿರುತ್ತಾರೋ ಅವರು ಅರ್ಹರು.

**ಸ್ಟ್ರೀಮ್ SX** : 2012–13ನೇ ಸಾಲಿನ 12ನೇ ತರಗತಿಯಲ್ಲಿ ಪ್ರವೇಶ ಪಡೆದಿದ್ದು ವಿಜ್ಞಾನದ ಸ್ನಾತಕ (ಬಿ.ಎಸ್ಸಿ. / ಬಿ.ಎಸ್ / ಇಂಟಿಗ್ರೇಟೆಡ್ ಎಂ.ಎಸ್ಸಿ / ಎಂ. ಎಸ್.) 2013–14 ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯಲು ಇಚ್ಛಿಸಿದ್ದು ಯಾರು ವಿಜ್ಞಾನ ಹಾಗೂ ಗಣಿತ ವಿಷಯಗಳಲ್ಲಿ 80% *(70% SC / ST)* ಅಂಕಗಳನ್ನು 10ನೇ ತರಗತಿಯಲ್ಲಿ ಪಡೆದಿರುತ್ತಾರೋ ಅವರು ಅರ್ಜಿ ಸಲ್ಲಿಸಲು ಅರ್ಹರು.

**ಸ್ಟ್ರೀಮ್ SB** : 2012–13ರ ಶೈಕ್ಷಣಿಕ ವರ್ಷದಲ್ಲಿ ಮೊದಲ ವರ್ಷದ ಬಿ.ಎಸ್ಸಿ / ಬಿ.ಎಸ್/ ಇಂಟಿಗ್ರೇಟೆಡ್ ಎಂ.ಎಸ್ಸಿ.,/ಎಂ.ಎಸ್ ಪ್ರವೇಶ ಪಡೆದಿದ್ದು 12ನೇ ತರಗತಿಯ ವಿಜ್ಞಾನ ವಿಷಯಗಳಲ್ಲಿ ಯಾರೂ 60% *(50% SC / ST)* ಅಂಕಗಳನ್ನು ಪಡೆದಿದ್ದಾರೋ ಅವರು ಅರ್ಹರು.

**ಅರ್ಜಿ ಸಲ್ಲಿಸಲು ಸಾಮಾನ್ಯ ಮಾಹಿತಿಗಳು**

- ಪ್ರತಿಯೊಂದು ಸ್ಟ್ರೀಮಗೆ ಪ್ರತ್ಯೇಕ ಅರ್ಜಿ ಫಾರಂಗಳಿವೆ.
- ವಿದ್ಯಾರ್ಥಿಗಳು ಹಾರ್ಡ್‌ಕಾಪಿ ಅಥವಾ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ಗಾಗಿ *(http;//www.kvpy.org.in)* ಗೆ *log on* ಮಾಡಬಹುದು.
- ಅರ್ಜಿಗಳನ್ನು *kvpy website* ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಅರ್ಜಿ ಶುಲ್ಕ : ರೂ. 200 ಕೋರ್ ಬ್ಯಾಂಕಿಂಗ್ ಸಿಸ್ಟಮ್‌ವುಳ್ಳ ಭಾರತೀಯ ಸ್ಟೇಟ್‌ಬ್ಯಾಂಕಿನ "ಕಿಶೋರ್ ವೈಜ್ಞಾನಿಕ ಪ್ರೋತ್ಸಾಹನ ಯೋಜನೆ *(KVPY) A/c No* –10270577392" ಗೆ ಸಲ್ಲಿಸಬಹುದು.
- ಅರ್ಜಿಗಳನ್ನು ಸಂಚಾಲಕರು, ಕಿಶೋರ್ ವೈಜ್ಞಾನಿಕ ಪ್ರೋತ್ಸಾಹನ ಯೋಜನೆ *(KVPY)*

ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು–560012 ಇವರಿಗೆ ಕಳುಹಿಸಬಹುದು. *Phone* : 080–22932975/76, 23601008.

ನೆನಪಿನಲ್ಲಿಡಬೇಕಾದ ದಿನಾಂಕಗಳು.

1. ಅರ್ಜಿ ಫಾರಂಗಾಗಿ ವಿನಂತಿಸಿಕೊಳ್ಳಲು ಕೊನೆಯ ದಿನಾಂಕ ಅಂಚೆ ಮೂಲಕ–3ನೇ ಸೆಪ್ಟೆಂಬರ್ 2012, ವೈಯಕ್ತಿಕವಾಗಿ–7ನೇ ಸೆಪ್ಟೆಂಬರ್ 2012
2. *Online* ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 7ನೇ ಸೆಪ್ಟೆಂಬರ್ 2012
3. ಎಲ್ಲ ರೀತಿಯಿಂದ ಭರ್ತಿಯಾದ ಅರ್ಜಿ / *Online* ಮೂಲಕ / ಹಾರ್ಡ್ ಕಾಪಿ ಕಳಿಸುವ ಕೊನೆಯ ದಿನಾಂಕ : 12ನೇ ಸೆಪ್ಟೆಂಬರ್ 2012.
4. ಅಪ್ಟಿಟ್ಯೂಡ್ ಪರೀಕ್ಷೆಯನ್ನು ರವಿವಾರ ದಿನಾಂಕ 4ನೇ ನವೆಂಬರ್ 2012 ವಿವಿಧ ಕೇಂದ್ರಗಳಲ್ಲಿ ನಡೆಸಲಾಗುವುದು.

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ** : *http://www.kvpy.org.in.*

❑ ಭಂಡಾರಕರ್ ಎಸ್.ಎಲ್.

# ದಾಸ ಸಾಹಿತ್ಯದಲ್ಲಿ – ಸುಳಾದಿ




ಹರಿದಾಸ ಪಂಥದ ಪ್ರಮುಖರಲ್ಲೊಬ್ಬರಾದ ವಿಜಯದಾಸರು 1683ರಲ್ಲಿ ರಾಯಚೂರಿನ ಚೀಕಲಪರವಿಯಲ್ಲಿ ಜನಿಸಿ ಮುಂದೆ ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸರು ಇವರಿಗೆ ಹರಿದಾಸ ದೀಕ್ಷೆಯನ್ನಿತ್ತು, ವಿಜಯವಿಠಲ ಎಂಬ ಅಂಕಿತವನ್ನು ಕೊಟ್ಟರೆಂದು ಹೇಳಲಾಗುತ್ತದೆ. ಸುಮಾರು 25,000 ಸುಳಾದಿಗಳು, ಉಗಾಭೋಗಗಳನ್ನು ವಿಜಯದಾಸರು ರಚಿಸಿದ್ದಾರೆ. ಈಗ ಲಭ್ಯವಿದ್ದುದು ಕೇವಲ 500 ಸುಳಾದಿಗಳು. ಸುಳಾದಿ – ಎಂದರೆ ಭಗವಂತನ ಸುಳುಹು ತೋರುವ ಹಾದಿ ಎಂದು ಶ್ರೀ ಜಗನ್ನಾಥ ದಾಸರು ಜುಲೈ 22 ರಂದು ದೆಹಲಿ ಕರ್ನಾಟಕ ಸಂಘದ 'ದಾಸ ಸಾಹಿತ್ಯದಲ್ಲಿ ಸುಳಾದಿ' ಕಾರ್ಯಕ್ರಮದಲ್ಲಿ ವಿವರಿಸಿದರು. ರಾಯಚೂರು ಜಿಲ್ಲೆಯ ಮಾನವಿಕ್ಷೇತ್ರದ ಸುಳಾದಿ ಪ್ರಚಾರ ಕೇಂದ್ರದ ಸದಸ್ಯರಾಗಿರುವ ಇವರು ವಿಜಯದಾಸರ ವಂಶಜರೆಂಬ ಹೆಗ್ಗಳಿಕೆಯುಳ್ಳವರು. ಶ್ರೀ ಜಗನ್ನಾಥ ದಾಸರು ನಿವೃತ್ತ ಬ್ಯಾಂಕ್ ಅಧಿಕಾರಿಯಾಗಿದ್ದು ರಾಯಚೂರು ಜಿಲ್ಲೆಯ 'ಲೀಡ್ ಬ್ಯಾಂಕ್ ಮ್ಯಾನೇಜರ್' ಎಂಬ ಪದವಿ ಪಡೆದವರು. ತಮ್ಮ ಮನೆತನದ ಉತ್ಕಟ ಭಕ್ತಿಪ್ರೇಮ ಹಾಗೂ ದಾಸ ದೀಕ್ಷೆಗೆ ಬದ್ಧರಾಗಿ ತಮ್ಮ ತಂದೆ ಹಾಗೂ ಹಿರಿಯರಿಂದ ಅನೂಚಾನವಾಗಿ ಬಂದ 'ಶ್ರೀ ವಿಜಯದಾಸರ ಸುಳಾದಿ'ಗಳ ಪಾರಾಯಣ ಅನುಷ್ಠಾನ, ಆಚರಣೆಗಳನ್ನು ಮಾಡುತ್ತ ದೇಶದ ರಾಜಧಾನಿಯ ಕನ್ನಡಿಗರಿಗೂ ಸುಳಾದಿಗಳ ಸವಿಯುಣಿಸಿದ್ದು ಒಂದು ಅಪೂರ್ವ ಸಂಜೆಯೆನ್ನಬಹುದು. ಅವರೊಂದಿಗೆ ಶ್ರೀ ನರಸಿಂಹಾಚಾರ್ಯ ಆಶ್ರೀತ ಹಾಗೂ ಅವರ ಪತ್ನಿ ತ್ರಿವೇಣಿಬಾಯಿ ಹಾಗೂ ಪುತ್ರ ಪ್ರಾಣೇಶ್ ಆಶ್ರೀತ್ ಅವರೂ ಆಗಮಿಸಿದ್ದರು.

ಭಕ್ತಿ ಚಳುವಳಿಯ ಎರಡು ಮುಖ್ಯ ಧಾರೆಗಳೆಂದರೆ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ. ವಚನ ಸಾಹಿತ್ಯ ಸಾಮಾಜಿಕ ಕಳಕಳಿಯ ಕುರಿತು ಜನರಲ್ಲಿ ಅರಿವು ಮೂಡಿಸಿದರೆ ದಾಸ ಸಾಹಿತ್ಯದ ಪುರಂದರದಾಸ, ಕನಕದಾಸ, ಜಗನ್ನಾಥ ದಾಸರು, ವಿಜಯದಾಸರು ಮುಂತಾದ ದಾಸರು ಐಹಿಕ ಉಪಭೋಗಗಳನ್ನು ನಿರಾಕರಿಸುತ್ತ ಭಕ್ತಿಮಾರ್ಗವನ್ನು ಬೋಧಿಸಿದರು.

ದೆಹಲಿಯಲ್ಲಿ ಮೂರುದಶಕಗಳಿಂದ ವಾಸಿಸುತ್ತಿರುವ ನೀಲಾ ಅವರು ಸಂಗೀತ ಮತ್ತು ಸಂಸ್ಕೃತಿಯನ್ನು ಉಳಿಸುವಲ್ಲಿ ಅಪಾರ ಆಸಕ್ತಿಯುಳ್ಳ ಅಪ್ಪಟ ಕನ್ನಡಾಭಿಮಾನಿ. ದಾಸ ಸಾಹಿತ್ಯವೆಂಬುದು ಅಮೂಲ್ಯವಾದ ಜ್ಞಾನವೆಂಬ ತಿಳುವಳಿಕೆಯಿಂದ ದಾಸ ಪರಂಪರೆಯ ಸುಳಾದಿ ದಾಸರನ್ನು ದೆಹಲಿಗೆ ಕರೆಸಿ ಹಾಡಿಸಿ ಧ್ವನಿಸುರುಳಿಯ ಸಿ.ಡಿ. ಯನ್ನು ಹೊರತರುವ ಸತ್ಕಾರ್ಯವನ್ನು ಮಾಡುತ್ತಿದ್ದಾರೆ. ಕಾರ್ಯಕ್ರಮದ ಮೊದಲಿಗೆ ನೀಲಾ ಸುಳಾದಿದಾಸರನ್ನು ಎಲ್ಲರಿಗೂ ಪರಿಚಯಿಸಿದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಬಿ.ಕೆ ಬಸವರಾಜು ಹಾಗೂ ಖಜಾಂಚಿ ರಾಮಮೂರ್ತಿ ಅವರು ದಾಸರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು.

ವಿಜಯದಾಸರನ್ನು ಸುಳಾದಿಗಳ ದಾಸರೆಂದೇ ಕರೆಯುತ್ತಾರೆ ಎಂದು ಸುಳಾದಿಗಳ ಬಗ್ಗೆ, ತಾಳಗಳ ಬಗ್ಗೆ ವಿವರಿಸಿದ ಜಗನ್ನಾಥ ದಾಸರು ಪ್ರಾರ್ಥನೆ ಮತ್ತು ನರಸಿಂಹದೇವರ ಸ್ತೋತ್ರ ಸುಳಾದಿಗಳನ್ನು ಹಾಡಿದರು. ತ್ರಿವೇಣಿಬಾಯಿಯವರು ಹಂಪಿ ಕ್ಷೇತ್ರದ ವಿರೂಪಾಕ್ಷದೇವರ ವರ್ಣನೆ, ಪುರಂದರದಾಸರ ಮಂಟಪ, ವ್ಯಾಸರಾಯರ ಕೀರ್ತಿ, ಕೃಷ್ಣದೇವರಾಯನ ಕಾಲದ ವೈಭವವನ್ನು ವರ್ಣಿಸುತ್ತ ವಿಷ್ಣು ಪತ್ನಿ ಸಮೇತನಾಗಿ ಭೂಲೋಕದಲ್ಲಿ ವಾಸಿಸಿದ ಕತೆಯೊಂದನ್ನು ಸ್ವಾರಸ್ಯಕರವಾಗಿ ಹೇಳಿದರು. ನಂತರ ನರಸಿಂಹಾಚಾರ್ಯ ಹಾಗೂ ಪ್ರಾಣೇಶ್ ಆಶ್ರೀತ್ ಅವರೂ ಕೆಲ ಸುಳಾದಿಗಳನ್ನು ಭಾವಪೂರ್ಣವಾಗಿ ಹಾಡಿದರು.

ಆಕಾಶವಾಣಿಯ ವರಿಷ್ಠ ಅಧಿಕಾರಿ ಹಾಗೂ ಸ್ವತಃ ಸಂಗೀತ ವಿದ್ವಾಂಸರೂ ಆದ ಡಾ.ಕೆ. ವಾಗೀಶ್ ದಂಪತಿ ಮತ್ತು ಕೇಂದ್ರ ಸರ್ಕಾರದ ನಿವೃತ್ತ ಅಧಿಕಾರಿ, ಪ್ರಸ್ತುತ ಮಂತ್ರಾಲಯದಲ್ಲಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಪತಿಯಾಗಿರುವ ಡಾ. ಪಂಚಮುಖಿ ದಂಪತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಹಾಗೂ ಇಡೀ ವಾತಾವರಣ ಆಧ್ಯಾತ್ಮಿಕ ಚಿಂತನೆಯಲ್ಲಿ ತಲ್ಲೀನವಾಗಿದ್ದು ಇನ್ನೂ ಕಳೆಕಟ್ಟಿದಂತಾಗಿತ್ತು. ದೆಹಲಿಯ ರಾಘವೇಂದ್ರ ಮಠದ ಆಚಾರ್ಯ ಕುಟುಂಬಗಳೂ, ಸಫ್ದರ್‌ಜಂಗ್‌ನ ಕೃಷ್ಣಮಠದ ನಾರಾಯಣಾಚಾರ್ಯರೂ ಕುಟುಂಬ ಸಹಿತ ಸುಳಾದಿ ಶ್ರವಣಕ್ಕೆ ಬಂದಿದ್ದು ವಿಶೇಷವಾಗಿತ್ತು.

ಪಂಚಮುಖಿ ಅವರು ಈಗಿನ ಜಾಗತೀಕರಣದ ಯುಗದಲ್ಲಿ ಜನರಲ್ಲಿ ಆಧ್ಯಾತ್ಮಿಕ ಚಿಂತನೆ, ಭಕ್ತಿ ಪ್ರವೃತ್ತಿ ಇಲ್ಲವಾಗುತ್ತಿದೆಯೆಂಬ ಮಾತನ್ನು ಹೇಳಿದರು. ಹಳೇ ಸಂಪ್ರದಾಯ, ಸಂಸ್ಕೃತಿ ಕಳೆದುಹೋಗುತ್ತಿರುವ ಕಾಲದಲ್ಲಿ ಇಂಥ ಆಧ್ಯಾತ್ಮಿಕ ಅನುಷ್ಠಾನ ಪಾರಾಯಣಗಳು ನಡೆಯುತ್ತಿರಬೇಕು, ಮತ್ತೆ ಮತ್ತೆ ಕೇಳುತ್ತಿರಬೇಕು ಎಂದು ಅಭಿಪ್ರಾಯಪಟ್ಟರು. ಮಂತ್ರಾಲಯ, ಹಂಪಿ ಕ್ಷೇತ್ರದಂಥ ಅನೇಕ ಪ್ರಾಚೀನ ಐತಿಹ್ಯದ ಪುಣ್ಯಸ್ಥಳಗಳು ಸಂರಕ್ಷಣೆಯಿಲ್ಲದೇ ವಿನಾಶದತ್ತ ಸಾಗುತ್ತಿವೆಂದು ವಿಷಾದಪಟ್ಟ ಅವರು ಈ ಬಗ್ಗೆ ಕರ್ನಾಟಕ ಸರ್ಕಾರವೂ ಗಮನ ಹರಿಸುವ ಅಗತ್ಯವಿದೆಯೆಂಬ ಮಾತನ್ನು ಹೇಳಿದರು. ವಾಗೀಶ್ ಅವರು ರಾಷ್ಟ್ರದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘ ಇಂಥ ಕಾರ್ಯಕ್ರಮವೊಂದನ್ನು ನಡೆಸಲು ಅವಕಾಶ ನೀಡಿದ್ದನ್ನು ಶ್ಲಾಘಿಸಿ ಹೊಸ ಹೊಸ ಮಾಹಿತಿ, ಕಾರ್ಯಕ್ರಮಗಳ ವಿವರಗಳನ್ನು ತಿಳಿಸುವ ಸಂಘದ 'ಮುಖವಾಣಿ' ಅಭಿಮತವನ್ನು ಪ್ರತಿತಿಂಗಳೂ ತಾವು ಎದುರುನೋಡುತ್ತೇವೆ ಎಂದು ಅಭಿಮಾನದಿಂದ ನುಡಿದರು. ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಡಾ. ವಾಗೀಶ್ ಮತ್ತು ಶ್ರೀ ಪಂಚಮುಖಿ ಅವರಿಗೂ ಹೂಗುಚ್ಛ ನೀಡಿ ಗೌರವಿಸಿದರು ಮತ್ತು ಅತಿ ಮಧುರವಾಗಿ ಸುಳಾದಿಗಳನ್ನು ಹಾಡಿದ ದಾಸವರೇಣ್ಯರಿಗೂ ಅಭಿನಂದಿಸಿದರು. ಖಜಾಂಚಿ ಕೆ.ಆರ್. ರಾಮಮೂರ್ತಿ ವಂದಿಸಿದರು, ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಕಾರ್ಯಕ್ರಮವನ್ನು ನಿರ್ವಹಿಸಿದರು.



ಚಲನಚಿತ್ರ ನಟಿ 'ಭಾಗೀರಥಿ' ಖ್ಯಾತಿಯ ಭಾವನಾ ಜುಲೈ 25ರಂದು ಸಂಘಕ್ಕೆ ಭೇಟಿ ನೀಡಿದ್ದರು. ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಪುಷ್ಪಗುಚ್ಛ ನೀಡಿ ಭಾವನಾ ಅವರನ್ನು ಅಭಿನಂದಿಸಿದರು

# ಉಭಯಗಾನ ವಿದುಷಿ – ಶ್ಯಾಮಲಾ ಭಾವೆಯೊಂದಿಗೆ ಒಂದು ಸಂಜೆ



ಸಂಗೀತವೆಂದರೆ ವಚನ ಗಾಯನ, ದೇವರ ನಾಮ, ಅಷ್ಟಪದಿಗಳು ಇವಿಷ್ಟೇ ಅನ್ನುವಕಾಲದಲ್ಲಿ ಮೊಟ್ಟ ಮೊದಲು ಭಾವಗೀತೆಗೆ ಬುನಾದಿ ಹಾಕಿದವರು ಆಗಿನ ಕಾಳಿಂಗ್ ರಾವ್, ಬಾಳಪ್ಪ ಹುಕ್ಕೇರಿ ಮತ್ತು ಶ್ಯಾಮಲಾ ಭಾವೆ ಅವರು. ಕಲಾವಿದರು ಸಾರ್ಥಕವಾಗಿ ಬದುಕುವುದು ಲೋಕಾಶ್ರಯದಲ್ಲಿ ಎಂದು ಜುಲೈ 26, ಗುರುವಾರ ದೆಹಲಿ ಕರ್ನಾಟಕ ಸಂಘದ ಒಂದು ಮುಸ್ಸಂಜೆಯ ಸಂಗೀತ ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿದ್ದ ಉಭಯಗಾನ ವಿದುಷಿ ಡಾ. ಶ್ಯಾಮಲಾ ಭಾವೆ ಅವರು ತಮ್ಮ ನಾದಮಯ ಬದುಕಿನ ಕ್ಷಣಗಳನ್ನು ಮೆಲುಕು ಹಾಕಿದರು. ಆಕಾಶವಾಣಿಯ ವರಿಷ್ಠ ಅಧಿಕಾರಿ, ಸಂಗೀತಗಾರರಾದ ಡಾ. ವಾಗೀಶ್ ಅವರು ಶ್ಯಾಮಲಾ ಅವರನ್ನು ಪರಿಚಯಿಸುತ್ತ "ಸಂಗೀತಕ್ಕೆ ತನ್ನನ್ನೇ ತಾನು ಮುಡಿಪಾಗಿಟ್ಟುಕೊಂಡ ಜೀವ. ಹಳ್ಳಿ ಹಳ್ಳಿಗಳಿಗೆ ಪ್ರತಿಭೆಯನ್ನು ಅರಸಿಕೊಂಡು ಹೋಗಿ 'ಉತ್ಸವ ಗಾನ ಸೌರಭ' ಎಂಬ ಕಾರ್ಯಕ್ರಮವನ್ನು ಆಯೋಜಿಸಿ, ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತಾರೆ. ಅವರ ಸಂಗೀತ ಗರಡಿಯಲ್ಲಿ ಅನೇಕ ಶ್ರೇಷ್ಠ ಸಂಗೀತಗಾರರನ್ನು ಪಳಗಿಸಿ ಬೆಳೆಸಿದ್ದಾರೆ" ಎಂಬುದಾಗಿ ಹಂಚಿಕೊಂಡ ವಾಗೀಶ್ ಅವರು ಶ್ಯಾಮಲಾ ಅವರ ಹೋರಾಟಮಯ ಬದುಕು, ಸರಸ ವಿನೋದ ಪ್ರವೃತ್ತಿಯನ್ನು ಮನಸಾರೆ ನೆನೆದರು.

1930ರಲ್ಲಿ ಬೆಂಗಳೂರಿನಲ್ಲಿ ಪ್ರಪ್ರಥಮ ಹಿಂದುಸ್ಥಾನಿ ಸಂಗೀತ ಶಾಲೆ ಸರಸ್ವತಿ ಸಂಗೀತ ವಿದ್ಯಾಲಯವನ್ನು ಸ್ಥಾಪಿಸಿದವರು ಶ್ಯಾಮಲಾ ಅವರ ತಂದೆ ಗೋವಿಂದ ವಿಠಲ ಭಾವೆಯವರು. ಅದನ್ನು ಸಮರ್ಥವಾಗಿ ಮುನ್ನಡೆಸುತ್ತ, ಸಹಸ್ರಾರು ಆಸಕ್ತರಿಗೆ ಸಂಗೀತ ಶಿಕ್ಷಣ ನೀಡುತ್ತಿರುವ ಶ್ಯಾಮಲಾ ಅವರು ವಿವಿಧ ದೇಶಗಳಲ್ಲಿ ಸಂಗೀತ ಕಛೇರಿ ನೀಡಿ ಭಾರತೀಯ ಸಂಗೀತಕ್ಕೆ ರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿದ್ದಾರೆ. ಪಂ. ಜಸರಾಜ್ ಅವರ ಮಾರ್ಗದರ್ಶನದಲ್ಲಿ ಸಂಗೀತ ತಾಲೀಮು ಪಡೆದ ಅವರು ಅನೇಕ ಚಲನಚಿತ್ರ, ಸಾಕ್ಷಚಿತ್ರ, ಗ್ರಾಮಫೋನ್ ಹಾಗೂ ಕ್ಯಾಸೆಟ್‌ಗಳಲ್ಲಿ ಧ್ವನಿ ನೀಡಿ, ಸಂಗೀತ ನಿರ್ದೇಶನ ಮಾಡಿದ್ದಾರೆ. ಒಂಭತ್ತು ಭಾಷೆಗಳ ಸುಮಾರು 1300ಕ್ಕೂ ಹೆಚ್ಚಿನ ಗೀತೆಗಳಿಗೆ ರಾಗ ಸಂಯೋಜಿಸಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ, ಅಕಾಡೆಮಿಯ ಅಧ್ಯಕ್ಷರಾಗಿ ಸಂಗೀತ ಕ್ಷೇತ್ರದ ಸೇವೆ ಮಾಡಿದ್ದಾರೆ. 1997ರಲ್ಲಿ ಅವರ ಶಿಷ್ಯರು, ಅಭಿಮಾನಿಗಳು ಅವರ ಸುವರ್ಣ ಮಹೋತ್ಸವ ಆಚರಿಸಿ 'ಸ್ವರ ಸಾಧನಾ' ಎಂಬ ಅಭಿನಂದನ ಗ್ರಂಥ ಅರ್ಪಿಸಿದ್ದಾರೆ. ಅವರಿಗೆ, ಉಭಯಗಾನ ವಿಶಾರದೆ, ಉಭಯ ಗಾನ ವಿದುಷಿ, ಕರ್ನಾಟಕ ರಾಜ್ಯೋತ್ಸವ, ಗಾನ ಮಾಧುರಿ, ಸುರಮಣಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾ ತಿಲಕ, ಅಮೇರಿಕಾದ ಹ್ಯೂಸ್ಟನ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (2007), ಭಾರತ ಗೌರವ್, 'ವರ್ಷದ ಮಹಿಳೆ' (1997), ಗಾನ ಕೋಕಿಲ, ಕೃಷ್ಣಗಾನ ಮಾಧುರಿ ಮುಂತಾದ ಪ್ರಶಸ್ತಿ ಪುರಸ್ಕಾರ ದೊರೆತಿವೆ.

ಸಂಗೀತದ ಹೊಸ ಹೊಸ ರಾಗಗಳ ಸಂಯೋಜನೆಯಲ್ಲಿ, ನೂರಾರು ಕಾರ್ಯಕ್ರಮಗಳ ಆಯೋಜನೆಯಲ್ಲಿ ಸದಾ ಬಿಜಿಯಾಗಿರುವ ಅವರಿಗೆ 73 ವಯಸ್ಸಾಗಿದ್ದರೂ 37 ರ ಹರಯದ ಲವಲವಿಕೆ, ಚೆಲುವು ಸೂಸುವ ವ್ಯಕ್ತಿತ್ವ. ಅವರ ಕುಟುಂಬಕ್ಕೆ ತುಂಬಾ ಹತ್ತಿರವಾಗಿದ್ದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಶ್ಯಾಮಲಾ ಭಾವೆ ಅವರಿಗೆ 'ಉಭಯಗಾನ ವಿದುಷಿ'ಯೆಂಬ ಬಿರುದನ್ನಿತ್ತು, ಮುಂದೆ ಹತ್ತು ಹಲವು ಬಿರುದುಗಳು ನಿನ್ನನ್ನು ಅರಸಿ ಬಂದರೂ ಇದನ್ನೇ ಕಾಪಿಟ್ಟುಕೋ ಎಂದಿದ್ದರಂತೆ. ಅದೇ ಪ್ರಕಾರ ಶ್ಯಾಮಲಾ ಭಾವೆ ಅವರಿಗೆ ಲೆಕ್ಕವಿಲ್ಲದ ಬಿರುದುಗಳು, ಪ್ರಶಸ್ತಿಗಳು ದೊರೆತಿದ್ದರೂ ಅವರು 'ಉಭಯಗಾನ ವಿದುಷಿ'ಎಂಬ ಬಿರುದನ್ನೇ ಕಾಯಂ ಆಗಿ ಉಳಿಸಿಕೊಂಡಿದ್ದಾರೆ. ಅವರು ತಮ್ಮ ಹನ್ನೆರಡನೇ ವಯಸ್ಸಿಗೇ ಮೊದಲ ಕಛೇರಿ ನೀಡಿದ್ದರಂತೆ ಮತ್ತು ಅಂದಿನ ಭಾರತದ ಮೊದಲನೆಯ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರೆದುರು ರಾಷ್ಟ್ರಗೀತೆಯನ್ನು ಹಾಡುವ ಸಂದರ್ಭ ಬಂದಾಗ ಶ್ಯಾಮಲಾ ಅವರ ದನಿಯ ಮಾಧುರ್ಯಕ್ಕೆ ಮನಸೋತ ರಾಜೇಂದ್ರ ಪ್ರಸಾದ್ ಅವರು ಅವರಿಗೆ ನಿಗದಿತ ಸಮಯಕ್ಕಿಂತ ಹೆಚ್ಚು ಹಾಡಲು ಸಮಯ ನೀಡಿದ್ದರಂತೆ ಎಂದು ಶ್ಯಾಮಲಾ ಅವರು ಆ ಘಟನೆಯನ್ನು ಅಭಿಮಾನದಿಂದ ನೆನೆದರು.

ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು ಮತ್ತು ಆಕಾಶವಾಣಿಯ ವರಿಷ್ಠ ಅಧಿಕಾರಿ ವಾಗೀಶ್ ಅವರು ಸಂಘದ ಪರವಾಗಿ ಸ್ಮರಣಿಕೆ ನೀಡಿ ಗೌರವಿಸಿದರು. ಸಂಗೀತಾಭಿಮಾನಿಗಳ ಕೋರಿಕೆಯ ಮೇರೆಗೆ ಶ್ಯಾಮಲಾ ಭಾವೆ ಅವರು ದೇವರನಾಮ 'ತೀರ್ಥ ವಿಠಲ, ಕ್ಷೇತ್ರ ವಿಠಲ' ಹಾಡಿದರೆ, ವಾಗೀಶ್ ಅವರು 'ನಿನ್ನ ನಾಮದ ಸ್ಮರಣೆಯಾ' ಮತ್ತು 'ಭಾಗ್ಯದ ಲಕ್ಷ್ಮೀ ಬಾರಮ್ಮ' ಹಾಡಿದರು. ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಕಾರ್ಯಕ್ರಮವನ್ನು ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘ ಮತ್ತು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಉಭಯಗಾನ ವಿದುಷಿ ಶ್ಯಾಮಲಾ ಭಾವೆ ಅವರಿಗೆ ಬೇಗನೇ ಪದ್ಮಶ್ರೀ, ಪದ್ಮಭೂಷಣ, ಪ್ರಶಸ್ತಿ ದೊರೆಯುವಂತಾಗಲಿ, ಕರ್ನಾಟಕ ಸರ್ಕಾರದ ಚಿತ್ತ ಇಂಥ ಎಲೆಯಮರೆಯ ಕಾಯಾಗಿ ಉಳಿದು ಹೋಗಿರುವ ಕಲಾವಿದರತ್ತ ಹರಿಯಲಿ ಎಂದು ಹಾರೈಸುತ್ತೇವೆ.

❑ **ಅಭಿಮತ ವರದಿ**

**ಜನಕಪುರಿ ಕನ್ನಡ ಕೂಟ ಮತ್ತು ದೆಹಲಿ ಮಿತ್ರ ಜಂಟಿಯಾಗಿ ಆಯೋಜಿಸುವ ಕಾರ್ಯಕ್ರಮ "ಸಾಂಸ್ಕೃತಿಕ ಸಮಾಗಮ" ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಗಸ್ಟ್ 19, 2012ರಂದು ಸಂಜೆ 5 ಗಂಟೆಗೆ ನಡೆಯಲಿದೆ. ದೆಹಲಿಯ ಕನ್ನಡಿಗರೆಲ್ಲರಿಗೂ ಆದರದ ಸ್ವಾಗತ. ಕಾರ್ಯಕ್ರಮದ ನಂತರ ಊಟದ ವ್ಯವಸ್ಥೆ ಇದೆ.**

# ದೆಹಲಿಯಲ್ಲಿ ಸ್ಮಿತಾ ಬೆಳ್ಳೂರ್ ಕಂಠದಿಂದ ಹರಿದ 'ಅಕ್ಕ'ನ ವಚನಧಾರೆ




12ನೇ ಶತಮಾನದ ದಾರ್ಶನಿಕ, ಮಹಾನ್ ಶಿವಶರಣೆ, ಅಕ್ಕಮಹಾದೇವಿ ಕುರಿತ ವಿಶೇಷ ಕಾರ್ಯಕ್ರಮವೊಂದನ್ನು 'ದೆಹಲಿ ಮಿತ್ರ' ಸಂಘಟನೆಯು ಜೂನ್ 8, 2012ರಂದು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಆಯೋಜಿಸಿತ್ತು.

ಕಾರ್ಯಕ್ರಮದ ಮೊದಲಿಗೆ ದೆಹಲಿಯ ಕನ್ನಡತಿ, ನೃತ್ಯಪಟು, ಶ್ರೀಮತಿ ಶಾಲಿನಿ ಮತ್ತು ಶ್ರೀ ಪ್ರಶಾಂತ್ ಅವರ ಮಗಳಾದ ನವ್ಯಶ್ರೀ ಭಟ್ ಅವರಿಂದ ಸುಂದರ ಗಣೇಶ ಸ್ತುತಿಯ ನೃತ್ಯ ನಡೆಯಿತು.

ನಂತರದಲ್ಲಿ ಆರಂಭಗೊಂಡ ಸ್ಮಿತಾ ಅವರ ಗಾಯನಗಂಗೆ ಅವಿರತವಾಗಿ, ಸುಶ್ರಾವ್ಯವಾಗಿ ಹರಿದು ನೆರೆದಿದ್ದ ಜನಸ್ತೋಮದ ಮನತಣಿಸಿದ್ದಲ್ಲದೆ, ಅಕ್ಕನ ವಚನಗಳ ಬಗ್ಗೆ ಮತ್ತಷ್ಟು ತಿಳಿದುಕೊಳ್ಳುವ ಅವಕಾಶ ದೊರೆಯಿತು.

ಕಿರಾನಾ ಜೈಪುರ್ ಘರಾನಾದ ಖ್ಯಾಲ್ ಶೈಲಿಯ ಹಿಂದೂಸ್ಥಾನೀ ಗಾಯಕಿಯಾಗಿರುವ ಶ್ರೀಮತಿ ಸ್ಮಿತಾ ಬೆಳ್ಳೂರ್ ಅವರು ತಮ್ಮ ಸಂಗೀತ ಕಲಿಕೆಯನ್ನು 12ನೇ ವಯಸ್ಸಿನಲ್ಲಿಯೇ ಖ್ಯಾತ ಸಂಗೀತಗಾರರು ಹಾಗೂ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರೂ ಆದ ದಿವಂಗತ ಶ್ರೀ ಪಿ.ಆರ್.ಭಾಗವತ್ ಅವರಿಂದ ಆರಂಭಿಸಿದರು. ನಂತರದ ದಿನಗಳಲ್ಲಿ ಪಂಡಿತ್ ಅರ್ಜುನ್‌ಸಾ ನಾಕೋಡ್, ಪಂಡಿತ್ ರಾಜಭಾವು ಸೋಂಟಕ್ಕೆ, ಪಂಡಿತ್ ಬಾಲಚಂದ್ರ ನಾಕೋಡ್ ಮುಂತಾದ ದಿಗ್ಗಜರಿಂದ ಸಂಗೀತ ತರಬೇತಿ ಪಡೆದ ಸ್ಮಿತಾ, ಲಘು ಶಾಸ್ತ್ರೀಯ ಪದ್ಧತಿಯಲ್ಲಿಯೂ ಹಾಡುವುದಲ್ಲದೆ ಸೂಫಿ ಸಂಗೀತ, ಭಕ್ತಿ ಸಂಗೀತಗಳ ಅನೇಕ ಕಾರ್ಯಕ್ರಮಗಳನ್ನು ನೀಡಿ ಅದರಲ್ಲೂ ಸೈ ಎನಿಸಿಕೊಂಡಿದ್ದಾರೆ.

ಧಾರವಾಡ ಆಕಾಶವಾಣಿಯ 'ಬಿ-ಹೈ' ಶ್ರೇಣಿಯ ಕಲಾವಿದೆಯಾಗಿರುವ ಸ್ಮಿತಾ ಭಾರತದ ಅನೇಕ ಕಡೆಗಳಲ್ಲಿ ತಮ್ಮ ಮಧುರ ಗಾಯನ ಕಾರ್ಯಕ್ರಮಗಳನ್ನು ನೀಡಿ ಅಪಾರ ಜನಮೆಚ್ಚುಗೆ ಪಡೆದಿದ್ದಾರೆ. ಇವರ ಕಂಠಸಿರಿಯನ್ನು ಒಳಗೊಂಡಿರುವ 'ವಚನ ಕಿರಣ' ಹಾಗೂ 'ಕೈಸಿ ಮಧುರ್ ಶ್ಯಾಮ್' ಸಿಡಿಗಳು ಕೇಳುಗರ ಸಂಗೀತ ತೃಷೆ ನೀಗಿಸುತ್ತವೆ. 'ರೋಟರಿ ವೊಕೇಶನಲ್ ಎಕ್ಸೆಲೆನ್ಸ್ ಅವಾರ್ಡ್ 2010', 'ಸಂಗೀತ ಶ್ರೀ-2007', 'ಡಾ. ಪುಟ್ಟರಾಜ ಗವಾಯಿ ಕೃಪಾಭೂಷಣ ಪ್ರಶಸ್ತಿ 2007' ಹೀಗೆ ಮುಂತಾದ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಸ್ಮಿತಾ, ಬಿ.ಇ. ಪದವೀಧರೆಯಾಗಿದ್ದು ಕ್ವಾಲಿಟಿ ಮ್ಯಾನೇಜ್‌ಮೆಂಟ್‌ನಲ್ಲಿ ಎಂ.ಎಸ್. ಪಡೆದಿದ್ದಾರೆ. ಸಂಗೀತದಲ್ಲಿ, ಅಲಹಾಬಾದಿನ ಪ್ರಯಾಗ್ ಸಂಗೀತ ಸಮಿತಿಯಿಂದ ಸೀನಿಯರ್ ಡಿಪ್ಲೋಮಾ ಪಡೆದಿದ್ದಾರೆ.

ಕಾರ್ಯಕ್ರಮವನ್ನು, 'ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಭಾವಿಗಳುಂಟು' ಎಂಬ ಅಕ್ಕ ಮಹಾದೇವಿಯ ಸುಂದರ ವಚನವನ್ನು ರಾಗ್ ಭಟಿಯಾರ್‌ದಲ್ಲಿ ಹಾಡಿ ಆರಂಭಿಸಿದರು. ಆಡಂಬರದ ಜೀವನ ಬಯಸದೆ ಜೀವನದ ಸತ್ಯ ಹುಡುಕುತ್ತಾ ವಾಸಕ್ಕೆ ಹಾಳು ದೇಗುಲಗಳ ತಡಿಯೇ ಸಾಕಾಗಿ ಚೆನ್ನಮಲ್ಲಿಕಾರ್ಜುನನ ಆತ್ಮಸಾಂಗತ್ಯಕ್ಕೆ ಹಂಬಲಿಸಿದ ದಿಟ್ಟ ಶರಣೆಯ ವೈಚಾರಿಕ ನಿಲುವನ್ನು ಗಟ್ಟಿಯಾಗಿ ಪ್ರತಿಬಿಂಬಿಸಿದ ವಚನವಿದು.

ನಂತರ ಹಾಡಿದ ದೇಸ್ ರಾಗದಲ್ಲಿದ್ದ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ' ಎಂಬ ಇನ್ನೊಂದು ವಚನ ಮನುಷ್ಯ ತನ್ನ ನೆಲೆಯನ್ನು ತಾನು ಅರಿತು, ಸಮಾಜದೊಂದಿಗೆ ಬೆರೆತು ನಡೆಯುವ ಔಚಿತ್ಯವನ್ನು ಸಾರಿದರೆ ಬೈರಾಗಿ ರಾಗದಲ್ಲಿ ಹಾಡಿದ 'ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ' ಅತ್ಯುತ್ತಮವಾಗಿ ಮೂಡಿಬಂದಿತು. ನಂತರ ಅಲ್ಲಮ ಪ್ರಭುವಿನ ವಚನ 'ಪ್ರಣತೆ ಇದೆ ಬತ್ತಿಯೂ ಇದೆ' ಎಂಬ ಮಾರುಬಿಹಾಗ್ ರಾಗದ ಪ್ರಸ್ತುತಿಯು ಸರ್ವಸಮಸ್ತ ಪರಿಕರಗಳು, ಸವಲತ್ತುಗಳಿದ್ದಾಗ್ಯೂ ದೇವರನ್ನು ನೆನೆಯುವಲ್ಲಿ ವಿಫಲರಾದ ಮನುಜ ಜನ್ಮದ ಅಜ್ಞಾನದತ್ತ ಬೆರಳುಮಾಡುತ್ತಿತ್ತು. ಹಂಸಧ್ವನಿಯಲ್ಲಿ ಹಾಡಿದ ಬಸವಣ್ಣನವರ 'ಆನೆ ಅಂಕುಶಕ್ಕೆ ಅಂಜುವುದೆ ಅಯ್ಯ' ಎಂಬ ವಚನವೂ ತರ್ಕದ ಒರೆಗೆ ಹಚ್ಚಿ ಕೂಡಲ ಸಂಗಮನೊಂದಿಗೆ ಐಕ್ಯವಾಗಲು ಭಕ್ತಿಯ ಮಾರ್ಗದ ಅಗತ್ಯವನ್ನು ಎತ್ತಿ ಸಾರುತ್ತಿತ್ತು.

ಪಂಡಿತ್ ವೆಂಕಟೇಶ ಕುಮಾರ್‌ರ ಧಾಟಿಯಲ್ಲಿದ್ದ ಖಮಾಜ್ ರಾಗದ 'ಗಿರಿಯಲ್ಲದೆ ಹುಲ್ಲು ಮರಡಿಯಲ್ಲಾಡುವುದೇ ನವಿಲು?' ಹಾಗೂ ಚಾರುಕೇಶಿ ರಾಗದಲ್ಲಿ 'ಬಂದಹನೆಂದು ಬಟ್ಟೆಯ ನೋಡಿ' ಎಂಬ ಅಕ್ಕನ ವಚನಗಳು ಬಹಳ ಅದ್ಭುತವಾಗಿ ಮೂಡಿಬಂದು ರಾಗವಿಸ್ತಾರ, ತಾರಕದಲ್ಲೂ ಇಂಪಾದ ಸ್ವರಚಲನೆ ಕರ್ಣಾನಂದವಾಗಿ ಕೇಳಿಬಂದು ಸ್ಮಿತಾ ಅವರ ನಿರಂತರ 'ರಿಯಾಜ್' ಪ್ರಕಟವಾಗುತ್ತಿತ್ತು.

ಜನಪ್ರಿಯವಾದ 'ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ' ವಚನದಲ್ಲಿ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನಿಗೆ ಮನಸೋತು ಆತನೇ ತನಗೆ ಸರ್ವಸ್ವ ಎಂದು ಸಮರ್ಪಿಸಿಕೊಂಡಾಗ ತನ್ನ ಕನಸು ಮನಸ್ಸಿನಲ್ಲಿಯೂ ಅವನೇ ತುಂಬಿಕೊಂಡಿದ್ದು, ಅಕ್ಕಿ ಅಡಿಕೆ ತೆಂಗಿನಕಾಯಿಗಳಂತಹ ಮಂಗಳದ್ರವ್ಯಗಳು ಕನಸಿನಲ್ಲಿ ಕಂಡೆ, ಅವನೊಡನೆ ಮನದಲ್ಲೇ ಮದುವೆಯಾದೆನೆಂದೂ ಹೇಳುತ್ತಾಳೆ. ಕೀರ್ವಾಣಿ ರಾಗದಲ್ಲಿ ಹಾಡಿದ 'ಮರವಿದ್ದು ಫಲವೇನು ನೆರಳಿಲ್ಲದನಕ್ಕ' ಮಧುರವಾಗಿ ಮೂಡಿಬಂತು. ರೂಢಿಯಂತೆ, ಸ್ಮಿತಾ, ತಮ್ಮ ಕಾರ್ಯಕ್ರಮವನ್ನು ಭೈರವಿ ರಾಗದಲ್ಲಿ ಬಂದಿತು. 'ಕಾಯದ ಕತ್ತಲೆಯ ಕಳೆಯಯ್ಯಾ' ಎಂಬ ವಚನದೊಂದಿಗೆ ಮುಕ್ತಾಯ ಮಾಡಿದರು. ಈ ವಚನ ಅಜ್ಞಾನದ ತಮ ಹರಿಸಿ ಸುಜ್ಞಾನದ ಬೆಳಕಿನ ಅನ್ವೇಷಣೆ ಮಾಡುವ ದೀಪದಂತಿತ್ತು.

ತಬಲಾದಲ್ಲಿ ಅತ್ತರ್ ಹುಸೇನ್ ಹಾಗೂ ಕೀಬೋರ್ಡ್‌ನಲ್ಲಿ ಬವಾ ಸಹಾನಿ ಅವರು ಅಮೋಘವಾಗಿ ತಮ್ಮ ಕರಚಾತುರ್ಯ ಪ್ರದರ್ಶಿಸಿ ಉತ್ತಮ ಸಾಥ್ ನೀಡಿದ್ದಲ್ಲದೇ ಗಾಯನಕ್ಕೆ ರಂಗು ತಂದರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿದ್ದ ದೆಹಲಿಯ ಮಹಾಂತೇಶ ಸ್ವಾಮೀಜಿ ಅವರು ಅಕ್ಕ ಮಹಾದೇವಿಯ ಬಗ್ಗೆ ಹಲವಾರು ವಿಷಯಗಳನ್ನು ಸಾಕಷ್ಟು ವಿಸ್ತಾರವಾಗಿ ತಿಳಿಸಿದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿಯಲ್ಲಿ ಜನಿಸಿದ ಅಕ್ಕಮಹಾದೇವಿ ತನ್ನ ಆತ್ಮದ, ಸತ್ಯದ ಹಪಹಪಿಯನ್ನು ತಣಿಸಲು ಪ್ರವಾಸ ಕೈಗೊಂಡು ಶಿವನನ್ನು(ಚೆನ್ನಮಲ್ಲಿಕಾರ್ಜುನ) ಹುಡುಕುತ್ತಾ ಕೂಡಲ ಸಂಗಮದ ಅನುಭವ ಮಂಟಪವನ್ನು ಸೇರಿ, ತನ್ನ ಆಧ್ಯಾತ್ಮ ಜೀವನವನ್ನು ಅರ್ಥಪೂರ್ಣವಾಗಿ ಕಳೆಯುತ್ತಾ 'ಅಕ್ಕ' ಎಂಬ ಗೌರವಕ್ಕೆ ಪಾತ್ರರಾದರೆಂದರು. 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ವೀರಶೈವ ಭಕ್ತಿ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಈಕೆ, 400ಕ್ಕೂ ಮಿಕ್ಕಿದ ತಮ್ಮ ವಚನಗಳಿಂದ ಭಕ್ತಿ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆಂದರು. ಲೌಕಿಕ ವಿಷಯಾಸಕ್ತಿಗೆ ಮನಸೋತ ಮಠಗಳ ಇತ್ತೀಚೆಗಿನ ಹಲವಾರು ಸ್ವಾಮೀಜಿಗಳು ಸಂಸಾರಿಕ ಲೋಭಗಳಿಗೆ ಮೋಹಿತರಾಗಿ ವೈಭೋಗ ಜೀವನದ ದಾಸರಾಗಿ ನಡೆದು ಕೊಳ್ಳುತ್ತಿರುವುದು ಶೋಚನೀಯವೆಂದು ಹೇಳುತ್ತಾ ಅಂದಿನ ಕಾಲದ ಮಹಾನ್ ದಾರ್ಶನಿಕರಾದ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮರು ಮುಂತಾದವರು ತೋರಿದ ಹಾದಿಯಲ್ಲಿ ನಡೆದಲ್ಲಿ ಜೀವನದ ಸಾರ್ಥಕತೆ ಕಾಣಲು ಸಾಧ್ಯವೆಂದು ನುಡಿದರು.

ಶ್ರೀ ಸೋಮನಾಥ ಬಿರಾದಾರ್ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದ ಮೊದಲಿಗೆ ಶ್ರೀ ಟಿ.ಎಸ್. ರಮೇಶ್ ಅವರು ಸ್ಮಿತಾ ಅವರ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಗಾಯಕಿ ಶ್ರೀಮತಿ ಶ್ಯಾಮಲಾ ಮನೋಹರ್ ಅವರು ಸಂಗೀತ ಕಲಾವಿದರಿಗೆ ಪುಷ್ಪಗುಚ್ಛದೊಂದಿಗೆ ಶಾಲುಹೊದಿಸಿ ಸನ್ಮಾನಿಸಿದರು. ದೆಹಲಿಯ ಸಂಗೀತ ರಸಿಕರು, ವಚನಾಸಕ್ತರು ಅಷ್ಟೇ ಅಲ್ಲದೆ ಬಸವ ಇಂಟರ್‌ನ್ಯಾಷನಲ್ ಸೆಂಟರ್, ದೆಹಲಿ ಕರ್ನಾಟಕ ಸಂಘ ಹಾಗೂ ಇನ್ನೂ ಅನೇಕ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ 'ದೆಹಲಿ ಮಿತ್ರ'ದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು 'ಬೆಳ್ಳಾರೆ' ಹಾಗೂ 'ಬೆಳ್ಳೂರು' ಹೆಸರಿನ ಸಾಮ್ಯತೆಯನ್ನು ಹೇಳುತ್ತಾ 'ಅಕ್ಕ' ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕಾಗಿ 'ತಂಗಿ' ಸ್ಮಿತಾಗೆ ಅಭಿನಂದಿಸಿದರು.

ವಚನಾಮೃತದ ವರ್ಷಧಾರೆದಲ್ಲಿ ಮಿಂದು, ಕಡಲೇಬೇಳೆ ಪಾಯಸದ ಸವಿಭೋಜನ ಉಂಡು ಇಂತಹ ಅದ್ದೂರಿ ಕಾರ್ಯಕ್ರಮಕ್ಕೆ ಕಾರಣಕರ್ತರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರನ್ನು ನೆನೆದು ಪ್ರೇಕ್ಷಕರು ಮನೆಗೆ ತೆರಳಿದರು.

❑ ಟಿ.ಎಸ್. ರಮೇಶ್

# ಎಂಜಾಯೆಬ್ಲ್ ಡೇ – ಯುವ ಮಿಲನ

ದೆಹಲಿಯ ಸ್ಕೈಯಲ್ಲಿ ಕ್ಲೌಡ್ ಕಂಡ ಕನ್ನಡದ ಬಾಯ್ಸ್ ಮತ್ತು ಗರ್ಲ್ಸ್ ಲಾಸ್ಟ್ ಸಂಡೇ ನೋಯ್ಡಾದ ಪಾರ್ಕಿನಲ್ಲಿ ಯುವ ಮಿಲನ ಮಾಡಿ ಎಂಜಾಯ್ ಮಾಡಿದ್ದೇ ಮಾಡಿದ್ದು. ಸಖತ್ತಾಗಿತ್ತು. ವಿ ಆಲ್ ಎಂಜಾಯ್ಡ್ ಅಂತ ಫೇಸ್ ಬುಕ್ ಓವರ್ ಫ್ಲೋ ಅಗುವ ಹಾಗೆ ಮೆಸೇಜ್ ಮಾಡಿದ್ದೋ ಮಾಡಿದ್ದು.

ಮ್ಯಾಗಜಿನ್ ಡಿಸೈನರ್ ಪ್ರಕಾಶ್, ಇಂಜಿನಿಯರ್ಗಳಾದ ಸಾಮ್ರಾಟ್, ಪ್ರದೀಪ್, ಎಚ್.ಆರ್. ಪ್ರೊಫೆಷನಲ್ ವಂದನಾ, ಐಟಿ ಕಂಪನಿಯ ಮಾರುತಿ, ರಿಪೋರ್ಟರ್ ರಾಘವ, ಕನ್ನಡ ಸ್ಕೂಲಿನ ಸ್ಟುಡೆಂಟ್ ಮನೀಷ್, ಇಂಜಿನಿಯರ್ ಸ್ಟುಡೆಂಟ್ ಹಿತೇಶ್ ನಾಲ್ಕು ದಿನ ತಮ್ಮ ತಮ್ಮ ಫ್ರೆಂಡ್ಸ್ ಗಳನ್ನೆಲ್ಲಾ ಕಾಂಟೆಕ್ಟ್ ಮಾಡಿದ್ದೇ ಮಾಡಿದ್ದು. ದಿನಕ್ಕೆ ಇನ್ನೂರು ಮೆಸೇಜ್ ಮುಗಿದಾಗ ಫೇಸ್ ಬುಕ್ ಗೆ ಹೋಗಿ ಅಲ್ಲೂ ಮೆಸೇಜ್! ಡೆಲ್ಲಿ ಮಾತ್ರವಲ್ಲ ಗುರುಗಾಂವ್, ನೋಯ್ಡಾ, ಫರೀದಾಬಾದ್ ಎಲ್ಲಾ ಯುವ ಮಿಲನದ ಮಾತು, ಸಂಭ್ರಮ! ಮನ್ಸೂನ್ ಆದ್ದರಿಂದ ಅಂಬ್ರೆಲ್ಲಾ ತರ್ಬೇಕು ಅಂತ ಮೆಸೇಜ್. ಸಂಡೇ ಜುಲೈಫಿಫ್ಟೀನ್ ಗೆ ನೋಯ್ಡಾ ಸೆಕ್ಟರ್ ೧೫ ಎ ಎದುರಿನ ಅಮಿತಾಬ್ ಪಾರ್ಕಿನಲ್ಲಿ ಯುವ ಮಿಲನ! 'ಫನ್, ಫ್ರೆಂಡ್ಸ್ ಎಂಡ್ ಫುಡ್' ಗ್ಯಾದರಿಂಗಿನ ಥೀಮ್! ಆರ್ಗನೈಸರ್ ಟೀಮ್ ಇಂದಿರಾಪುರಂನಲ್ಲಿ ಅರ್ಲಿ ಮಾರ್ನಿಂಗ್ ನಾಲ್ಕೂವರೆವರೆಗೆ ಪ್ರೋಗ್ರಾಮ್ ಡಿಸೈನ್ ಮಾಡುತ್ತಿತ್ತು!

ಟ್ವೆಲೋ ಕ್ಲಾಕಿಗೆ ಸ್ವಲ್ಪ ಅರ್ಲಿನೇ ಪ್ರೋಗ್ರಾಮ್ ಬಿಗಿನ್ ಆಯ್ತು! ಎಲ್ಲಾ ಹುಡುಗ್ರು ಎಸೆಂಬ್ಲ್ ಆದಾಗ ರಾಘವ ಎಲ್ರನ್ನೂ ಕಾರ್ಡಿಯಲ್ ಆಗಿ ವೆಲಕಂ ಮಾಡಿದ್ರು. ಡೆಲ್ಲಿಯಲ್ಲಿ ಈ ಬಾಯ್ಸ್ ಎಂಡ್ ಗರ್ಲ್ಸ್ ಯಾಕೆ ಗ್ಯಾದರಾಗಿದ್ದಾರೆ ಅಂತ ಎಕ್ಸ್ಪ್ಲೇನ್ ಮಾಡಿದ್ರು. ಮತ್ತೆ ಶುರುವಾಯಿತು ಫನ್ ಪ್ರೋಗ್ರಾಮ್. ಅದರ ಸಬ್ ಕಮಿಟಿಯಲ್ಲಿ ವಂದನಾ, ಸಾಮ್ರಾಟ್, ಶಾರ್ವರಿ ಮತ್ತು ಮನೀಷ್!

ಫನ್ ಪ್ರೋಗ್ರಾಂನ ಫಸ್ಟ್ ಮ್ಯೂಸಿಕ್ ರೌಂಡ್ ಗೇಮ್ಸ್ ನಡೀತು. ನೆಕ್ಸ್ಟ್ ಐಟಂ ಡಾಜ್ ಬಾಲ್! ಎಲ್ರಿಗೂ ನಂಬರ್ ಒನ್ ನಂಬರ್ ಟು ಹೇಳಿಸಿದ್ರು. ಒನ್ ಹೇಳಿದ ಎಲ್ರೂನು ಒಂದು ಬಿಗ್ ರೌಂಡ್ ಆಗಿ ನಿಂತ್ಕೋಂಬಿಟ್ರು. ಆ ರೌಂಡ್ ಇನ್ಸೈಡ್ ನಂಬರ್ ಟು ಹೇಳಿದವ್ರು ಜಾಯ್ನ್ ಆದ್ರು. ಆವಾಗ ರೆಫ್ರಿಯಾಗಿದ್ದ ಮನೀಷ್, ವಿಷಲ್ ಬ್ಲೋ ಮಾಡುತ್ತಾ ರೌಂಡಲ್ಲಿದ್ದವರತ್ರ ಬಾಲ್ ಥ್ರೋ ಮಾಡಲು ಹೇಳಿದ್ರು. ರೌಂಡಲ್ಲಿ ನಿಂತಿದ್ದ ಹುಡುಗ್ರೆಲ್ಲಾ ಇನ್ಸೈಡ್ ಇದ್ದವರಿಗೆ ಏಮ್ ಇಟ್ಟು ಹೊಡೆದಿದ್ದೇ ಹೊಡೆದಿದ್ದು! ಅದು ನಮ್ಮ ಗೆಟ್ಟುಗೆದರ್ ನ ಐಸ್ ಬ್ರೇಕಿಂಗ್ ಈವೆಂಟ್ ಆಯ್ತು. ಅದ್ರಲ್ಲಿ ಇಬ್ಬಿಬ್ಬರು ವಿನ್ ಅಂತ ಡಿಕ್ಲೇರ್ ಮಾಡಿಸಿ ಅವ್ರಿಗೆ ಲಾಸ್ಟ್ಗೆ ಪ್ರೈಜ್ ಕೂಡಾ ಕೊಡಿಸಿದ್ರು!!

ರೈನ್ ಬಾರದೇ ವೆದರ್ ಹಾಟ್ ಆಗಿತ್ತು! ಸುಮಾರು ಒನ್ ಅವರ್ ಔಟ್ಸೈಡ್ನಲ್ಲಿ ಗೇಮ್ಸ್ ಆಡಿ ಬಾಯ್ಸ್ ಎಂಡ್ ಗರ್ಲ್ಸ್ ಟೆರಿಬ್ಲಿ ಟಯರ್ಡ್ ಆಗಿದ್ದರು! ತಂದಿಟ್ಟಿದ್ದ ವಾಟರ್ ಎಂಪ್ಟಿ ಆಗಿತ್ತು! ಅಷ್ಟರಲ್ಲಿ ಅಲ್ಲೊಂದು ಗಿಟಾರ್ ಯಾರೋ ಇಟ್ಟಿದ್ದು ಎಲ್ಲರ ಐಸ್ಗೆ ಬಿತ್ತು! ಆದ್ಯಾರದೆಂದು ಗೆಸ್ ಮಾಡ್ಬೇಕಿದ್ರೆ ಅದು ಆರೆನ್ ಫರ್ನಾಂಡಿಸ್ ಅವರದ್ದು ಅಂತ ಗೊತ್ತಾಯ್ತು! ಈವೆಂಟ್ ಆರ್ಗನೈಸರಿಗೆ ಡಬಲ್ ಖುಷಿ! ನಂತ್ರ ಶುರುವಾಯ್ತು, ಒಬ್ರ ನಂತ್ರ ಒಬ್ರು. ಆರೆನ್ ಜತೆ ಗಿಟಾರ್ ಬಾರಿಸೋದು ಮತ್ತು ಸಿಂಗಿಂಗ್!! ಎಂಜಾಯ್ ಮಾಡಿದ್ದೇ ಮಾಡಿದ್ದು! ಲೇಟಾದ್ರೂ ಕೆಲವರು ಎಂಟ್ರಿಯಾಗುತ್ತಿದ್ದರು. ಔಟಿಂಗ್ನ ಟೆಂಪೋ ಸ್ಕೈ ರೀಚ್ ಆಗ್ಬೇಕ್ಕಿದ್ರೆ ಮನೀಷ್ ಒಂದು ರಾಪ್ ಸಾಂಗ್ ಹಾಡಿದ! ಸಿಂಧೂರ, ರಕ್ಷಾ, ಅಶೋಕ್, ಅಂಜನಾ, ಅರುಣ್ ಬಡಿಗೇರ್ ಎಂಡ್ ಅದರ್ಸ್ ಒಂದು ಮೆಮೋರೆಬಲ್ ಮ್ಯೂಸಿಕಲ್ ಈವೆಂಟೇ ನಡೆಸಿದ್ರು! ಮನೀಷ್ ಇನ್ನೂ ಎಕ್ಸೈಟ್ ಆಗಿದ್ದ. ಆರೆನ್ ಫರ್ನಾಂಡಿಸ್ ಜತೆ ಸಾಂಗ್ಸ್ ಮತ್ತು ಕಂಟೆಂಪೊರರಿ ಡ್ಯಾನ್ಸ್ ಮಾಡಿ ಗ್ಯಾದರಾದ ಎಲ್ರನ್ನೂ ಸ್ಕೈನಲ್ಲಿ ಫ್ಲೋಟ್ ಮಾಡಿಸಿದ!!

ಕೇಟರರ್ ಸುರೇಂದ್ರಣ್ಣ 'ದಾಲಾ ಮಂಡೆ ಬೆಚ್ಚ ಮಲ್ಪೊಡ್ಚಿ!' ಎಂದು ಅಸ್ಯೂರೆನ್ಸ್ ಕೊಟ್ಟಿದ್ದು ನೋಡಿ ಫುಡ್ ಹನ್ನೆರಡು ವರೆಗೆ ಸಪ್ಲೈ ಆಗುತ್ತೆ ಅಂತ ಫನ್ ಪ್ರೋಗ್ರಾಮ್ ರೆಡ್ಯೂಸ್ ಮಾಡಿದರೆ ಫುಡ್ ಸಪ್ಲೈ ಆಗಿದ್ದು ತ್ರೀ ಆಕ್ಲಾಕಿಗೆ! ಬಟ್ ಟೈಂ ವೇಸ್ಟ್ ಆಗಿಲ್ಲ. ಲಾಸ್ಟ್ ನೈಟಿನ ಅಮೇಜಿಂಗ್ ಎಕ್ಸ್ಪೀರಿಯನ್ ಶೇರ್ ಮಾಡಿದ್ದು ಸಾಮ್ರಾಟ್, ಸುಖೇಶ್, ಪ್ರದೀಪ್, ಪ್ರಕಾಶ್! ಜತೆಗೆ ಡೆಲ್ಲಿಗೆ ಬಂದು ಸಿಕ್ಸ್ ಮಂತ್ ಆದವರಿಂದ ಹಿಡಿದು ಸಿಕ್ಸ್ ಯೀಯರ್ ಆದವರೆಲ್ಲಾ ತಮ್ಮ ಎಕ್ಸ್ಪೀಯರೆನ್ಸ್ ಶೇರ್ ಮಾಡಿದ್ರು! ನವೀನ್ ಸಾಗರ್, ಅರುಣ್ ಬಡಿಗೇರ್, ತನುಜಾ, ಮಹೇಶ್, ಚಂದ್ರಮೋಹನ್, ರಾಘವ, ಮಾರುತಿ, ಪ್ರಕಾಶ್ ಎಲ್ರೂ ತಮ್ಮೂರಿನ ಮೆಮರಿಯಲ್ಲಿ ಡೆಲ್ಲಿಯಲ್ಲಿ ಅವರಿಗೆ ಆಗುವ ಫುಡ್ ಪ್ರಾಬ್ಲೆಂ ಕುರಿತು ಎಕ್ಸ್ಪ್ಲೈನ್ ಮಾಡಿದ್ರು! ಜತೆಗೆ ರಾಕೇಶ್ ಅದು–ಇದು ಅಂತ ಮಾತಾಡಿದ್ರು ಮತ್ತು ಪ್ರದೀಪ್ ಜೋಕ್ಸ್ ಪಾಲ್ಸ್ ನಲ್ಲಿ ತೇಲಿಸಿ ಬಿಟ್ರು!

ತ್ರೀ ಆಕ್ಲಾಕ್ಗೆ ಸ್ಟಾರ್ಟ್ ಆದ ಫುಡ್ ಪ್ರೋಗ್ರಾಮ್ ಎಲ್ರಿಗೂ ಲೈಕ್ ಆಯ್ತು. ಪೂರಿ, ಬಿರಿಯಾನಿ ಎಲ್ಲಾ ಕ್ವಿಕ್ ಆಗಿ ತಿಂದ ಬಾಯ್ಸ್ ಎಂಡ್ ಗರ್ಲ್ಸ್ ಅನ್ನು ಕಾರ್ಡಿನೇಟರ್ ಪ್ರಕಾಶ್ ಲೈನಲ್ಲಿ ಕೂರೋಕೆ ಆರ್ಡರ್ ಕೊಟ್ರು! ಎಲ್ರೂ ಒಳ್ಳೆ ಡಿಸಿಪ್ಲಿನ್ ಆಗಿ ರಿಲಾಕ್ಸ್ ಆಗಿ ಕೂತ್ಬಿಟ್ರು! ನಂತ್ರ ಎಲ್ಲರನ್ನೂ ಇಂಟ್ರೋಡ್ಯೂಸ್ ಮಾಡೋ ಪ್ರೋಗ್ರಾಂ! ಒನ್ ಬೈ ಒನ್ ಎಲ್ರೂ ಬಂದು ಅವ್ರವ್ರ ನೇಟಿವ್ ಪ್ಲೇಸ್, ಡೆಲ್ಲಿಯಲ್ಲಿ ವರ್ಕ್ ಮಾಡೋ ಪ್ಲೇಸ್ ಎಲ್ಲಾ ಹೇಳಿದ್ರು. ಮೈಸೂರು, ಧಾರವಾಡ, ಶಿವಮೊಗ್ಗ, ಬಳ್ಳಾರಿ, ಬಿಜಾಪುರ, ಮಂಗಳೂರು, ಕೊಡಗು, ಉಡುಪಿ, ದಾವಣಗೆರೆ, ಬೆಂಗಳೂರು ಹೀಗೆ ಎಲ್ಲಾ ಡಿಸ್ಟ್ರಿಕ್ಟ್ ಗಳಿಂದ ಬಂದವರು ಅಲ್ಲಿದ್ರು. ಜತೆಗೆ ಅವ್ರದೆಲ್ಲಾ ವರ್ಕಿಂಗ್ ಫೀಲ್ಡೂ ಡಿಫರೆಂಟ್ ಆಗಿತ್ತು! ಐಟಿ, ಇಂಜಿನೀಯರಿಂಗ್ ಕಂಪನಿ, ಮೀಡಿಯ, ಆರ್ಮಿ, ಏರ್ ಫೋರ್ಸ್, ಸೆಂಟ್ರಲ್ ಗವರ್ನ್ಮೆಂಟ್ ಜಾಬ್ ಹೀಗೆ ಅವರ ವರ್ಕಿಂಗ್ ಏರಿಯಾ ಕೂಡಾ ಡಿಫರೆಂಟ್ ಆಗಿತ್ತು!

ನಂತ್ರ ಹೌಸಿ ಹೌಸಿ ಗೇಮ್ಸ್. ಮಿಡ್ಲಲ್ಲಿ ಸಾಮ್ರಾಟ್ ಒನ್ ಮಿನಿಟ್ ಗೇಮ್ಸ್ ಮಾಡಿದ್ರು! ನಂತ್ರ ಪ್ರೈಜ್ ಡಿಸ್ಟ್ರಿಬ್ಯೂಶನ್! ಸುಸ್ತಾಗಿದ್ದ ಎಲ್ರೂ ಇವಿನಿಂಗ್ ಸಿಕ್ಸ್ ಆಗುತ್ತಾ ರಿಟರ್ನ್ ಆದ್ರು. ಬಟ್ ನಂತ್ರನೂ ಎಲ್ಲೂ ಎಂಜಾಯ್ ಮಾಡಿದ್ದನ್ನು ಶೇರ್ ಮಾಡ್ತಿದ್ರು! ಅಲ್ಟಿಮೇಟ್ಲಿ 'ಯುವ ಮಿಲನ'ದಲ್ಲಿ ಹ್ಯಾಪಿಯಾಗಿ ಎಂಜಾಯ್ ಮಾಡಿದ ಮೋರ್ ದ್ಯಾನ್ ಒನ್ ಹಂಡ್ರೆಡ್ ಬಾಯ್ಸ್ ಎಂಡ್ ಗರ್ಲ್ಸ್ಗೆ ಒನ್ ಮೆಮೋರೇಬಲ್ ಎಂಡ್ ಗ್ರ್ಯಾಂಡ್ ಸಕ್ಸೆಸ್ ಈವೆಂಟ್ ಆಯ್ತು!

❑ **ರೈಟಿಂಗ್ ಎಂಡ್ ಫೋಟೋ : ಬಿವಿಡಿ**



# ನೂತನ ರಾಷ್ಟ್ರಪತಿಯಾಗಿ ಮೇರು ವ್ಯಕ್ತಿತ್ವದ, ಧೀಮಂತ ರಾಜಕಾರಣಿ–ಪ್ರಣಬ್ ಮುಖರ್ಜಿ



45 ವರ್ಷಗಳ ರಾಜಕೀಯ ಜೀವನದಲ್ಲಿ ವಿಪಕ್ಷಗಳ ನಾಯಕರಿಂದಲೂ ಅತೀವ ಗೌರವಿಸಲ್ಪಟ್ಟ, ರಾಜಕೀಯ, ಸಂಸದೀಯ, ಸಾಂವಿಧಾನಿಕ, ಇತಿಹಾಸದ ವಿಚಾರಗಳಲ್ಲಿ 'ನಡೆದಾಡುವ ವಿಶ್ವಕೋಶ' ಎಂದೇ ಹೆಸರುವಾಸಿಯಾಗಿರುವ ಬಂಗಾಳಿ ಬಾಬು ಪ್ರಣಬ್ ಮುಖರ್ಜಿ ರಾಜಕೀಯ ವೃತ್ತಿ ಜೀವನದ ಕಡೆಯ ಅಂಕ ಪ್ರವೇಶಿಸಿದ್ದಾರೆ. ಹಣಕಾಸು, ರಕ್ಷಣೆ, ವಿದೇಶಾಂಗ ಸಚಿವರಾಗಿ ಸುಮಾರು 22 ವರ್ಷಗಳಷ್ಟು ದೀರ್ಘ ಸೇವೆ ಸಲ್ಲಿಸಿರುವ ಅವರೀಗ ನಮ್ಮ ರಾಷ್ಟ್ರದ ಘನತೆವೆತ್ತ ರಾಷ್ಟ್ರಪತಿ. ಈ ದೇಶದ ರಾಷ್ಟ್ರಪತಿಯಾಗಿ ದೇಶದ ಅನೇಕ ಸಂಕೀರ್ಣತೆಗಳನ್ನು ಎದುರಿಸುತ್ತ ಭಾರತೀಯ ಸಂವಿಧಾನದ ಘನತೆ, ಗೌರವಗಳನ್ನು ಎತ್ತಿ ಹಿಡಿವ ಗುರುತರವಾದ ಹೊಣೆಯನ್ನು ಹೊತ್ತಿದ್ದಾರೆ. ಆಡಳಿತನೀತಿ ನಿಪುಣ, ವಿತ್ತ ತಜ್ಞ, ಹಿರಿಯ ಮುತ್ಸದ್ದಿ ಪ್ರಣಬ್ ಮುಖರ್ಜಿ ಅವರು ಈ ದೇಶದ ಪರಮೋಚ್ಚ ಸ್ಥಾನವಾದ ರಾಷ್ಟ್ರಪತಿ ಹುದ್ದೆಗೆ ಆಯ್ಕೆಯಾಗಿದ್ದು ನಮ್ಮೆಲ್ಲರ ಹೆಮ್ಮೆ.

ಕಳೆದ 8 ವರ್ಷಗಳಿಂದ ಯುಪಿಎ ಸರ್ಕಾರದ ಪಾಲಿಗೆ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಮಂತ್ರದಂಡದಂತೆಯೇ ಕಾರ್ಯನಿರ್ವಹಿಸಿದ್ದ ಪ್ರಣಬ್, 2009ರ ಲೋಕಸಭಾ ಚುನಾವಣೆಯೇ ತಮ್ಮ ಕಡೆಯ ಚುನಾವಣೆ ಎಂದು ಈ ಹಿಂದೆಯೇ ಘೋಷಿಸಿದ್ದರು. ಹೀಗಾಗಿಯೇ ಪಕ್ಷ ಕಂಡ ಅತ್ಯುತ್ತಮ ಕಟ್ಟಾಳು, ಚತುರ ರಾಜಕಾರಣಿ, ನೀತಿವಂತ ರಾಜಕಾರಣಿಗೆ ದೇಶದ ಪ್ರಥಮ ಪ್ರಜೆಯಾಗುವ ಅಮೂಲ್ಯ ಅವಕಾಶ ಒದಗಿಬಂದಿದೆ.


ಪ್ರಣಬ್ ಮುಖರ್ಜಿ ಮೂಲತಃ ಪಶ್ಚಿಮ ಬಂಗಾಳದ ಬೀರ್ಭೂಮ್ ಬಳಿಯ ಮಿರಿತಿ ಎಂಬ ಗ್ರಾಮದವರು. ಚಿಕ್ಕಂದಿನಲ್ಲಿ ಅವರಿಗೆ ಶಾಲೆಗೆ 3–4 ಕಿ.ಮೀ. ದೂರದವರೆಗೆ ನಡೆದು ಹೋಗುವ ಅನಿವಾರ್ಯತೆ ಇತ್ತು. ಅದೂ ಚಪ್ಪಲಿ ಕೂಡ ಕಾಲಲ್ಲಿರುತ್ತಿರಲಿಲ್ಲ. ಬರಿಗಾಲಲ್ಲಿ ಸಾಗುತ್ತಿದ್ದರು. ಅಂಥವರೀಗ ದೇಶದ ನಂ.1 ಪ್ರಜೆ ಪಟ್ಟಕ್ಕೇರಿದ್ದಾರೆ. ಅಲ್ಲದೆ, ಕುಗ್ರಾಮಗಳಲ್ಲಿ ಬದುಕುತ್ತಿರುವ ಬಾಲಕನೊಬ್ಬ ದೇಶದ ಪ್ರಥಮ ನಾಗರಿಕನಾಗಬಹುದು ಎಂದು ಪ್ರಣಬ್ ತೋರಿಸಿಕೊಟ್ಟಿದ್ದಾರೆ. ಇದು ಈ ದೇಶದ ಪ್ರಜಾಪ್ರಭುತ್ವದ ಸೊಗಡು !

ಈವರೆಗೆ ಕೇಂದ್ರ ಸರ್ಕಾರದಲ್ಲಿ ನಂ.2 ಸ್ಥಾನದಲ್ಲಿ ಮಿಂಚುತ್ತಿದ್ದ ಪ್ರಣಬ್ ರಾಜಕೀಯಕ್ಕೆ ಕಾಲಿಟ್ಟಿದ್ದು 60ರ ದಶಕದಲ್ಲಿ. ಆಗ ಬಾಂಗ್ಲಾ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಪ್ರಣಬ್, ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು.

ರಾಜ್ಯಶಾಸ್ತ್ರ ಮತ್ತು ಇತಿಹಾಸದಲ್ಲಿ ಸ್ನಾತಕೋತ್ತರ ಪದವೀಧರರಾದ ಮುಖರ್ಜಿ ಕೆಲ ಕಾಲ ವಕೀಲರಾಗಿ, ಪತ್ರಕರ್ತರಾಗಿ ಮತ್ತು ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದ್ದುಂಟು. 1969ರಲ್ಲಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಮೊದಲ ಬಾರಿಗೆ ದೆಹಲಿ ರಾಜಕೀಯಕ್ಕೆ ಎಂಟ್ರಿ ಪಡೆದ ಪ್ರಣಬ್ ಅಲ್ಲಿಂದ ಬಹುಬೇಗ ಬೆಳೆದುನಿಂತರು. 2004ರಲ್ಲಿ ಬಂಗಾಳದ ಜಂಗೀಪುರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗುವವರೆಗೂ ರಾಜ್ಯಸಭಾ ಸದಸ್ಯರಾಗಿಯೇ ಇದ್ದ ಪ್ರಣಬ್ 2009ರಲ್ಲಿಯೂ ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಿ ಗೆಲುವು ಕಂಡರು. ಹಲವು ಬಾರಿ ಪ್ರಧಾನಿಯಾಗುವ ಅವಕಾಶವನ್ನು ತಪ್ಪಿಸಿಕೊಂಡ ಪ್ರಣಬ್, 1984ರಲ್ಲಿ ಇಂದಿರಾ ಸಾವಿನ ಬಳಿಕ ಪ್ರಧಾನಿ ಪಟ್ಟ ನೀಡದೇ ಇದ್ದಿದ್ದಕ್ಕೆ ಮುನಿಸಿಕೊಂಡು ಕಾಂಗ್ರೆಸ್ಸಿಗೆ ಗುಡ್‌ಬೈ ಹೇಳಿ 'ರಾಷ್ಟ್ರೀಯ ಸಮಾಜವಾದಿ ಕಾಂಗ್ರೆಸ್' ಪಕ್ಷ ಕಟ್ಟಿದ್ದರು. ಆದರೆ ಕೆಲ ವರ್ಷಗಳ ಬಳಿಕ ಮತ್ತೆ 'ಕೈ' ಹಿಡಿದ ಪ್ರಣಬ್ ಮುಂದೆ ಪಕ್ಷದಲ್ಲಿ ಪ್ರಶ್ನಾತೀತ ನಾಯಕರಾಗಿ ಬೆಳೆಯುತ್ತಲೇ ಹೋದರು. 1973ರಲ್ಲಿ ಇಂದಿರಾಗಾಂಧಿ ಸಂಪುಟದಲ್ಲಿ ವಾಣಿಜ್ಯ ಖಾತೆ ಸಚಿವರಾಗಿದ್ದ ಮುಖರ್ಜಿ ಮುಂದೆ ಕೆಲವೇ ವರ್ಷಗಳಲ್ಲಿ ಹಣಕಾಸು ಸಚಿವರಾಗುವ ಮಟ್ಟಕ್ಕೆ ಬೆಳೆದು ನಿಂತರು. ಮುಂದೆ ನರಸಿಂಹರಾವ್ ಪ್ರಧಾನಿಯಾಗಿದ್ದ ಕಾಲದಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ, ಆ ಬಳಿಕ ವಿದೇಶಾಂಗ ಸಚಿವರಾಗಿ ನಿಯುಕ್ತಿಗೊಳ್ಳುವ ಮೂಲಕ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. 2008ರಲ್ಲಿ ಪ್ರಣಬ್ ಅವರಿಗೆ ಪದ್ಮವಿಭೂಷಣ ಗೌರವವನ್ನು ನೀಡಲಾಗಿದೆ. ಸ್ವತಂತ್ರ ಭಾರತದ 13ನೇ ರಾಷ್ಟ್ರಪತಿಯಾಗಿ ಈ ದೇಶದ ಚುಕ್ಕಾಣಿ ಹಿಡಿದ ಪ್ರಣಬ್ ಮುಖರ್ಜಿ ಅವರ ಸಮರ್ಥ ನಾಯಕತ್ವದಲ್ಲಿ ದೇಶ ಇನ್ನಷ್ಟು ಪ್ರಗತಿಪಥದತ್ತ ನಡೆಯುತ್ತದೆಂಬ ಆಶಯ ಮತ್ತು ಭರವಸೆ ನಮ್ಮದು.

**ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು.**


## ಇದುವರೆಗಿನ ನಮ್ಮ ರಾಷ್ಟ್ರಪತಿಗಳು .....




1952–1962
ಡಾ. ರಾಜೇಂದ್ರ ಪ್ರಸಾದ್




1962–1967
ಸರ್ವಪಳ್ಳಿ ರಾಧಾಕೃಷ್ಣನ್




1967–1969
ಜಾಕೀರ್ ಹುಸೇನ್



1969–1974
ವಿ.ವಿ. ಗಿರಿ



1974–1977
ಫಕ್ರುದ್ದೀನ್ ಅಲಿ ಅಹಮ್ಮದ್




1977–1982
ನೀಲಂ ಸಂಜೀವ ರೆಡ್ಡಿ




1982–1987
ಗ್ಯಾನಿ ಜೈಲ್‌ಸಿಂಗ್




1987–1992
ಆರ್. ವೆಂಕಟರಾಮನ್



1992–1997
ಶಂಕರ್ ದಯಾಳ್ ಶರ್ಮಾ



1997–2002
ಕೆ.ಆರ್. ನಾರಾಯಣನ್



2002–2007
ಎ.ಪಿ.ಜೆ. ಅಬ್ದುಲ್ ಕಲಾಂ



2007–2012
ಪ್ರತಿಭಾ ದೇವಿಸಿಂಗ್ ಪಾಟೀಲ್

# ಯಕ್ಷಸೃಷ್ಟಿ 'ರಾಷ್ಟ್ರಪತಿ ಭವನ'



ಕೆಂಪು ಮರಳುಗಲ್ಲಿನ ಈ ಸೌಧದ ಹೊರಗಿನ ರೂಪ ಥಟ್ಟನೆ ಮನಸೆಳೆಯುವಂತಹದ್ದಲ್ಲ. ಒಳಗೆ ಅಡಿಯಿಟ್ಟ ನಂತರ ಒಂದೊಂದಾಗಿಯೇ ತೆರೆದುಕೊಳ್ಳುತ್ತಾ ಹೋಗುವ ಅಂತರಂಗದ ಸೌಂದರ್ಯ ಮರಳು ಮಾಡದೆ ಬಿಡುವಂತಹದ್ದೂ ಅಲ್ಲ.

ವಿಶಾಲ ಹಜಾರಗಳು, ಎತ್ತರದ ಬೋದಿಗೆಗಳು, ಅಮೃತಶಿಲೆಯ ನೆಲ, ಅದನ್ನಪ್ಪಿಕೊಂಡ ಬೆಲೆಬಾಳುವ ಪರ್ಷಿಯನ್–ಕಾಶ್ಮೀರಿ ನೆಲಗಂಬಳಿ. ಅಪರೂಪದ ತೈಲಚಿತ್ರಗಳು, ದೀಪದ ಗೊಂಚಲು, ಫ್ರೆಂಚ್ ಕಿಟಕಿಗಳು, ಬರ್ಮಾ ಟೀಕ್‌ನ ಪೀಠೋಪಕರಣಗಳು, ಹಿಂದೂ–ಮೊಗಲ್–ಜೈನ್ ವಾಸ್ತುಶಿಲ್ಪಗಳ ಪ್ರಭಾವದ ಕಟಾಂಜನಗಳು, ಛಜ್ಜಾಗಳು ಛತ್ರಿಗಳು, ಜಾಲರಿಗಳು, ಚೌಕ ಶಿಖರಗಳು, ಕಲ್ಲುಗಂಟೆಗಳು, 340 ಕೋಣೆಗಳು, ಸುಮಾರು 20 ಸಾವಿರ ಚದರ ಅಡಿ ವಿಸ್ತೀರ್ಣ... ಬ್ರಿಟನ್ ಕಂಡ ಅತ್ಯಂತ ಪ್ರತಿಭಾವಂತ ವಾಸ್ತುಶಿಲ್ಪಿ ಎಂಬ ಹೆಗ್ಗಳಿಕೆಯ ಎಡ್ವಿನ್ ಲೂಟಿನ್ಸ್ ಎಂಬ 'ಮಯ' ನಿರ್ಮಿಸಿದ ಮಾಯಾಲೋಕ ಇದು.

ಬ್ರಿಟಿಷರ ಕಾಲದ ವೈಸರಾಯ್ ಹೌಸ್, ಈಗ 'ರಾಷ್ಟ್ರಪತಿ ಭವನ'.

'ಇಂಗ್ಲೆಂಡಿನ ದೊರೆಗಳಿಗಿಂತ ಭಾರತದ ಬ್ರಿಟಿಷ್ ಆಡಳಿತಾಧಿಕಾರಿಗಳು ಹೆಚ್ಚು ಸಾಮ್ರಾಜ್ಯಶಾಹಿಗಳು' ಎಂದು ಲೂಟಿನ್ಸ್ ಪತ್ನಿ ಎಮಿಲಾ 'ವೈಸ್‌ರಾಯ್ ಹೌಸ್' ನೋಡಿ ಉದ್ಗರಿಸಿದ್ದರಂತೆ.

5ನೇ ಜಾರ್ಜ್ ಕಾಲದಲ್ಲಿ ಬ್ರಿಟಿಷ್ ರಾಜಧಾನಿಯನ್ನು ಕೊಲ್ಕತ್ತಾದಿಂದ ದೆಹಲಿಗೆ ಸ್ಥಳಾಂತರಿಸಲು ನಿರ್ಧರಿಸಿದ ನಂತರ ನಿರ್ಮಾಣಗೊಂಡ 'ನ್ಯೂ ಡೆಲ್ಲಿ' ಎಂಬ ಹೊಸ ನಗರದಲ್ಲಿ ವೈಸ್‌ರಾಯ್‌ಗಳು ವಾಸಕ್ಕೆ ಕಟ್ಟಿಸಿದ ಐಷಾರಾಮಿ ನಿವಾಸ ಇದು.

ಜಾರ್ಜ್ ಆದೇಶದ ಮೇರೆಗೆ ಆಗಿನ ವೈಸ್‌ರಾಯ್ ಲಾರ್ಡ್ ಹರ್ಡಿಂಗ್ಸ್ ಅವರು ವಾಸ್ತು ಶಿಲ್ಪಿ ಲೂಟಿನ್ಸ್‌ಗೆ ಒಪ್ಪಿಸಿದ ಕೆಲಸವೇ ಹಾಗಿತ್ತು. 'ವಿಶ್ವದ ಯಾವುದೇ ಅರಮನೆ'ಯನ್ನು ನಾಚಿಸುವಂತಿರಬೇಕು ಎನ್ನುವುದು ದೊರೆಯ ಆದೇಶ. ಇಂತಹ ಶಕ್ತಿಶಾಲಿ ಬ್ರಿಟಿಷ್ ದೊರೆಗಳಿಗಾದರೂ ಒಳಪ್ರವೇಶಿಸಿದ 18 ವರ್ಷಗಳಲ್ಲಿಯೇ ಅದನ್ನು ಬಿಟ್ಟು ತೊಲಗಬೇಕಾಗುತ್ತದೆ ಎಂದು ಎಲ್ಲಿ ಗೊತ್ತಿತ್ತು?

ಯುದ್ಧ ಮಾಡದೆ ಗೆದ್ದ 'ಅರಮನೆ' ವಿಶ್ವದಲ್ಲಿ ಇದೊಂದೇ ಇರಬೇಕು. ಇದ–ರಿಂದಾಗಿಯೇ ಗೆದ್ದ 'ಅರಮನೆ'ಯನ್ನು ಏನು ಮಾಡುವುದೆನ್ನುವ ಜಿಜ್ಞಾಸೆ ರಾಷ್ಟ್ರನಾಯಕರನ್ನು ದೇಶಕ್ಕೆ ಸ್ವಾತಂತ್ರ್ಯ ಪಡೆದ ನಂತರ ಕಾಡಿದ್ದುಂಟು. 'ಸಾರ್ವಜನಿಕರಿಗಾಗಿ ಆಸ್ಪತ್ರೆ ಮಾಡಿ' ಎಂದಿದ್ದರು ಮಹಾತ್ಮ ಗಾಂಧೀಜಿ.

ಎಡ್ವಿನ್ ಲೂಟಿನ್ಸ್‌ನ 'ನ್ಯೂಡೆಲ್ಲಿ' ಎಂಬ ಶ್ರೀಮಂತ ನಗರ ನಿರ್ಮಾಣದ ಕಲ್ಪನೆಯನ್ನು ಜವಾಹರಲಾಲ ನೆಹರೂ ಪ್ರಾರಂಭದಲ್ಲಿಯೇ ವಿರೋಧಿಸಿದ್ದರು. ಸ್ವಾತಂತ್ರ್ಯ ಪಡೆದ ನಂತರ ಸಮಾನತೆಯ ಅಸ್ತಿಭಾರದ ಮೇಲೆ ಪ್ರಜಾಪ್ರಭುತ್ವದ ಸೌಧ ಕಟ್ಟಲು ಹೊರಟವರನ್ನು ಅಣಕಿಸುವಂತಿತ್ತು ರಾಜವೈಭೋಗದ ಪ್ರತೀಕದಂತೆ ತಲೆಎತ್ತಿ ನಿಂತಿದ್ದ ವೈಸ್‌ರಾಯ್ ಹೌಸ್.

ಬ್ರಿಟಿಷರು ಕಾಲುಕಿತ್ತರೂ ಸಾಮ್ರಾಜ್ಯಶಾಹಿಯ ಪಳೆಯುಳಿಕೆಯಂತೆ ಉಳಿದುಕೊಂಡ ವೈಸ್‌ರಾಯ್ ಹೌಸ್ ಕೊನೆಗೆ ರಾಷ್ಟ್ರಪತಿ ಭವನವಾಗಿ ಹೋಯಿತು. ದೂರದ ವಿಜಯ ಚೌಕದಿಂದ ನೋಡಿದರೆ ಕಣ್ಣಿಗೆ ಬೀಳುವುದು ರಾಷ್ಟ್ರಪತಿ ಭವನದ ಕಂಚಿನ ಗುಮ್ಮಟದ ಭಾಗ ಮಾತ್ರ. ಸಾಂಚಿಗೆ ಹೋಗಿದ್ದವರಿಗೆ ಎಲ್ಲೋ ಈ ಮಾದರಿಯ ಗುಮ್ಮಟವನ್ನು ನೋಡಿದ್ದೆವಲ್ಲ ಎಂದು ಅನಿಸದೆ ಇರದು.

ಈ ಗುಮ್ಮಟಕ್ಕೆ ಪ್ರೇರಣೆ 1400 ವರ್ಷಗಳಷ್ಟು ಹಿಂದಿನ ಸಾಂಚಿಯ ಸ್ತೂಪ. ಎಡ್ವಿನ್ ಲೂಟಿನ್ಸ್‌ಗೆ ಭಾರತೀಯ ಶಿಲ್ಪದ ಬಗ್ಗೆ ಬಹಳ ಗೌರವ ಇರಲಿಲ್ಲವಾದರೂ ಸಾಂಚಿ ಸ್ತೂಪವನ್ನು ಮಾತ್ರ ಬಹಳ ಮೆಚ್ಚಿಕೊಂಡಿದ್ದರಂತೆ. ಆದರೆ ತಪ್ಪಿಯೂ ತಾನು ವಿನ್ಯಾಸಗೊಳಿಸಿದ ಗುಮ್ಮಟಕ್ಕೆ ಸಾಂಚಿ ಸ್ತೂಪ ಪ್ರೇರಣೆ ಎಂದು ಅವರು ಹೇಳಿಕೊಂಡಿಲ್ಲ.

'ನನಗೆ ಪ್ರೇರಣೆ ರೋಮ್‌ನ ಪ್ಯಾಂಥೋಯನ್' ಎಂದೇ ಆತ್ಮಕತೆ ಯಲ್ಲಿ ಅವರು ಬರೆದುಕೊಂಡಿದ್ದಾರೆ. ಈ ಗುಮ್ಮಟ ಮಾತ್ರವಲ್ಲ 'ರಾಜಪಥದಲ್ಲಿ ನಿಂತರೆ ಇಡೀ ವೈಸ್‌ರಾಯ್ ಭವನ ಕಣ್ಣಿಗೆ ಕಾಣಿಸಬೇಕು. ಭವನದ ದರ್ಬಾರ್‌ಹಾಲ್‌ನ ಸಿಂಹಾಸನದಲ್ಲಿ ಕೂತ ವೈಸ್‌ರಾಯ್‌ಗೆ ರಾಜಪಥದ ಸಮಗ್ರ ನೋಟ ಸಿಗಬೇಕು' ಎನ್ನುವುದು ಲೂಟಿನ್ಸ್‌ನ ಯೋಜನೆ ಆಗಿತ್ತು. ಅದಕ್ಕಾಗಿ ರೈಸಿನಾಹಿಲ್ಸ್‌ನ ತುದಿಯಲ್ಲಿಯೇ ವೈಸ್‌ರಾಯ್ ಭವನ ನಿರ್ಮಿಸಲು ಅವರು ನಕ್ಷೆ ತಯಾರಿಸಿದ್ದರು.

ಆದರೆ ಸಹೋದ್ಯೋಗಿ ಬಕೆರೋ ಅದನ್ನು ಒಪ್ಪದಿದ್ದ ಕಾರಣ ಮೂಲ ನಿವೇಶನದಿಂದ ಸುಮಾರು 400ಯಾರ್ಡ್ ಹಿಂದಕ್ಕೆ ವೈಸ್‌ರಾಯ್ ಭವನ ನಿರ್ಮಾಣ ಆಯಿತು. ಅದರ ಜಾಗದಲ್ಲಿ ಎದುರುಬದುರಾಗಿ ಸೆಕ್ರೆಟರಿಯೆಟ್‌ಗಳು (ಪ್ರಧಾನ ಮಂತ್ರಿ ಮತ್ತು ಹಣಕಾಸು, ಗೃಹ, ರಕ್ಷಣೆ ಮೊದಲಾದ ಸಚಿವರ ಖಾತೆ ಇರುವ ಈಗಿನ ಸೌತ್ ಮತ್ತು ನಾರ್ತ್ ಬ್ಲಾಕ್‌ಗಳು) ತಲೆ ಎತ್ತಿದವು. ಮೂಲ ನಕ್ಷೆ ಪ್ರಕಾರ ನಿರ್ಮಾಣ ನಡೆಯದ್ದಕ್ಕಾಗಿ ಲೂಟಿನ್ಸ್ ಸಿಡಿಮಿಡಿಗೊಂಡಿದ್ದರು. ಈ ಘಟನೆಯನ್ನು 'ಬಕೆರ್ಲೂ (ವಾಟರ್ಲೂ ಎನ್ನುವ ಅರ್ಥದಲ್ಲಿ) ಎಂದು ಆತ್ಮಕತೆಯಲ್ಲಿ ಅವರು ಬಣ್ಣಿಸಿದ್ದಾರೆ. ಬಕೆರೊ ಎಡವಿದ್ದು ನಿಜ, ಲೂಟಿನ್ಸ್ ಯೋಜನೆಯಂತೆಯೇ ವೈಸ್‌ರಾಯ್ ಭವನ ನಿರ್ಮಾಣಗೊಂಡಿದ್ದರೆ ರೈಸಿನಾ ಹಿಲ್‌ನ ಶಿಖರದಲ್ಲಿರುವ ರಾಷ್ಟ್ರಪತಿ ಭವನವನ್ನು ಪೂರ್ಣರೂಪದಲ್ಲಿ ವಿಜಯ ಚೌಕದಿಂದ ಅಲ್ಲ ರಾಜಪಥದಿಂದಲೇ ಕಾಣಬಹುದಿತ್ತು.

ರಾಜಪಥದಿಂದ ಹಾದು ಬಂದು ಎಡಬಲದ ನಾರ್ತ್ ಮತ್ತು ಸೌತ್ ಬ್ಲಾಕ್‌ಗಳನ್ನು ದಾಟಿ ಈ ಭವನದ ಒಳಹೊಕ್ಕರೆ ಮೊದಲು ಕಣ್ಣು ಸೆಳೆವುದು ವಿಶಾಲವಾದ ಅಂಗಳದಲ್ಲಿ ತಲೆ ಎತ್ತಿ ನಿಂತಿರುವ 145 ಅಡಿ ಎತ್ತರದ ಜೈಪುರ ಸ್ಥಂಭ. ಅದರ ತುದಿಯಲ್ಲಿ ಆರು ಭುಜಗಳ ನಕ್ಷತ್ರ ಹೊಂದಿರುವ ಕಮಲದ ಹೂ.

ಇದು ಆ ಕಾಲದ ಜೈಪುರದ ಸರ್ ಸವಾಯಿ ಮಾದೋಸಿಂಗ್ ಕೊಡುಗೆ. ಮುಂಭಾಗದ ಮೆಟ್ಟಿಲು ಹತ್ತಿ ಹೋದರೆ ಹನ್ನೆರಡು ಬೋದಿಗೆಗಳು ಕಾವಲು ಕಾಯುತ್ತಿರುವ ವಿಶಾಲ ಹಜಾರ. ಈ ಬೋದಿಗೆಗಳ ಮೇಲ್ಭಾಗದಲ್ಲಿ ಮರದ ಬಳ್ಳಿಗಳ ಮೂಲಕ ಹೆಣೆದ ಕಲ್ಲುಗಂಟೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮತ್ತೆ ಯಾವುದೋ ದೇವಾಲಯ ನೆನಪಾದೀತು.

ಇದು ಲೂಟಿನ್ಸ್ ಮೂಡಬಿದರೆಯ ಜೈನ ದೇವಾಲಯದ ಕಲ್ಲುಗಂಟೆಗಳಿಂದ ಪ್ರೇರಣೆ ಪಡೆದು ವಿನ್ಯಾಸಗೊಳಿಸಿದ್ದು. ನಂತರದ ದಿನಗಳಲ್ಲಿ ಹಲವಾರು ಖ್ಯಾತ ವಾಸ್ತುಶಿಲ್ಪಿಗಳು ಇದನ್ನು ಉಲ್ಲೇಖಿಸಿದರೂ ಲೂಟಿನ್ಸ್ ಮಾತ್ರ ಒಪ್ಪಿಕೊಂಡಿರಲಿಲ್ಲ. 'ನಿಜವಾದ ಗಂಟೆ ಬಾರಿಸುವುದರಿಂದ ಬ್ರಿಟಿಷ್ ಸಾಮ್ರಾಜ್ಯ ಪತನಗೊಳ್ಳಬಹುದು. ಅದಕ್ಕೆ ಕಲ್ಲಿನ ಗಂಟೆ' ಎಂದು ಲೂಟಿನ್ಸ್ ಆಪ್ತರ ಜತೆ ಲಘುವಾಗಿ ಹೇಳಿಕೊಂಡಿದ್ದರಷ್ಟೆ. ಕಲ್ಲುಗಂಟೆ ದನಿ ಹೊರಡಿಸದಿದ್ದರೂ ಬ್ರಿಟಿಷ್ ಸಾಮ್ರಾಜ್ಯ ಮಾತ್ರ ಉಳಿಯಲಿಲ್ಲ. ಹೊರ ಹಜಾರ ದಾಟಿ ಒಳಪ್ರವೇಶಿಸಿದರೆ ತೆರೆದುಕೊಳ್ಳುವುದು ದರ್ಬಾರ್ ಹಾಲ್. ಮೇಲೆ ವಿಶಾಲವಾಗಿ ಚಾಚಿಕೊಂಡ ಗುಮ್ಮಟ.

ಕೆಳಗೆ ಭಾರತದ ಮೂಲೆಮೂಲೆಗಳಿಂದ ಆಯ್ದು ತಂದ ಶ್ರೇಷ್ಠದರ್ಜೆಯ ಅಮೃತಶಿಲೆಗಳ ನೆಲ. ಛಾವಣಿಯಿಂದ ಜೋತಾಡುತ್ತಿರುವ ಸುಮಾರು ಎರಡು ಟನ್ ತೂಕದ ತೂಗುದೀಪಗಳ ಗೊಂಚಲು. ಮಬ್ಬುಬೆಳಕಲ್ಲಿ ನಕ್ಷತ್ರಗಳಿಂದ ಕಂಗೊಳಿಸುವ ಬಾನಿನಡಿಯಲ್ಲಿ ನಿಂತ ಅನುಭವ.


ಗುಮ್ಮಟದ ಒಳಭಾಗದ ತೈಲಚಿತ್ರಗಳನ್ನು ಬಿಡಿಸಬೇಕೆನ್ನುವ ಪ್ರಯತ್ನ ಲೂಟಿನ್ಸ್ ಒಪ್ಪದ ಕಾರಣ ಈಡೇರಲಿಲ್ಲವಂತೆ. ಇಲ್ಲಿದ್ದ 5ನೇ ಜಾರ್ಜ್ ಕೂತಿದ್ದ 604 ಕಿಲೋ ತೂಕದ ಬೆಳ್ಳಿ ಸಿಂಹಾಸನವನ್ನು ಈಗ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಗಿದೆ. ಆ ಸ್ಥಳದಲ್ಲಿ ಅಮೃತಶಿಲೆಯ ಬುದ್ಧನ ಭವ್ಯಮೂರ್ತಿ ಇರಿಸಲಾಗಿದೆ.

ಸಿಂಹಾಸನದ ಹಿಂಭಾಗ ದಲ್ಲಿದ್ದ ಕಡುಕೆಂಪು ಬಣ್ಣದ ಪರದೆ ಈಗಲೂ ಇದೆ. 70 ವರ್ಷಗಳಿಂದ ಅದಕ್ಕೆ ನೀರು ಸೋಕಿಲ್ಲ. ಬ್ರಿಟಿಷರ ಕಾಲದಲ್ಲಿ ವೈಸ್‌ರಾಯ್ ತನ್ನ ಪತ್ನಿ ಜತೆ ಕೂರುತ್ತಿದ್ದ ಸಿಂಹಾಸನಗಳಿದ್ದ ಕಾರಣಕ್ಕೆ ಇದನ್ನು 'ಪಟ್ಟದ ಕೋಣೆ' ಎಂದೂ ಕರೆಯಲಾಗುತ್ತಿತ್ತು.

ದರ್ಬಾರ್ ಸಭಾಂಗಣವನ್ನು ಸುತ್ತುವರಿದಿರುವ ಮೆಟ್ಟಿಲುಗಳು ಖಾಸಗಿ ಕೋಣೆಗಳತ್ತ ಕೊಂಡೊಯ್ಯುತ್ತದೆ. ಅಲ್ಲಿರುವುದು 54 ಮಲಗುವ ಕೋಣೆಗಳು ಜತೆಗೆ ಅತಿಥಿ ಗೃಹ, ವೈಸ್‌ರಾಯ್‌ನ ನಾಲ್ಕು ಮಾಳಿಗೆಗಳ ಪ್ರತ್ಯೇಕ ನಿವಾಸಸ್ಥಾನವನ್ನು ಈಗ 'ಅಶೋಕಾ ಹಾಲ್' ಎಂದು ಕರೆಯಲಾಗುತ್ತದೆ.

ಈ ಭಾಗವನ್ನು ಪರಸ್ಪರ ಜೋಡಿಸುವ ಸುಮಾರು ಒಂದೂವರೆ ಕಿ.ಮೀ. ಉದ್ದದ ಕಾರಿಡಾರ್‌ನಲ್ಲಿ ಅಲೆದಾಡಿದರೆ ದಾರಿತಪ್ಪಿಹೋಗುವ ಸಾಧ್ಯತೆ ಹೆಚ್ಚು. 'ಇನ್ನೊಬ್ಬ ಮಹಾತ್ಮ'ನೆಂದೇ ಹೇಳಲಾಗುತ್ತಿದ್ದ ಈ ಹೌಸ್‌ನ ಮೊದಲ ನಿವಾಸಿ ವೈಸ್‌ರಾಯ್ ಲಾರ್ಡ್ ಇರ್ವಿನ್ ಎಷ್ಟೋ ಬಾರಿ ತನ್ನ ಮಲಗುವ ಕೋಣೆ ಸೇರಿಕೊಳ್ಳಲಾಗದೆ ಗಲಿಬಿಲಿಗೀಡಾಗುತ್ತಿದ್ದರಂತೆ. ವೈಸ್‌ರಾಯ್‌ನ ಐಷಾರಾಮಿ ಬೆಡ್‌ರೂಮ್ ಕಂಡು ಬೆರಗಾದ ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಸರಳಜೀವಿ ಚಕ್ರವರ್ತಿ ರಾಜಗೋಪಾಲಾಚಾರಿ ಅಲ್ಲಿರಲು ಇಷ್ಟಪಡದೆ ಪಕ್ಕದ ಅತಿಥಿಗೃಹದಲ್ಲಿದ್ದು ಬಿಟ್ಟಿದ್ದರು. ನಂತರದ ಎಲ್ಲ ರಾಷ್ಟ್ರಪತಿಗಳು ಅದನ್ನೇ ಅನುಸರಿಸಿಕೊಂಡು ಬರಬೇಕಾಯಿತು.

**ಅಶೋಕ ಹಾಲ್ ರಾಷ್ಟ್ರಪತಿ ಭವನದ 'ಆಭರಣದ ಪೆಟ್ಟಿಗೆ'.**



ಇದು ವೈಸ್‌ರಾಯ್ ಕಾಲದ ಬಾಲ್ ರೂಮ್. ಮರದ ಹಲಗೆಗಳ ನೆಲದ ಈ ಸಭಾಂಗಣದ ಮಧ್ಯಭಾಗದಲ್ಲಿ ನೃತ್ಯವೇದಿಕೆಯ ಕುರುಹುಗಳು ಈಗಲೂ ಇವೆ. ಎಡಬಲಗಳಲ್ಲಿ ನೃತ್ಯಗಾತಿಯರಿಗೆ ಸುಧಾರಿಸಿಕೊಳ್ಳಲು ನೇಪಥ್ಯ ಇದೆ. ಇಲ್ಲಿನ ನೆಲವನ್ನು ತಬ್ಬಿಕೊಂಡ ಹಾಸುಗಂಬಳಿ ಪರ್ಷಿಯಾದ 16–17ನೇ ಶತಮಾನದ ಶಹಾ ಅಬ್ಬಾಸ್ ಸಂಗ್ರಹದ್ದೆಂದು ಹೇಳಲಾಗಿದೆ.

ಲೂಟೆನ್ಸ್ ವೈಯಕ್ತಿಕ ಆಸಕ್ತಿಯಿಂದ ಹುಡುಕಾಡಿ ಖಾಸಗಿ ಸಂಗ್ರಹಗಳಿಂದ ಇದನ್ನು ಆಯ್ದು ತಂದಿದ್ದರಂತೆ. ಭವನದ ಬೇರೆ ಯಾವ ಕೋಣೆಯ ಛಾವಣಿಯಲ್ಲಿ ಕಾಣದ ತೈಲಚಿತ್ರಗಳು ಅಶೋಕಾ ಸಭಾಂಗಣದಲ್ಲಿ ಕಾಣಬಹುದು. ಲೂಟೆನ್ಸ್‌ನ ವಿರೋಧದ ಹೊರತಾಗಿಯೂ ವೈಸ್‌ರಾಯ್ ವೆಲಿಂಗ್ಟನ್ ಪತ್ನಿ ಪಟ್ಟುಹಿಡಿದದ್ದು ಇದಕ್ಕೆ ಕಾರಣ.

ಇಟಲಿಯ ಖ್ಯಾತ ಕಲಾವಿದ ಕೆನೆಬೆಲ್ಲಾ ಮಾರ್ಗದರ್ಶನದಲ್ಲಿ ಭಾರತದ 12 ಕಲಾವಿದರು ಬಿಡಿಸಿರುವ ಚಿತ್ರದಲ್ಲಿ ದೇಶದ ಪ್ರಮುಖ ಭಾಗಗಳಲ್ಲಿ ಹಾದುಹೋಗಲಾದ ರಾಜನ ಮೆರವಣಿಗೆಯ ದೃಶ್ಯಾವಳಿ ಇದೆ. ಗೋಡೆಮೇಲೆ ನೇತುಹಾಕಲಾಗಿರುವ ಬೃಹತ್‌ಗಾತ್ರದ ತೈಲ ಚಿತ್ರಗಳಿವೆ. ಪ್ರಧಾನಿ ಮತ್ತು ಸಂಪುಟದ ಸದಸ್ಯರಿಗೆ ರಾಷ್ಟ್ರಪತಿಗಳು ಪ್ರಮಾಣವಚನ ಬೋಧಿಸುವ ಈ ಸಭಾಂಗಣಕ್ಕೆ ಸ್ವತಂತ್ರ ಭಾರತದಲ್ಲಿಯೂ ವಿಶೇಷ ಸ್ಥಾನಮಾನ ಇದೆ.

ದರ್ಬಾರ್ ಹಾಲ್‌ನ ವಿರುದ್ಧ ದಿಕ್ಕಿನ ಮೊದಲ ಮಾಳಿಗೆಯನ್ನು ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ಇದು ವೈಸ್‌ರಾಯ್‌ನ ಖಾಸಗಿ ಊತಣಕೂಟದ ಕೋಣೆಯಾಗಿತ್ತಂತೆ. ವೆಂಕಟರಾಮನ್ ರಾಷ್ಟ್ರಪತಿಯಾಗಿದ್ದ ಕಾಲದಲ್ಲಿ ಇದಕ್ಕೆ ಚಾಲನೆ ನೀಡಲಾಯಿತು.

ಅಲ್ಲಿಯವರೆಗೆ ದಾಸ್ತಾನು ಮಳಿಗೆ ಸೇರಿದ್ದ ಐದನೇ ಜಾರ್ಜ್‌ನ ಮೂರ್ತಿ, ಆತ ಕೂರುತ್ತಿದ್ದ ಬೆಳ್ಳಿ ಸಿಂಹಾಸನದಿಂದ ಹಿಡಿದು ಬ್ರಿಟಿಷ್ ಆಳ್ವಿಕೆಯ ಗತನೆನಪುಗಳು ಮರುಕಳಿಸುವಂತೆ ಮಾಡುವ ದೊರೆಯ ಕಿರೀಟದ ಬೆಳ್ಳಿ ಪಡಿಯಚ್ಚು, ಎಲ್ಲ ವೈಸ್‌ರಾಯ್ ಮತ್ತು ಗವರ್ನರ್ ಜನರಲ್‌ಗಳ ತೈಲಚಿತ್ರಗಳು, ವೇಷಭೂಷಣ, ಆಯುಧಗಳು, ಆಭರಣಗಳು ಇತ್ಯಾದಿ ವಸ್ತುಗಳನ್ನು ಇಲ್ಲಿ ಜೋಡಿಸಿಡಲಾಗಿದೆ.

ವಿದೇಶಿ ಗಣ್ಯರು ನೀಡುವ ಬೆಲೆಬಾಳುವ ಉಡುಗೊರೆಗಳ ಸಂಗ್ರಹ ಕೂಡಾ ಇದೆ. ಇಂಡೋನೇಷ್ಯಾದ ಅಧ್ಯಕ್ಷರು ನೀಡಿದ್ದ ಲವಂಗಗಳನ್ನು ಜೋಡಿಸಿ ತಯಾರಿಸಿದ್ದ ದೋಣಿಯೊಂದು ಇಲ್ಲಿದೆ. ಒಳಗಿರುವ ಚಿತ್ರಕಲಾ ಗ್ಯಾಲರಿ ವಿನ್ಯಾಸಗೊಳಿಸಿದವರು ಭಾರತೀಯರಾದ ಕೆ.ಟಿ.ರವೀಂದ್ರನ್.

ಒಂದು ಕಾಲದ ಕ್ಯಾಬಿನೆಟ್ ರೂಮ್ ಈಗ ಕಮಿಟಿ ರೂಮ್. ಬ್ರಿಟಿಷ್ ಸರ್ಕಾರ ಮಹತ್ವದ ತೀರ್ಮಾನ ಕೈಗೊಳ್ಳಲು ಇಲ್ಲಿ ಸಭೆ ನಡೆಸುತ್ತಿತ್ತಂತೆ. 1947ರ ಜೂನ್ 3ರಂದು ದೇಶ ವಿಭಜನೆಯ ಒಪ್ಪಂದಕ್ಕೆ ಸಹಿ ಬಿದ್ದದ್ದು ಇದೇ ಕೋಣೆಯಲ್ಲಿ. ಇಕ್ಕೆಲಗಳಲ್ಲಿ ಪುಸ್ತಕ ಜೋಡಿಸಿಟ್ಟ ಕಪಾಟುಗಳು, ಅವುಗಳ ಮೇಲ್ಭಾಗದಲ್ಲಿ ಭಾರತವನ್ನು ವಿಶ್ವದ ಬೇರೆಬೇರೆ ದೇಶಗಳೊಂದಿಗೆ ಜೋಡಿಸುವ ನೆಲ–ಜಲ–ವಾಯುಮಾರ್ಗಗಳ ಚಿತ್ರಗಳಿವೆ.

ವೈಸ್‌ರಾಯ್ ಕಾಲದ ವಿಶಾಲವಾದ ಡೈನಿಂಗ್ ಹಾಲ್ ಈಗ ವಿದೇಶಿ ಗಣ್ಯರ ಉಪಚಾರಕ್ಕೆ ಮೀಸಲಾಗಿದೆ. ಸುಮಾರು ನೂರುಮಂದಿ ಒಟ್ಟಿಗೆ ಕುಳಿತು ಊಟಮಾಡಲು ಸಾಧ್ಯ ಇರುವ ಈ ಹಾಲ್‌ನ ಗೋಡೆಯ ಮೇಲೆ ಹಿಂದಿನ ರಾಷ್ಟ್ರಪತಿಗಳೆಲ್ಲರ ತೈಲಚಿತ್ರಗಳಿವೆ.

ಊಟದ ಮೇಜಿನ ಮೇಲೆ ರಾಷ್ಟ್ರೀಯ ಪಕ್ಷಿ ನವಿಲಿನ ರೂಪದಲ್ಲಿ ನ್ಯಾಪ್‌ಕಿನ್‌ಗಳನ್ನು ಮಡಿಚಿಡುವುದು ರೂಢಿ. ಇಲ್ಲಿದ್ದ ಹಳೆಯ ಚರ್ಮದ ಕುರ್ಚಿಗಳ ಬದಲಿಗೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ರಾಜಸ್ತಾನಿ ಶೈಲಿಯ ಆಸನಗಳನ್ನು ತರಿಸಿದ್ದರು. ವಿದೇಶಿ ಗಣ್ಯರಿಗೆ ಇಲ್ಲಿಯೇ ಔತಣಕೂಟ.

ಭವನದ ದಕ್ಷಿಣದ ಭಾಗ ಅತಿಥಿಗಳಿಗೆ ಮೀಸಲು. ಅಲ್ಲಿ ದ್ವಾರಕಾ ಮತ್ತು ನಲಂದಾ ಎಂಬ ಎರಡು ಅತಿಥಿಗೃಹಗಳಿವೆ. ಮೊದಲನೆಯದ್ದು ಬೇರೆ ದೇಶಗಳ ಅಧ್ಯಕ್ಷ–ಪ್ರಧಾನಿಗಳ ವಾಸಕ್ಕೆ. ಎರಡನೆಯದು ಅವರ ಕುಟುಂಬ ವರ್ಗಕ್ಕೆ. ಊಟ, ಮನರಂಜನೆ, ಕಿರುಸಭಾಂಗಣವನ್ನೊಳಗೊಂಡ ಈ ನಿವಾಸದ ಪೀಠೋಪಕರಣಗಳು ಬರ್ಮಾದಿಂದ ತಂದಿದ್ದ ತೇಗದ ಮರದ್ದು. ನೆಲಗಂಬಳಿ ಕಾಶ್ಮೀರದ್ದು.

ಒಳ ಅಲಂಕಾರಗಳೆಲ್ಲ ಬ್ರಿಟಿಷ್ ಪ್ರಭಾವಿತ. ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಕಾಲದಲ್ಲಿ ಸೇರ್ಪಡೆಯಾದ ಶೋಕೇಸ್ ಒಂದೇ ಇಲ್ಲಿ ಹೊಸತು. ಅದರ ಪಕ್ಕದಲ್ಲಿ ಔಪಚಾರಿಕ ಭೇಟಿಯ ಕೋಣೆಗಳಿವೆ. ಉತ್ತರದ ಡ್ರಾಯಿಂಗ್ ರೂಮ್‌ನಲ್ಲಿ ವಿದೇಶದ ಗಣ್ಯರನ್ನು ಸಂಧಿಸುತ್ತಾರೆ. ಪಕ್ಕದಲ್ಲಿಯೇ ಇರುವ ಇನ್ನೊಂದು ಸಭಾಂಗಣದ ರಾಜ್ಯಪಾಲರ ಸಭೆಗೆ ಮೀಸಲು.

ಇಷ್ಟು ಮಾತ್ರವಲ್ಲ, ಗಾಲ್ಫ್ ಮೈದಾನ, ಈಜುಕೊಳ, ಸ್ಕ್ವಾಷ್ ಮತ್ತು ಟೆನಿಸ್‌ಕೋರ್ಟ್, ಏಕ ಕಾಲದಲ್ಲಿ ಒಂದು ಸಾವಿರ ಮಂದಿಗೆ ಅಡಿಗೆ ಮಾಡಬಹುದಾದ ಅಡಿಗೆ ಮನೆ. ಲಾಂಡ್ರಿ, ಕ್ಷೌರಿಕನ ಅಂಗಡಿ, ಅಂಚೆ ಕಚೇರಿ ಕೂಡಾ ಒಳಗಿವೆ. ರಾಷ್ಟ್ರಪತಿ ಸೆಕ್ರೆಟರಿಯೇಟ್‌ನ 350 ಸಿಬ್ಬಂದಿ, ಮನೆಯೊಳಗಿನ ಕೆಲಸಕ್ಕೆ 220 ನೌಕರರು, 50 ಸದಸ್ಯರ ಅಡಿಗೆ ತಂಡ, ತೋಟದಲ್ಲಿ ಕೆಲಸ ಮಾಡಲು 165 ಕಾರ್ಮಿಕರು, ಕೇವಲ ಸ್ವಚ್ಛತಾಕಾರ್ಯ–ಕ್ಕೆ 150 ಕಾರ್ಮಿಕರು. 60 ಕಚೇರಿ ಅಟೆಂಡರ್‌ಗಳು ವಿದ್ಯುತ್‌ದೀಪ ಮತ್ತು ಹವಾನಿಯಂತ್ರಣ ವ್ಯವಸ್ಥೆಯ ನಿರ್ವಹಣೆಗೆ ಡಜನ್‌ಗಟ್ಟಲೆ ಎಲೆಕ್ಟ್ರಿಷಿಯನ್ಸ್, ತೋಟದಲ್ಲಿ ಹಕ್ಕಿ ಓಡಿಸಲು 150 ಕೆಲಸದಾಳುಗಳು...! ಸತ್ತಮೇಲಿನ ಸ್ವರ್ಗ ನೋಡಿದವರು ಯಾರು ?

ರಾಷ್ಟ್ರಪತಿ ಭವನದ ವೈಭವಕ್ಕೆ ಮಾರುಹೋಗುವವರು ಈ 'ಕಲ್ಲಿನ ಅರಮನೆ'ಗೆ ಗಾಂಧೀಜಿ ತನ್ನ ಮೊದಲ ಭೇಟಿ ಸಂದರ್ಭದಲ್ಲಿ ಮೌನವಾಗಿಯೇ ವ್ಯಕ್ತಪಡಿಸಿದ್ದ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳಬೇಕು.

ವೈಸ್‌ರಾಯ್ ಲಾರ್ಡ್ ಇರ್ವಿನ್ ಭೇಟಿಗೆಂದು ಮೊದಲ ಬಾರಿ ವೈಸ್‌ರಾಯ್ ಭವನ ಪ್ರವೇಶಿಸಿದ್ದ ಗಾಂಧೀಜಿ ಒಮ್ಮೆ ಸುತ್ತಲೂ ಕಣ್ಣುಹಾಯಿಸಿ ನೇರವಾಗಿ ಇರ್ವಿನ್ ಕೂತ ಸಿಂಹಾಸನದ ಎದುರು ನೆಲದಲ್ಲಿ ಚಕ್ಕಳಮಕ್ಕಳ ಹಾಕಿ ಕೂತುಬಿಟ್ಟರಂತೆ.

ವೈಸ್‌ರಾಯ್‌ನ ನಾಯಿ ಬಂದು 'ಅಪರೂಪದ ವಸ್ತು' ಎಂಬಂತೆ ಮೂಸಿ ನೋಡಿ ಹೋಗಿತ್ತಂತೆ. ಬರಿ ನೆಲದಲ್ಲಿ ಕೂತಿದ್ದ ಆ ಬೈರಾಗಿ ಎದುರಿನ ಸಿಂಹಾಸನದಲ್ಲಿ ಕೂತಿದ್ದ 'ದೊರೆ'ಯನ್ನು ಕೆಳಗುರುಳಿಸಿದ ಕತೆ ಈಗ ಇತಿಹಾಸದ ಭಾಗ.

**ಸಾಮ್ರಾಜ್ಯಶಾಹಿ ಮನಸಿನ ಮಹಾನ್ ಶಿಲ್ಪಿ**

ರಾಷ್ಟ್ರಪತಿ ಭವನ, ಸೌತ್ ಮತ್ತು ನಾರ್ತ್ ಬ್ಲಾಕ್, ಸಂಸತ್ ಭವನ, ಇಂಡಿ–ಯಾಗೇಟ್, ರಾಜಪಥ, ತೀನ್‌ಮೂರ್ತಿ ಭವನ, ನಾರ್ತ್ ಮತ್ತು ಸೌತ್ ಅವೆನ್ಯೂ (ಈಗಿನ ಸಂಸದರ ವಸತಿ ಸಂಕೀರ್ಣ), ಕನ್ನಾಟ್‌ಪ್ಲೇಸ್‌ಗಳನ್ನು ಒಳಗೊಂಡ ಸುಮಾರು 2400 ಎಕರೆ ಪ್ರದೇಶವೇ 'ನ್ಯೂಡೆಲ್ಲಿ'.

ಇದನ್ನು ವಿನ್ಯಾಸಗೊಳಿಸಿ ನಿರ್ಮಿಸಿದ ವಾಸ್ತುಶಿಲ್ಪಿ ಎಡ್ವರ್ಡ್ ಲೇಂಡ್ಸಿಯರ್ ಲೂಟೆನ್ಸ್. ವಾಸ್ತುಶಿಲ್ಪದ ವಿಷಯದಲ್ಲಿ ಪಕ್ಕಾ ಸಂಪ್ರದಾಯವಾದಿ. ಇಟಲಿಯ ಶಿಲ್ಪಶಾಸ್ತ್ರ ಅತನಿಗೆ ಆದರ್ಶ. ಭಾರತಕ್ಕೆ ಕಾಲಿಡುವವರೆಗೆ ಇಲ್ಲಿನ ವಾಸ್ತುಶಿಲ್ಪದ

ಬಗ್ಗೆ ಆತನಿಗೆ ಅಭಿಮಾನ ಇರಲಿಲ್ಲ. ಆದರೆ ಅದನ್ನು ತಿಳಿದ ನಂತರವೂ ಅಭಿಮಾನ ವ್ಯಕ್ತಪಡಿಸಿದ್ದು ಕಡಿಮೆ.

ವೈಸ್‌ರಾಯ್ ಭವನವನ್ನು ಕಂಡ ಭಾರತೀಯರು ತಮ್ಮನ್ನು ಗುರುತಿಸಿಕೊಳ್ಳುವ ರೀತಿಯಲ್ಲಿ ಸ್ಥಳೀಯ ವಾಸ್ತುಶಿಲ್ಪದ ಛಾಯೆ ಇರಬೇಕೆಂಬ ಬಯಕೆ ಬ್ರಿಟಿಷ್ ದೊರೆಗೆ ಇತ್ತಂತೆ. ಒಲ್ಲದ ಮನಸ್ಸಿನಿಂದ ಇದನ್ನೊಪ್ಪಿಕೊಂಡ ಲೂಟಿನ್ಸ್, ದೊರೆಯ ಬಯಕೆಯನ್ನು ನೆರವೇರಿಸಿದ. ಆದರೆ ಎಲ್ಲಿಯೂ ಅದನ್ನು ಬಾಯಿಬಿಟ್ಟು ಹೇಳಲಿಲ್ಲ.

ಬೌದ್ಧ ಕಟಾಂಜನಗಳು, ಹಿಂದೂ ಮತ್ತು ಜಿನದೇವಾಲಯದ ಕಲ್ಲುಗಂಟೆಗಳು ಮತ್ತು ಛತ್ರಿಗಳು, ಮೊಘಲರ ಕಾಲದ ಕಲ್ಲಿನ ಜಾಲರಿಗಳು ಹಾಗೂ ದೆಹಲಿಯ ಕಡುಬೇಸಿಗೆಯನ್ನು ಗಮನಿಸಿ ನಿರ್ಮಿಸಿದ ಕಲ್ಲು ಚಪ್ಪಡಿಯ ಛಜ್ಜಾಗಳು... ಹುಡುಕುತ್ತಾ ಹೋದರೆ ರಾಷ್ಟ್ರಪತಿ ಭವನದಲ್ಲಿ ಭಾರತೀಯ ವಾಸ್ತುಶಿಲ್ಪದ ನೆರಳು ಕಾಣುವುದು ಕಷ್ಟವಲ್ಲ.

ನ್ಯೂಡೆಲ್ಲಿಯ ವಿನ್ಯಾಸ ಲೂಟಿನ್ಸ್‌ದ್ದಾದರೂ ಭವನ ನಿರ್ಮಾಣದ ಹೆಚ್ಚಿನ ಕಾಮಗಾರಿ ಮಾಡಿದ್ದು ಹಾರೂನ್-ಅಲ್-ರಷೀದ್ ಎಂಬ ಮುಸ್ಲಿಮ್ ಗುತ್ತಿಗೆದಾರ. ಹೊರಹಜಾರ ನಿರ್ಮಿಸಿದ್ದು ಸುಜಾನ್‌ಸಿಂಗ್, ಸೋಬಾ ಸಿಂಗ್. ಲೂಟಿನ್ಸ್ ಆತ್ಮಕಥೆಯಲ್ಲಿ ಇದನ್ನೆಲ್ಲ ಬರೆದಿಲ್ಲ. ಅಲ್ಲಿಯೂ ಆತ ಸ್ಮರಿಸಿದ್ದು ಇಟಲಿಯ ವಾಸ್ತುಶಿಲ್ಪದ ಸ್ಫೂರ್ತಿಯನ್ನು. ಎಂಥ ಮಹಾನ್ ಶಿಲ್ಪಿ, ಅದೆಂಥ ಸಾಮ್ರಾಜ್ಯಶಾಹಿ ಮನಸ್ಸು.

## ಸರ್ವ ಋತು ಚೆಲುವಿನ ಮೊಘಲ್ ಉದ್ಯಾನ

ಉತ್ತರ ಭಾರತದ ಐಷಾರಾಮಿ ಉದ್ಯಾನಗಳೆಲ್ಲ ಮೊಘಲರ ಕೊಡುಗೆ. ಹಿಂದೂ ಮತ್ತು ಬೌದ್ಧರ ಕಾಲದಲ್ಲಿಯೂ ಉದ್ಯಾನಗಳು ನಿರ್ಮಾಣಗೊಂಡಿದ್ದರೂ ಅವುಗಳಲ್ಲಿ ಬಹಳಷ್ಟು ಈಗ ಉಳಿದಿಲ್ಲ. ಮೊಘಲ್ ದೊರೆಗಳು ಉದ್ಯಾನಗಳಲ್ಲಿಯೇ ಬಿಡುವಿನ ಕಾಲ ಕಳೆದವರು. ಹವಾನಿಯಂತ್ರಣ ವ್ಯವಸ್ಥೆ ಇಲ್ಲದ ಆ ದಿನಗಳಲ್ಲಿ ದೊರೆಗಳು ಉದ್ಯಾನಗಳ ತಂಪು ಹಸಿರಿನ ಮೊರೆಹೋಗುತ್ತಿದ್ದರು.

ರಾಷ್ಟ್ರಪತಿ ಭವನಕ್ಕೊಂದು ಉದ್ಯಾನ ನಿರ್ಮಿಸುವ ಯೋಚನೆ ಬಂದಾಗ ಎಡ್ವಿನ್ ಲೂಟಿನ್ಸ್‌ಗೆ ನೆನಪಾಗಿದ್ದು ಮೊಘಲರ ಉದ್ಯಾನಗಳು. ಇದಕ್ಕಾಗಿ ಪಾಕಿಸ್ತಾನ ಮತ್ತು ಕಾಶ್ಮೀರಕ್ಕೂ ಅವರು ಭೇಟಿ ನೀಡಿದ್ದರು.

ಅದೇ ಶೈಲಿಯನ್ನು ಅನುಸರಿಸಿ ನಿರ್ಮಿಸಿದ ಕಾರಣಕ್ಕಾಗಿ ಉದ್ಯಾನಕ್ಕೆ 'ಮೊಘಲ್ ಗಾರ್ಡನ್' ಎಂದು ಹೆಸರಿಟ್ಟಿದ್ದರು ಲೂಟಿನ್ಸ್.ಹದಿಮೂರು ಎಕರೆಯಲ್ಲಿ ಹರಡಿರುವ ಮೊಘಲ್‌ಗಾರ್ಡನ್‌ನ ಮುಖ್ಯ ಉದ್ಯಾನದ ವಿಸ್ತೀರ್ಣ ಸುಮಾರು 35 ಸಾವಿರ ಚದರ ಅಡಿ. ಸಮಾನ ನಾಲ್ಕುಭಾಗಗಳಾಗಿ ವಿಂಗಡಿಸುವ ಕಾಲುವೆಗಳು ಇದರ ವೈಶಿಷ್ಟ್ಯ.

ದಿನದ ಬೇರೆಬೇರೆ ಹೊತ್ತಿನಲ್ಲಿ ರಾಷ್ಟ್ರಪತಿ ಭವನದ ಪ್ರತಿಬಿಂಬ ಕಾಲುವೆ ನೀರಲ್ಲಿ ಕಾಣಬಹುದು. ಕಾಲುವೆಗಳ ಸಂಗಮಗಳಲ್ಲಿ ಸದಾ ಚಿಮ್ಮುತ್ತಿರುವ ತಾವರೆಯಾಕಾರದ ಕಾರಂಜಿಗಳ ಹಾಡು, ಕೊಳದ ನೀರಲ್ಲಿ ತೇಲಿಬಿಟ್ಟಿರುವ ಹಲಗೆಗಳಲ್ಲಿ ಹಾಕಿರುವ ಕಾಳು ತಿನ್ನಲು ಬರುವ ಹಕ್ಕಿಗಳ ಚಿಲಿಪಿಲಿಯ ಹಿಮ್ಮೇಳ.

ಸುತ್ತಲೂ ಆವರಿಸಿಕೊಂಡಿರುವ ಹೂವಿನ ಕಂಪು. ಪ್ರಕೃತಿಯ ಮಡಿಲು ಎಂದರೆ ಇದೇ ಇರಬೇಕು ಎನ್ನುವಂತಹ ವಾತಾವರಣ. ಕೇಂದ್ರ ಭಾಗದಲ್ಲಿರುವ ಹುಲ್ಲುಹಾಸಿನಲ್ಲಿಯೇ ಈಗ ವರ್ಷಕ್ಕೆರಡು ಬಾರಿ ಜನವರಿ 26 ಮತ್ತು ಆಗಸ್ಟ್ 15ರಂದು ರಾಷ್ಟ್ರಪತಿಗಳು 'ಎಟ್‌ಹೋಮ್' ಕೂಟ ನಡೆಸುವುದು. ವೈಸ್‌ರಾಯ್‌ಗಳ ಕಾಲದಲ್ಲಿ ಇಲ್ಲಿ ಅತಿಥಿಗಳ ಚಹಾಕೂಟ ನಡೆಯುತ್ತಿತ್ತಂತೆ. ಮೊ ರಾಣಿ ಎಲಿಜಬೆತ್, ಅಬ್ರಾಹಂ ಲಿಂಕನ್ ಹೆಸರುಗಳು ಗುಲಾಬಿ ಗಿಡಗಳಿಗಿವೆ.

ಹಸಿರು ಗುಲಾಬಿಯಿಂದ ಹಿಡಿದು ಕಪ್ಪು ಕಡುಛಾಯೆ ಹೊಂದಿರುವ ಓಕ್ಲಾಹೋಮಾ ಗುಲಾಬಿವರೆಗಿನ ತಳಿವೈವಿಧ್ಯಗಳನ್ನು ಇಲ್ಲಿ ಕಾಣಬಹುದು. ಹನ್ನೆರಡು ಅಡಿ ಎತ್ತರದ ಗೋಡೆಗಳ ಮಧ್ಯೆ 'ಪರ್ದಾ' ಗಾರ್ಡನ್ ಮೊಘಲರ ಅನುಕರಣೆ. ಉತ್ತರ ಮತ್ತು ದಕ್ಷಿಣದ ತುದಿಗಳಲ್ಲಿ ಎರಡು ಟೆರೇಸ್ ಗಾರ್ಡನ್‌ಗಳಿವೆ. ಪಶ್ಚಿಮದ ತುದಿಯಲ್ಲಿ 'ಬಟರ್‌ಫ್ಲೈ ಗಾರ್ಡನ್' ಇದೆ.

ದೇಶದಲ್ಲಿಯೇ ಅತ್ಯುತ್ತಮವೆನ್ನಲಾದ ಬೊನ್ಸಾಯ್ ಇಲ್ಲಿ ಲಭ್ಯ.

ರಾಷ್ಟ್ರಪತಿಗಳಾದವರೆಲ್ಲರೂ ತಮ್ಮದೇ ರೀತಿಯಲ್ಲಿ ಇದನ್ನು ಬೆಳೆಸಿದ್ದಾರೆ. ಇದರಿಂದಾಗಿಯೇ ಇಲ್ಲಿ ನೆದರ್‌ಲ್ಯಾಂಡ್‌ನ ಟೂಲಿಪ್ಸ್, ಬ್ರೆಜಿಲ್‌ನ ಆರ್ಕಿಡ್ಸ್, ಫ್ರಾನ್ಸ್‌ನ ಆಲೀವ್ಸ್, ಚೀನಾದ ವಾಟರ್ ಲಿಲ್ಲಿ, ಜಪಾನ್‌ನ ಚೆರ್ರಿ ಬ್ಲಾಸಮ್ ಮಾತ್ರವಲ್ಲ ಖಜುರಾಹೋದ ಬೋಗನ್‌ವಿಲ್ಲಾ, ಚೆನ್ನೈನ ಮಲ್ಲಿಗೆ ಗಿಡಗಳು... ಹೀಗೆ ದೇಶವಿದೇಶ ಪ್ರಸಿದ್ಧ ಹೂವಿನ ತಳಿಗಳನ್ನು ಹೊಂದಿರುವ ಹೆಗ್ಗಳಿಕೆ ಮೊಘಲ್ ಗಾರ್ಡನ್‌ನದ್ದು.

ಎಪಿಜೆ ಅಬ್ದುಲ್ ಕಲಾಮ್ ಅಪರೂಪದ ಔಷಧ ಗುಣದ ಸಸ್ಯಗಳ 'ಹರ್ಬಲ್ ಗಾರ್ಡನ್' ನಿರ್ಮಿಸಿದ್ದಾರೆ. ಪ್ರತಿವರ್ಷ ಫೆಬ್ರುವರಿ-ಮಾರ್ಚ್ ತಿಂಗಳಲ್ಲಿ ಮಾತ್ರ ಮೊಘಲ್ ಗಾರ್ಡನ್‌ಗೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ. ಈ ವರ್ಷ ಭೇಟಿ ನೀಡಿದವರ ಸಂಖ್ಯೆ ಆರು ಲಕ್ಷ.

❑ ದಿನೇಶ್ ಅಮಿನ್‌ಮಟ್ಟು

ಕೃಪೆ : ಪ್ರಜಾವಾಣಿ



# ಸಾಹಿತ್ಯ ಸಂಜೆಯಲ್ಲಿ – ಜೈನ ಸಾಹಿತ್ಯದ ಅನನ್ಯತೆ



ಜೈನರ ಕಾವ್ಯದ, ಶರಣರ ವಚನದ, ದಾಸರ ಹಾಡಿನ ಕಂದ, ವೃತ್ತ, ರಗಳೆಗಳ ಮೂಲಕ ಕರ್ನಾಟಕದ ಸಮಗ್ರ ಸಂಸ್ಕೃತಿಗೆ ಬುನಾದಿ ಹಾಕಿದವರು ಜೈನ ಕವಿಗಳು. ಸಂಸ್ಕೃತ ಮತ್ತು ಪ್ರಾಕೃತಭಾಷೆ ಎರಡನ್ನು ಮೆದ್ದಿ–ತಿದ್ದಿ ಸ್ವತಂತ್ರ ಕನ್ನಡಭಾಷೆಯನ್ನು ರಚಿಸಿದರು ಎಂಬುದಾಗಿ ಜುಲೈ 28, ಶನಿವಾರ ದೆಹಲಿ ಕರ್ನಾಟಕ ಸಂಘದ, ಸೆಮಿನಾರ್ ಹಾಲಿನಲ್ಲಿ ನಡೆದ ಸಾಹಿತ್ಯ ಸಂಜೆಯಲ್ಲಿ ಮಾತನಾಡಿದ ನಾಡೋಜ ಹಂಪ ನಾಗರಾಜಯ್ಯ ಅವರು ಅಭಿಪ್ರಾಯಪಟ್ಟರು. ಸಾಹಿತ್ಯ ಸಮಿತಿಯ ಅಧ್ಯಕ್ಷ ಡಾ.ಬಿಳಿಮಲೆ ಕಾರ್ಯಕ್ರಮದ ಮೊದಲಿಗೆ ಡಾ. ಹಂಪನಾಗರಾಜಯ್ಯ ಅವರಿಗೆ ದೆಹಲಿಯ ಕುಂದ ಕುಂದ ಭಾರತಿ ದಿಗಂಬರ ಜೈನ ಸಂಸ್ಥೆ ನೀಡುತ್ತಿರುವ 'ಚಾರಿತ್ರಿಕ ಚಕ್ರವರ್ತಿ' ಪ್ರಶಸ್ತಿಗಾಗಿ ಅಭಿನಂದಿಸಿ ಸ್ವಾಗತಿಸಿದರು. ಇದೇ ಹಿನ್ನೆಲೆಯಲ್ಲಿ ಸಂಘದ ಮುಖವಾಣಿ 'ಅಭಿಮತ' ದಲ್ಲಿ ಆಚಾರ್ಯ ಶ್ರೀ ವಿದ್ಯಾನಂದ ಮುನಿಗಳ ಕುರಿತು ವಿಶೇಷ ಲೇಖನವನ್ನು ಈಗಾಗಲೇ ಪ್ರಕಟಿಸಿದ ಕುರಿತು ಸಾಹಿತ್ಯ ಸಮಿತಿಯ ಸಂಚಾಲಕಿ ರೇಣುಕಾ ನಿಡಗುಂದಿ ವಿವರಿಸಿದರು ಮತ್ತು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಹಂಪನಾ ಅವರಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

**ಪುಸ್ತಕ ಬಿಡುಗಡೆ :** ಉಡುಪಿಯ ಕೆ.ರಾಘವೇಂದ್ರ ಭಟ್ ಅವರು ರಚಿಸಿದ 'ಭಾರತೀಯ ಸಾಹಿತ್ಯ, ಸಂಗೀತ, ಸಂಸ್ಕೃತಿ, ಸಂಸ್ಕಾರ ಹಾಗೂ ಸಹಬಾಳ್ವೆ' ಮತ್ತು 'ಕೂಸಪ್ಪನ ಸಂದೇಹಗಳು ಮತ್ತು ಸಂದೇಶಗಳು' ಎಂಬೆರಡು ಕೃತಿಗಳನ್ನು ಬಿಡುಗಡೆಗೊಳಿಸಿದ ನಾಡೋಜ ಕಮಲಾ ಹಂಪನಾ ಅವರು ಎರಡೂ ಪುಸ್ತಕಗಳನ್ನು ವಿಸ್ತಾರವಾಗಿ ಪರಿಚಯಿಸಿದರು. 'ಭಾರತೀಯ ಸಾಹಿತ್ಯ, ಸಂಗೀತ, ಸಂಸ್ಕೃತಿ, ಸಂಸ್ಕಾರ ಹಾಗೂ ಸಹಬಾಳ್ವೆ' ಪುಸ್ತಕದಲ್ಲಿ ಲೇಖಕರು ಭಾರತೀಯ ಸಂಸ್ಕೃತಿ, ಸಂಗೀತ ಮತ್ತು ಜೀವನ ವಿಧಾನವನ್ನು ಅತ್ಯಂತ ತಾಳ್ಮೆಯಿಂದ ಸಂಗ್ರಹಿಸಿ ವಿಶ್ಲೇಷಿಸಿದರ ಬಗ್ಗೆ ಕಮಲಾ ಹಂಪನಾ ಅವರು ತಮ್ಮ ವಿಶೇಷ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅದರಲ್ಲಿಯೂ ಕಳೆದ ಅನೇಕ ವರ್ಷಗಳಿಂದ ಉಡುಪಿ ಪರಿಸರದಲ್ಲಿ ಮನೆಮನೆಗೆ ಹೋಗಿ ಸಂಗೀತವನ್ನು ಹೇಳಿಕೊಡುತ್ತಿರುವ ಮತ್ತು ಸಂಗೀತ ಸಂಯೋಜನೆ ಮಾಡುತ್ತಿರುವ ಶ್ರೀ ಭಟ್ ಅವರ ಪ್ರಯತ್ನವನ್ನು ಶ್ಲಾಘಿಸುವುದರ ಜತೆಗೆ 'ಭಾರತೀಯ ಸಂಸ್ಕೃತಿ' ಎಂಬ ಪದವು ಬಹಳ ವಿಸ್ತಾರವಾದ ಅರ್ಥವುಳ್ಳದ್ದು ಎಂಬುದರ ಕಡೆಗೆ ಪ್ರೇಕ್ಷಕರ ಗಮನ ಸೆಳೆದ ಅವರು ಭಾರತೀಯ ಸಂಸ್ಕೃತಿಯಲ್ಲಿ ಹಲವು ವೈವಿಧ್ಯತೆಗಳಿವೆ. ಅನೇಕ ಧರ್ಮಗಳು, ಅನೇಕ ಜಾತಿಗಳು, ಬುಡಕಟ್ಟುಗಳು, ಆಚರಣೆಗಳು, ಭಾಷೆಗಳು ಶತಮಾನಗಳಿಂದ ಒಂದಕ್ಕೊಂದು ಪೂರಕವಾಗಿ ಸಹಕರಿಸುತ್ತ ಭಾರತೀಯ ಸಂಸ್ಕೃತಿಯನ್ನು ಅತ್ಯಂತ ಸತ್ವಶಾಲಿಯಾಗಿ ಬೆಳೆಸಿದೆ. ಆದರೆ ಪ್ರಸ್ತುತ ಲೇಖಕರು ಈ ವೈವಿಧ್ಯಮಯ ಸಂಸ್ಕೃತಿ ಕಡೆಗೆ ಅಷ್ಟೇನೂ ಬೆಳಕು ಚೆಲ್ಲದೇ ಕೇವಲ ವೈದಿಕ ಸಂಸ್ಕೃತಿಯ ಕಡೆಗೆ ಹೆಚ್ಚು ಗಮನ ಹರಿಸಿದ್ದಾರೆ. ಇದು ತಪ್ಪೇನೂ ಅಲ್ಲ. ಆದರೆ ಭಾರತೀಯ ಸಂಸ್ಕೃತಿ ಬಗ್ಗೆ ಮಾತಾಡುವಾಗ ಅದರ ಅನೇಕತೆಯ ಬಗ್ಗೆ ಗಮನಹರಿಸಬೇಕಾದ್ದು ಅವಶ್ಯಕ ಎಂದು ಹೇಳಿದರು.

'ಕೂಸಪ್ಪನ ಸಂದೇಹಗಳು ಮತ್ತು ಸಂದೇಶಗಳು' ಕೃತಿಯಲ್ಲಿ ಕೂಸಪ್ಪ ಬೇರಾರು ಆಗಿರದೇ ಸ್ವತಃ ಲೇಖಕರೇ ಆಗಿದ್ದಾರೆ. ಕೂಸಪ್ಪನೆಂಬ ಕಾಲ್ಪನಿಕ ಆದರೆ ನಿಜವೂ ಆಗಿರುವ ಪಾತ್ರದ ಮೂಲಕ ಸಮಾಜದ ಕೆಲವು ಓರೆಕೋರೆಗಳನ್ನು ಬಯಲಿಗೆಳೆಯಲು ಲೇಖಕರು ಪ್ರಯತ್ನಿಸಿದ್ದಾರೆ. ಈ ಪ್ರಯತ್ನ ಅಭಿನಂದನೀಯ ಎಂದ ಕಮಲಾ ಹಂಪನಾ ಮತ್ತು ಹಂಪ ನಾಗರಾಜಯ್ಯ ಅವರು ಲೇಖಕ ರಾಘವೇಂದ್ರ ಭಟ್ಟರಿಗೆ ಹೂಗುಚ್ಛ ಮತ್ತು ಶಾಲು ಹೊದಿಸಿ ಗೌರವಿಸಿದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸ್ಮರಣಿಕೆ ನೀಡಿ ಅಭಿನಂದಿಸಿದರು. ಲೇಖಕ ಕೆ. ರಾಘವೇಂದ್ರ ಭಟ್ ಅವರು ತಮ್ಮ ಈ ಎರಡೂ ಕೃತಿಗಳನ್ನು ಬಿಡುಗಡೆಗೊಳಿಸಲು ಅನುವು ಮಾಡಿಕೊಟ್ಟ ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಮುಂದಿನ ಕವನ ವಾಚನದಲ್ಲಿ ನಾಡೋಜ ಕಮಲಾ ಹಂಪನಾ ತಮ್ಮ 'ಕಮಲಾಪ್ರಿಯ' ಅಂಕಿತದಲ್ಲಿ ಬರೆದ ವಚನಗಳನ್ನು ವಾಚಿಸಿದರೆ, ಜೀವವಿಮಾ ಅಧಿಕಾರಿಯಾಗಿರುವ ಅವರ ಪುತ್ರಿ ರಾಜಶ್ರೀ ರತೋ, ರತೋ ..., 'ಶಾಂತಲ' ಮತ್ತು 'ಬೋರಿಸ್ ಬೇಕರ್' ಕುರಿತ ಕವನ ವಾಚಿಸಿದರು. ಮತ್ತೋರ್ವ ಪುತ್ರಿ ಎಚ್.ಎನ್.ಆರತಿ 'ವಾರಣಾಸಿ', 'ಎಲ್ಲವೂ ಸರಿ' ಮತ್ತು 'ಒಂದೇ ಮಗ್ಗಲು' ಎಂಬ ತಮ್ಮ ಸ್ವರಚಿತ ಕವನ ವಾಚಿಸಿ ಸಭಿಕರನ್ನು ಕೆಲಕಾಲ ಕಾವ್ಯಲೋಕಕ್ಕೆ ಕರೆದೊಯ್ದರು.

**ಪ್ರೊ.ಎಸ್.ಎಸ್.ಮೂರ್ತಿ ಅವರಿಗೆ ಆತ್ಮೀಯ ವಿದಾಯ :** ನಲವತ್ತೆರಡು ವರ್ಷಗಳ ಸುದೀರ್ಘ ದೆಹಲಿ ಜೀವನ ಕಳೆದು ಇದೀಗ ಮರಳಿ ನಾಡಿಗೆ ತೆರಳುತ್ತಿರುವ ಪ್ರೊ. ಎಸ್.ಎಸ್.ಮೂರ್ತಿ ದಂಪತಿಗಳಿಗೆ ಶಾಲು ಹೊದಿಸಿ, ಪುಷ್ಪಗುಚ್ಛ ಹಾಗೂ ಸ್ಮರಣಿಕೆ ನೀಡಿ ಬೀಳ್ಕೊಡಲಾಯಿತು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮೂರ್ತಿ ಅವರ ಕಿರುಪರಿಚಯ ನೀಡಿದರು. ದೆಹಲಿಯ ಐ.ಐ.ಟಿ.ಯಲ್ಲಿ ಪ್ರೊಫೆಸರ್ ಆಗಿ ನಾಲ್ಕು ದಶಕಗಳನ್ನು ದೆಹಲಿಯಲ್ಲಿ ಕಳೆದ ಮೂರ್ತಿ ಅವರಿಗೆ ಕರ್ನಾಟಕದಲ್ಲಿ ಒಂದು ಐ.ಐ.ಟಿ ಕೇಂದ್ರದ ಸ್ಥಾಪನೆಯಾಗಬೇಕು ಎಂಬ ಬಹುದೊಡ್ಡ ಕನಸಿದೆ. ಆ ಕನಸಿನ ಬೆನ್ನು ಹತ್ತಿ ಅವರೀಗಾಗಲೇ ಹೋರಾಟವನ್ನು ನಡೆಸಿದ್ದಾರೆ. ಅವರ ಕನಸು ಎಲ್ಲ ಕನ್ನಡಿಗರ ಕನಸೂ ಹೌದು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಶಿಕ್ಷಣ ಸಂಸ್ಥೆಯೊಂದಿಗೆ ನಿಕಟ ಒಡನಾಟ ಹೊಂದಿದ್ದ ಪ್ರೊ. ಮೂರ್ತಿ ಅವರು 'ಅರಾವಳಿ ಕನ್ನಡ ಸಂಘ'ವನ್ನು ಕಟ್ಟಿ ಕನ್ನಡಿಗ ವಿದ್ಯಾರ್ಥಿಗಳು, ಅಧ್ಯಾಪಕ ಕುಟುಂಬಗಳೆಲ್ಲರನ್ನು ಸೇರಿಸಿ ಕನ್ನಡ ಚಟುವಟಿಕೆಗಳನ್ನು ಬಹುಕಾಲ ನಡೆಸಿಕೊಂಡು ಬಂದವರು. ಮೂರ್ತಿ ಅವರಿಗೆ ನಾಡಿಗೆ ಮರಳಿ ಹೋದಾಗ ಎದುರಿಸಬಹುದಾದ ಸ್ಥಿತಿಗತಿಗಳ ಬಗ್ಗೆ ತಲ್ಲಣಗಳೂ ಇವೆ. ದೆಹಲಿಯಲ್ಲಿ ಕಳೆದ ತಮ್ಮ ಸುದಿನಗಳನ್ನು, ನೆನಹುಗಳನ್ನು ಪ್ರೊ. ಮೂರ್ತಿ ಅಪ್ಯಾಯತೆಯಿಂದ ನೆನೆದರು.

ಕೊನೆಯಲ್ಲಿ ಇಡೀ ಕಾರ್ಯಕ್ರಮವನ್ನು ಸೂತ್ರಧಾರರಾಗಿ ನಡೆಸಿದ ನಾಡೋಜ ಹಂಪ ನಾಗರಾಜಯ್ಯ ಅವರು ಇಡೀ ಸಾಹಿತ್ಯ ಸಂಜೆಯ ಜೀವಾಳವೇ ಆದ 'ಜೈನ ಸಾಹಿತ್ಯದ ಅನನ್ಯತೆ'ಯ ಕುರಿತ ತಮ್ಮ ಸಂಕ್ಷಿಪ್ತ ಭಾಷಣದಲ್ಲಿ ಜೈನ ಸಾಹಿತ್ಯದ ಅನನ್ಯತೆಯ ಕುರಿತು ಉದಾಹರಣೆ ಸಹಿತ ಪರಿಣಾಮಕಾರಿಯಾಗಿ ವಿವರಿಸಿದರು.ಮೂಲ ದ್ರಾವಿಡದಿಂದ ಬೇರೆಯಾದ ಕನ್ನಡವು ಒಂದು ಆಡುಭಾಷೆಯಾಗಿ ಪ್ರಚಲಿತದಲ್ಲಿದ್ದಾಗ ಅದನ್ನು ಸಾಹಿತ್ಯದ ಭಾಷೆಯಾಗಿ ಮಾರ್ಪಡಿಸಿದವರು ಜೈನರು. ಶಿವಕೋಟಿ, ಶ್ರೀವಿಜಯ, ಪಂಪ, ರನ್ನ, ಜನ್ನ, ಪೊನ್ನ, ರತ್ನಾಕರವರ್ಣಿ ಮೊದಲಾದವರು ಕನ್ನಡದಲ್ಲಿ ವಿಶಿಷ್ಟವಾದ ಛಂದೋರೂಪಗಳನ್ನು ಬಳಸಿ ಕನ್ನಡ ಭಾಷೆಯ ಸಿರಿವಂತಿಕೆಯನ್ನು ಹೆಚ್ಚಿಸಿದರು. ಜೊತೆಗೆ ಕನ್ನಡಕ್ಕೆ ಕಥನದ ಕೊಡುಗೆ ನೀಡಿದವರು ಜೈನರು. ಇಡೀ ಜಗತ್ತಿನಲ್ಲಿ ಕಥಾನಿರೂಪಣೆ ಮಾಡುವುದರಲ್ಲಿ ಜೈನರು ಮತ್ತು ಬೌದ್ಧರು ನಿಸ್ಸೀಮರಾಗಿದ್ದರೆಂದು ಹೇಳಿದ ಅವರು ಜೈನರು ಪ್ರಾಕೃತ ಭಾಷೆಯಲ್ಲಿದ್ದ ಅನೇಕ ಕತೆಗಳನ್ನು ಕನ್ನಡಕ್ಕೆ ತಂದರು. ಇವರು ಇಂದು ಇಲ್ಲಿ ಭಾರತೀಯ ಸಾಹಿತ್ಯದಲ್ಲಿ ಜೈನರು ಕನ್ನಡದಲ್ಲಿ ಹೇಳಿದ ಕತೆಗೆ ವಿಶೇಷವಾದ ಸ್ಥಾನವಿದೆ. ಕನ್ನಡದ ಮೊದಲ ಉಪಲಬ್ಧ ಗದ್ಯ ಕೃತಿ 'ವಡ್ಡಾರಾಧನೆ'ಯಾಗಿದ್ದು ಅದು 19 ಕತೆಗಳ ಸಂಕಲನವಾಗಿದೆ. ಕನ್ನಡಕ್ಕೆ ಲೌಕಿಕ ಮತ್ತು ಆಗಮಿಕ ಎಂಬೆರಡು ಕಾವ್ಯ ಪ್ರಭೇದವನ್ನು ತಂದುಕೊಟ್ಟ ಜೈನರು ಅವೆರಡೂ ಪ್ರಕಾರಗಳಲ್ಲಿ ಅಸಾಮಾನ್ಯ ಸಿದ್ಧಿಯನ್ನು ತೋರಿದರು ಎಂದು ಹೇಳಿ ಪಂಪನ ಆದಿಪುರಾಣವನ್ನು ಉದಾಹರಿಸಿದರು.

ಕವಿತೆ ವಾಚಿಸಿದ ಎಚ್.ಎನ್ ರಾಜಶ್ರೀ ಮತ್ತು ಆರತಿ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ ವಂದಿಸಿದರು. ರಾಷ್ಟ್ರದ ರಾಜಧಾನಿಯಲ್ಲಿ ಹಂಪನಾ ಅವರಿಗೆ 'ಚಾರಿತ್ರಚಕ್ರವರ್ತಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಕರ್ನಾಟಕದಿಂದ ಆಗಮಿಸಿದ ಮತ್ತೊಬ್ಬ ವಿದ್ವಾಂಸರು ಮೈಸೂರಿನ ಡಾ.ಲತಾ ರಾಜಶೇಖರ ದಂಪತಿ ಹಾಗೂ ಜೈನ ವಿದ್ವಾಂಸ ಚಂದ್ರಕೀರ್ತಿ ಅವರೂ ಈ ಸಂದರ್ಭದಲ್ಲಿ ಹಂಪನಾ ಅವರಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

❑ ರೇಣುಕಾ ನಿಡಗುಂದಿ



ಅಭಿನಂದನೆ

# ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರೊ. ಹಿ.ಚಿ. ಬೋರಲಿಂಗಯ್ಯ



ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರಾಗಿರುವ ಹಿ.ಚಿ.ಬೋರಲಿಂಗಯ್ಯ (1955) ಅವರು ಬುಡಕಟ್ಟು ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿರುವ ವಿದ್ವಾಂಸರು. ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ಹಿತ್ತಲಪುರ ಗ್ರಾಮದವರಾದ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಕನ್ನಡ ಎಂ.ಎ. ಪದವಿ ಪಡೆದಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಯಾಗಿ, ಕುಲಸಚಿವರಾಗಿ ಮತ್ತು ಸಮಾಜವಿಜ್ಞಾನ ಮತ್ತು ಲಲಿತಕಲಾ ನಿಕಾಯದ ಡೀನ್ ಆಗಿ ಹಾಗೂ ಕುವೆಂಪು ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದು, ಇದೀಗ ಎರಡನೇ ಬಾರಿ ಹಂಗಾಮಿ ಕುಲಪತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸಾರಾಂಗ ಮತ್ತು ಅಧ್ಯಯನಾಂಗಗಳ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿರುವ ಇವರು ಕನ್ನಡ ವಿಶ್ವವಿದ್ಯಾಲಯದ ವಿಶಿಷ್ಟ ತಾಣವೆನಿಸಿದ ಗಿರಿಜನ ಹಳ್ಳಿ ಎಂದೇ ಪ್ರಸಿದ್ಧವಾದ 'ಗಿರಿಸೀಮೆ'ಯ ನಿರ್ಮಾತೃವೂ ಹೌದು. ಡಾ.ಚಂದ್ರಶೇಖರ ಕಂಬಾರರ ಜೊತೆ ಬದ್ಧತೆಯಿಂದ ನಿಂತು ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿದವರಲ್ಲಿ ಇವರೂ ಒಬ್ಬರು. ಕನ್ನಡ ವಿ.ವಿ. ಸೇರುವ ಮೊದಲು ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ಅಪಾರವಾದ ಆಡಳಿತಾತ್ಮಕ ಅನುಭವವಿರುವ ಬೋರಲಿಂಗಯ್ಯ ಅವರು ಇಟಲಿ, ಫ್ರಾನ್ಸ್, ಹಾಲೆಂಡ್ ಮತ್ತು ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿ ನಡೆದ ಅಂತರಾಷ್ಟ್ರೀಯ ಗೊಂಬೆಯಾಟ ಉತ್ಸವದಲ್ಲಿ ಭಾರತದ ಪ್ರತಿನಿಧಿಯಾಗಿ (1991 ಮತ್ತು 1992) ಭಾಗವಹಿಸಿದ್ದಾರೆ. ಜಾನಪದ ಅಕಾಡೆಮಿಯ ಬುಡಕಟ್ಟು ಅಧ್ಯಯನ ಸಂಪುಟಗಳ ಸಂಪಾದಕ ಸಮಿತಿ ಸದಸ್ಯ ಹಾಗೂ ಸಂಪಾದಕರಲ್ಲಿ ಒಬ್ಬರು. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಮಹಾಕಾವ್ಯ ಮಾಲೆಯ ಗೌರವ ಸಂಪಾದಕರು ಹಾಗೂ ಡಾ.ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಕರ್ನಾಟಕ ಸರ್ಕಾರ ತನ್ನ ಸುವರ್ಣಚರಣೆಯ ಸಂದರ್ಭದಲ್ಲಿ ತಂದ ಸುವರ್ಣಸಂಪುಟದ ಸಂಪಾದಕರೂ ಹೌದು.

ಉಜ್ಜನಿ ಚೌಡಮ್ಮ, ದಾಸಪ್ಪ-ಜೋಗಪ್ಪ, ಗಿರಿಜನ ನಾಡಿಗೆ ಪಯಣ, ಸಿದ್ದಿಯರ ಸಂಸ್ಕೃತಿ, ಕಾಡು-ಕಾಂಕ್ರಿಟ್ ಮತ್ತು ಜಾನಪದ, ಗಿರಿಜನರು, ಕರ್ನಾಟಕ ಜನಪದ ಕಲೆಗಳ ಕೋಶ, ಮಂಟೇಸ್ವಾಮಿ ಮಹಾಕಾವ್ಯ, ಗೊಂಡರ ರಾಮಾಯಣ, ಬುಡಕಟ್ಟು ದೈವಾರಾಧನೆ, ಗಿರಿಜನ ಕಾವ್ಯ, ವಿಸ್ಮೃತಿ ಮತ್ತು ಸಂಸ್ಕೃತಿ, ಕಾಗೋಡು ಚಳವಳಿ ಸುವರ್ಣ ಸಂಪುಟ, ಸುವರ್ಣ ಕರ್ನಾಟಕ 'ಅಭಿವೃದ್ಧಿ ಪಥ' ಸಂಪುಟ, ದೇಸಿ ಸಂಸ್ಕೃತಿ ಸಂಕಥನ ಮುಂತಾದವು ಇವರ ಪ್ರಕಟಿತ ಕೃತಿಗಳು. ಪ್ರಶಸ್ತಿ ಪಡೆದ ಮಹನೀಯರು, ಕರ್ನಾಟಕ ಜಾನಪದ, ಜಾನಪದ ಗಂಗೋತ್ರಿ ಕೃತಿಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿರುವ ಪ್ರೊ.ಹಿ.ಚಿ.ಬೋರಲಿಂಗಯ್ಯ ಅವರು ಗಿರಿಜನ ಸಂಸ್ಕೃತಿಯ ಅಧ್ಯಯನಕ್ಕಾಗಿ ಬರೋಡದ ಭಾಷಾ ಸಂಶೋಧನ ಪರಿಷತ್ತಿನ ಪ್ರತಿಷ್ಠಿತ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಗೌರವಪ್ರಶಸ್ತಿ, ಗುಂಡ್ಮಿ ಜಾನಪದ ಪ್ರಶಸ್ತಿ, ಆರ್ಯಭಟ ಸಾಹಿತ್ಯ ಪ್ರಶಸ್ತಿ ಮಂಟೇಸ್ವಾಮಿ ಸಾಹಿತ್ಯ ಪ್ರಶಸ್ತಿ ಹಾಗೂ ಬುದ್ಧ ಪ್ರಶಸ್ತಿಯನ್ನು ಪಡೆದಿದ್ದಾರೆ.

1998ರಿಂದ 2001ರವರೆಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಹಾಗೂ 2000ರಿಂದ 2003ರವರೆಗೆ ತಂಜಾವೂರಿನ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯರಾಗಿದ್ದ ಇವರು ಕರ್ನಾಟಕದ ಮತ್ತು ಹೊರಗಿನ ವಿವಿಧ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ ಮತ್ತು ನೇಮಕಾತಿ ಮಂಡಳಿಗಳ ಸದಸ್ಯರೂ ಹೌದು.

**ಪ್ರೊ. ಹಿ.ಚಿ ಬೋರಲಿಂಗಯ್ಯ ಅವರು ಕನ್ನಡ ವಿಶ್ವವಿದ್ಯಾಲಯವನ್ನು ಸಮರ್ಥವಾಗಿ ಮುನ್ನಡೆಸಲಿ ಎಂದು ಮತ್ತೊಮ್ಮೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.**

# ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ದೆಹಲಿಯಲ್ಲಿ

ಆಚಾರ್ಯ ಶ್ರೀ ವಿದ್ಯಾನಂದ ಅವರ "ಮುನಿದೀಕ್ಷ ಸ್ವರ್ಣ ಜಯಂತಿ"ಯನ್ನು ಅತ್ಯಂತ ಹರ್ಷ ಉಲ್ಲಾಸ ಸಡಗರ ಸಂಭ್ರಮದಿಂದ ಸಾವಿರಾರು ಜೈನ ಭಕ್ತಾದಿಗಳು ದಿನಾಂಕ 29.07.2012 ರಂದು ತ್ಯಾಗರಾಜ ಸ್ಟೇಡಿಯಂನ ಸಭಾಂಗಣದಲ್ಲಿ ಅದ್ದೂರಿಯಿಂದ ಆಚರಿಸಿದರು. ಈ ಸಂದರ್ಭದಲ್ಲಿ ಅನೇಕ ಧರ್ಮ ಪ್ರಚಾರಕರು, ಸಂಶೋಧಕರು ಮತ್ತು ಸಾಹಿತಿಗಳನ್ನು ಸನ್ಮಾನಿಸಲಾಯಿತು. ಅವರಲ್ಲಿ ಮುಖ್ಯವಾಗಿ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಅನನ್ಯ ಸೇವೆ ಪರಿಗಣಿಸಿ "ಚಿನ್ನದ ಕಿರೀಟ"ವನ್ನಿಟ್ಟು ಅತ್ಯಂತ ಗೌರವಾದರಗಳೊಂದಿಗೆ ಸನ್ಮಾನಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಸೋಮನಾಥ ಎಸ್. ಬಿರಾದಾರ ಅವರು ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಹೂಗುಚ್ಚ ನೀಡಿ ಗೌರವಿಸಿದರು. ಅಷ್ಟೊಂದು ಕಿಕ್ಕಿರಿದ ಜನರ ಮಧ್ಯದಲ್ಲಿಯೂ ಡಾ. ವೀರೇಂದ್ರ ಹೆಗ್ಗಡೆ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮಾತನಾಡುತ್ತ ಡಾ. ಪುರುಷೋತ್ತಮ ಬಿಳಿಮಲೆಯವರನ್ನು ನೆನಪಿಸುತ್ತ ಶುಭ ಹಾರೈಸಿದ್ದಾರೆ.

ಈ ಸಮಾರಂಭದಲ್ಲಿ ಹಿರಿಯ ಸಂಶೋಧಕರಾದ ಪ್ರೊ. ಹಂಪನಾಗರಾಜಯ್ಯ ಅವರ ಜೈನ ಧರ್ಮ ಮತ್ತು ಸಾಹಿತ್ಯಕ್ಕೆ ಸಲ್ಲಿಸಿರುವ ಗಣನೀಯ ಸೇವೆಯನ್ನು ಗುರುತಿಸಿ "ಚಾರಿತ್ರ ಚಕ್ರವರ್ತಿ ಪುರಸ್ಕಾರ"ವನ್ನು ನೀಡಿ ಸನ್ಮಾನಿಸಲಾಯಿತು. ಪ್ರೊ. ಕಮಲಾ ಹಂಪನಾ, ಖ್ಯಾತ ಸಾಹಿತಿ ಅವರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

❑ ಸೋಮನಾಥ ಎಸ್. ಬಿರಾದಾರ





# ನನಸಾದ ನನ್ನ ಕನಸಿನ ಕೈಲಾಸ

ಭಗವದ್ಗೀತೆಯ ವಿಭೂತಿ ಯೋಗದಲ್ಲಿ ಶ್ರೀಕೃಷ್ಣನು ನಾನು ಶಿಖರಗಳುಳ್ಳ ಪರ್ವತಗಳಲ್ಲಿ "ಮೇರು" ಎಂದಿದ್ದಾನೆ. ಮೇರು, ಸುಮೇರು, ಹೇಮಾದ್ರಿ ರಜತಾದ್ರಿ, ದೇವಪರ್ವತ, ಅಮರಾದ್ರಿ, ರಜತಸಾನು ಎಂಬೆಲ್ಲಾ ಹೆಸರಿನಿಂದ ಕೂಡಿದ "ಕೈಲಾಶ್ ಪರ್ವತಕ್ಕೆ" ಒಂದಲ್ಲಾ ಒಂದು ದಿನ ಹೋಗಬೇಕೆಂಬ ಕನಸು ಬಹುದಿನಗಳದಾಗಿತ್ತು. ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಬ್ರಹ್ಮನಿರುವುದು ಬ್ರಹ್ಮಲೋಕ, ವಿಷ್ಣುವಿನದು ವೈಕುಂಠ ಹಾಗೂ ಶಿವನಿರುವುದು ಕೈಲಾಸದಲ್ಲಿ. ಆದರೆ ಬ್ರಹ್ಮಲೋಕ ಮತ್ತು ವೈಕುಂಠಕ್ಕೆ ಈ ಮನುಷ್ಯ ದೇಹದಿಂದ ಹೋಗಲಾಗುವುದಿಲ್ಲ. ಕೈಲಾಸಕ್ಕೆ ಮಾತ್ರ ನಾವು ಹೋಗಿ ಬರಬಹುದು. ಹಿಂದಿನ ಕಾಲದಲ್ಲಿ ಋಷಿ ಮುನಿಗಳು ಯಾವ ಸೌಲಭ್ಯವಿಲ್ಲದೆಯ ಹಿಮಾಲಯಕ್ಕೆ ತಪ್ಪಸ್ಸು ಮಾಡಲು ಹೋಗುತ್ತಿದ್ದರು. ಆದರೆ ಈಗ ಎಲ್ಲಾ ರೀತಿಯ ಸೌಲಭ್ಯ ಇದೆ. ಭಾರತ ಸರ್ಕಾರದ ಮಾರ್ಗ ಒಂದಾದರೆ, ಖಾಸಗಿ ಪ್ರವಾಸಿ ಸಂಸ್ಥೆಯವರು ಕಾಠ್ಮಂಡು ಮೂಲಕ ಕರೆದುಕೊಂಡು ಹೋಗುವುದು ಮತ್ತೊಂದು. ಅಂತೆಯೇ ನಾನು ಖಾಸಗಿ ಪ್ರವಾಸಿ ಸಂಸ್ಥೆಯಿಂದ ಜೂನ್ 18ರಂದು ದೆಹಲಿಯಿಂದ ಹೊರಟೆ. ಕಾಠ್ಮಂಡುವಿನಲ್ಲಿ ನಮ್ಮ ದೇಶದ ಕೆಲವು ಭಾಗಗಳಿಂದ ಬಂದ ಜನರೊಂದಿಗೆ ಸೇರಿ ಅಲ್ಲಿಯ ಪಾರ್ಕ್ ಹೋಟೆಲ್ ತಲುಪಿದೆ. ಪ್ರವಾಸ ವ್ಯವಸ್ಥಾಪಕರು ನಮ್ಮ ಮುಂದಿನ ಪ್ರಯಾಣದ ಮಾಹಿತಿ ಕೊಟ್ಟ ನಂತರ, ನಾವು ಅಂದೇ "ಪಶುಪತಿ" ದರ್ಶನ ಮಾಡಿದೆವು. ಮರುದಿನ ಬೆಳಿಗ್ಗೆ 5.30ಕ್ಕೆ ಅಲ್ಲಿಂದ ಹೊರಟೆವು. ನೇಪಾಳದ ಗುಡ್ಡ–ಬೆಟ್ಟಗಳೊಡನೆ ಸಂಚರಿಸುತ್ತಾ, ರಮಣೀಯ ದೃಶ್ಯಗಳನ್ನು ನೋಡಿ ಮುಗ್ಧಳಾದೆ. ಒಂದಕ್ಕೊಂದು ಪೈಪೋಟಿ ನಡೆಸುತ್ತಿದೆಯೋ ಎಂಬಂತಹ ಮನೋಭಾವ ಹುಟ್ಟಿಸುವ ಎತ್ತರವಾದ ಪರ್ವತ ಶ್ರೇಣಿಗಳು ಕಿರಿದಾದ ರಸ್ತೆಯಲ್ಲಿ ಚಲಿಸುವಾಗ ಎಲ್ಲಿ ಕಾಲುವೆಯಲ್ಲಿ ಬೀಳುತ್ತೇವೋ ಎಂಬ ಹೆದರಿಕೆ. ಅಲ್ಲದೇ ಆಗಾಗ ಸುರಿಯುವ ಮಳೆಯೊಂದಿಗೆ ನಾವು "ಚೈನಾ ಬಾರ್ಡರ್" ತಲುಪಿದೆವು. ಬಾರ್ಡರ್‌ಗಿಂತ ಎರಡು ಕಿ.ಮೀ ಮೊದಲೇ ವಾಹನವನ್ನು ನಿಲ್ಲಿಸುತ್ತಾರೆ. ನಂತರ ನಾವು ಕಾಲ್ನಡಿಗೆಯಲ್ಲಿ ನಡೆದು ಇಮಿಗ್ರೇಶನ್ ಆಫೀಸ್‌ನಲ್ಲಿ ನಮ್ಮೆಲ್ಲಾ ವೀಸಾ ಪರಿಶೀಲನೆ ಆದನಂತರ, "ಚೈನಾ ಕರೆನ್ಸಿ" ಬದಲಾಯಿಸಿಕೊಂಡು, ಪುನಃ ಚೈನಾ ಕಡೆ 2ಕಿ.ಮೀ ನಡೆದು ನಮಗಾಗಿ ಕಾಯುತ್ತಿದ್ದ ವಾಹನದಲ್ಲಿ ಕುಳಿತೆವು. ನೇಪಾಳ ಮತ್ತು ಚೈನಾ ಮಧ್ಯೆ ತುಂಬ ವ್ಯತ್ಯಾಸ ಕಾಣಬಹುದು. ನೇಪಾಳದಲ್ಲಿ ನಾವು ಹಸಿರು ಗಿಡ–ಮರ ಬೆಟ್ಟಗಳನ್ನು ನೋಡಿದರೆ, ಚೈನಾ ಬಾರ್ಡರ್ ದಾಟಿದ ನಂತರ ಕಲ್ಲು, ಮರಳು, ಗುಡ್ಡ ಬೆಟ್ಟಗಳು, ರಸ್ತೆಗಳು ಮಾತ್ರ ತುಂಬಾ ಚೆನ್ನಾಗಿದ್ದು, ಟಾರ್‌ನಿಂದ ಕೂಡಿತ್ತು. ಬೆಟ್ಟದಿಂದ ಬೆಟ್ಟಕ್ಕೆ ಸಾಗುತ್ತಾ ನಾವು ಸಂಜೆ "ನ್ಯಾಲಮ್" ತಲುಪಿದೆವು. ಅಲ್ಲಿ ನಮಗೆ ಎರಡು ದಿನಗಳ ವಿಶ್ರಾಂತಿ. ಕಾರಣ ಎತ್ತರ ಪ್ರದೇಶಕ್ಕೆ ಹೋದಾಗ (high attitude) ಆಮ್ಲಜನಕದ ಕೊರತೆಯಿಂದಾಗಿ ನಮಗೆ ಹಲವಾರು ತೊಂದರೆಗಳಾಗುತ್ತದೆ. ತಲೆನೋವು, ಮಾಂಸಖಂಡಗಳ ಬಿಗಿತ, ಊಟ ಸೇರುವುದಿಲ್ಲ, ಹಾಗಾಗಿ ನಮಗೆ "Diamox" ಎಂಬ ಮಾತ್ರೆ ಕೊಡುತ್ತಿದ್ದರು. ಅಲ್ಲಿಯ ಹವಾಮಾನಕ್ಕೆ ಹೊಂದಿಕೊಂಡ ನಂತರ, ನಾವು ಜೂನ್ 21 ರಂದು ಬೆಳಿಗ್ಗೆ 5.30ಕ್ಕೆ ಅಲ್ಲಿಂದ ಹೊರಟು, ಹಲವಾರು ಮೈಲುಗಳನ್ನು ಮಣ್ಣಿನ ರಸ್ತೆಯಲ್ಲಿ ಪ್ರಯಾಣಿಸಿ ಡೊಂಗ್ಬಾ ತಲುಪಿದೆವು. ಅಲ್ಲಿಂದ ಮರುದಿನ ಬೆಳಿಗ್ಗೆ ಹೊರಟು ಮೂರು ಗಂಟೆಯ ಹೊತ್ತಿಗೆ ನಾವು "ಮಾನಸ ಸರೋವರ" ತಲುಪಿದೆವು. ಮೊದಲು ಸರೋವರದ ಸುತ್ತ ವಾಹನದಲ್ಲಿ ಪ್ರಯಾಣಿಸಿ ನಂತರ ಸ್ನಾನ–ಪೂಜೆಗೆ ತಯಾರಾದೆವು.

"ಮಾನಸ ಸರೋವರ' ಪವಿತ್ರ ಸರೋವರ ತುಂಬಾ ಮನಮೋಹಕವಾಗಿದ್ದು, ನೀಲಿಯ ಬಣ್ಣದಿಂದ ಕಾಣಿಸುತ್ತದೆ. ಜಗತ್ತಿನಲ್ಲೇ ಪ್ರಸಿದ್ಧವಾದ ಎತ್ತರದಲ್ಲಿರುವ ತಾಜಾ ನೀರಿನ ತುಂಬಾ ಉತ್ತೇಜನ ಹುಟ್ಟಿಸುವ ಈ ಸರೋವರ ಬ್ರಹ್ಮನಿಂದ ಸೃಷ್ಟಿಯಾಗಿದೆ ಎಂಬ ಪ್ರತೀತಿ. ಇದರ ಸುತ್ತ ಪ್ರದಕ್ಷಿಣೆ ಮಾಡಲು ನಾಲ್ಕು ದಿವಸ ಬೇಕು. ಇದರ ಸುತ್ತಳತೆ 84 ಕಿ.ಮೀ, ಸ್ಪಟಿಕದಿಂತೆ ಹೊಳೆಯುವ ಈ ಸರೋವರದಲ್ಲಿ ಬಂಗಾರದ ಬಣ್ಣದ ಹಂಸಗಳನ್ನು ಕಾಣಬಹುದು. ಬೆಳಗಿನ ಬ್ರಹ್ಮ ಮೂಹೂರ್ತದಲ್ಲಿ ದೇವತೆಗಳು ಇಲ್ಲಿ ಸ್ನಾನಕ್ಕೆ ಬರುತ್ತಾರೆಂಬ ಪ್ರತೀತಿ. ಆ ಹೊತ್ತಿನಲ್ಲಿ ಮೇಲಿನಿಂದ ಕೆಳಗಿಳಿಯುವ ನಕ್ಷತ್ರಗಳನ್ನು ಪುನಃ ಮೇಲೆ ಹೋಗುವ ಮಿನುಗುವ ನಕ್ಷತ್ರಗಳನ್ನು ನಾವು ಕಾಣಬಹುದು. ಒಮ್ಮೆ ಮಾನಸ ಸರೋವರದಲ್ಲಿ ಮುಳುಗಿದರೆ, ಅಲ್ಲದೇ ಒಂದು ಹನಿ ಪವಿತ್ರ ಜಲವನ್ನು ಕುಡಿದರೆ ನೂರಾರು ಜನ್ಮಗಳ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ. ಮಾನಸ ಸರೋವರಕ್ಕೆ 5 ಕಿ.ಮೀ ದೂರದಲ್ಲಿ "ರಾಕ್ಷಸ ತಾಲ್" ಇದೆ. ಇಲ್ಲಿ ರಾವಣ ಒಂಟಿ ಕಾಲಿನಲ್ಲಿ ನಿಂತು ತಪಸ್ಸು ಮಾಡಿ, ಶಿವನನ್ನು ಒಲಿಸಿದನಂತೆ. ಇಲ್ಲಿಯ ನೀರು ಅಶುಭ. ವಿಷವುಳ್ಳದೆಂದು ಜನರ ನಂಬಿಕೆ. ರಾಕ್ಷಸ ತಾಲ್ ಮತ್ತು ಮಾನಸ ಸರೋವರ ಸಣ್ಣ ಚಾನೆಲ್‌ನಿಂದ ಒಂದಕ್ಕೊಂದು ಸೇರಿಕೊಂಡಿದೆ. ಇಲ್ಲಿಂದ ಸ್ವಲ್ಪ ದೂರದಲ್ಲೇ "ಸಟ್ಲೇಜ್" ನದಿಯ ಉಗಮ.

ನಾವು ಮಾನಸ ಸರೋವರದಲ್ಲಿ ಸ್ನಾನ ಮಾಡಿ, ಮನೆಯಿಂದ ತೆಗೆದುಕೊಂಡು ಹೋದ ಪೂಜಾ ಸಾಮಾಗ್ರಿಗಳಿಂದ ಪೂಜೆ ಮಾಡಿ, ಪವಿತ್ರ ಜಲವನ್ನು ತುಂಬಿಕೊಂಡು, ಕೆಲವೊಂದು ಸಣ್ಣ ಸಣ್ಣ ಕಲ್ಲುಗಳನ್ನು ಆರಿಸಿಕೊಂಡು ನಮಗಾಗಿ ಕಾಯುತ್ತಿದ್ದ ವಾಹನವೇರಿದೆವು. ಮಾನಸ ಸರೋವರ ಮುಂದೆಯೇ ನಾವು ಕೈಲಾಶ್ ಪರ್ವತದ ದಕ್ಷಿಣ ದಿಕ್ಕಿನ ದರ್ಶನ ಮಾಡಬಹುದು. ಅಲ್ಲಿಂದ ಹೊರಟ ನಾವು ಸಂಜೆ ಮಾನಸ ಸರೋವರದ ಹತ್ತಿರ ಮಣ್ಣಿನಿಂದ ತಯಾರಿಸಿದ ಮನೆಯಲ್ಲಿ ತಂಗಿದೆವು. ಅಲ್ಲೂ ಕೂಡಾ ಮಾನಸ ಸರೋವರದ ಕೆಲವು ಭಾಗ ಹರಿಯುವ ನೀರಿದ್ದು ಕೈಲಾಶ್ ಪರ್ವತ ಕೂಡಾ ಕಾಣಿಸುತ್ತದೆ. ಮರುದಿನ ನಮಗೆ ಕೈಲಾಶ್ ಪರಿಕ್ರಮದ ದಿವಸ. ಹಾಗಾಗಿ ನಮ್ಮ ಗೈಡ್ ಅದರ ಬಗ್ಗೆ ಮಾಹಿತಿ ಕೊಟ್ಟು ಅವಶ್ಯಕತೆಯಿರುವ, ಔಷಧ, ರೇನ್‌ಕೋಟ್, ಎಲೆಕ್ಟ್ರೋರಾಲ್, ಬಿಸ್ಕತ್, ಡ್ರೈಫ್ರೂಟ್ಸ್ ಮಾತ್ರ ನಮಗೆ ತೆಗೆದುಕೊಳ್ಳಲು ಹೇಳಿದ. ಅಂತೆಯೇ ನಮ್ಮೆಲ್ಲಾ ಬ್ಯಾಗ್‌ಗಳನ್ನು ಅವರಿಗೊಪ್ಪಿಸಿ, ಬೆಳಿಗ್ಗೆ 5.30ಕ್ಕೆ ಅಲ್ಲಿಂದ ಹೊರಟೆವು. 18 ಕಿ.ಮೀ ದೂರದ "ಯಮದ್ವಾರಕ್ಕೆ" ಬಂದೆವು. ಇದೊಂದು ಸಣ್ಣದಾದ, ಸರಳವಾದ ಕಟ್ಟಡ, ಎದುರಿನಿಂದ ಪ್ರವೇಶಿಸಿ, ಹಿಂದುಗಡೆ, ಹೊರಗಡೆ ಬರಲು ತೆರುವಾದ ಕಟ್ಟಡ. ಇದ್ನು ಪ್ರವೇಶಿಸುವ ಮುನ್ನ "I am coming" ಎಂದು ಮೂರು ಸಾರಿ ಹೇಳಿ, ಜನ್ಮ ಕೊಟ್ಟ ತಂದೆ–ತಾಯಿಗಳನ್ನು ನೆನೆದು, ಮುಂದಿನ ಜನ್ಮದ ನಮ್ಮ ಕೋರಿಕೆಯನ್ನು ನೆನೆದು, ಅಲ್ಲಿದ್ದ ಘಂಟೆ ಬಾರಿಸಿ, ಹೊರಬಂದು, ಮೂರು ಪ್ರದಕ್ಷಿಣೆ ಮಾಡಿ, ಏಳು ಹೆಜ್ಜೆ ಹಿಂದೆ ನಡೆಯಬೇಕೆಂದು ನಮ್ಮ ಗೈಡ್ ಹೇಳುತ್ತಿದ್ದ. ಅಂತೆಯೇ ಮಾಡಿ, ಅಲ್ಲಿಂದ ಕಾಣುತ್ತಿದ್ದ ಕೈಲಾಶ್‌ದ ದರ್ಶನ ಮಾಡಿ ನಾವು, 5 ಕಿ.ಮೀ ದೂರದ "ಡಾರ್ಚಿಸ್" ಎಂಬ ಸ್ಥಳಕ್ಕೆ ಬಂದೆವು. ಇಲ್ಲಿಂದ ಕೈಲಾಶ್‌ಗೆ ನಡೆಯಲು ಸಾಧ್ಯವಿದ್ದವರು ನಡೆಯಬಹುದು. ಇಲ್ಲದಿದ್ದಲ್ಲಿ ಕುದುರೆ ತೆಗೆದುಕೊಳ್ಳಬಹುದು. ಬ್ಯಾಗ್ ಹಿಡಿದುಕೊಳ್ಳಲು ನಾವು ಪೋರ್ಟರ್ ತೆಗೆದುಕೊಳ್ಳಬಹುದು. ಆ ದಿನ ನಮಗೆ ಕುದುರೆ ಸಿಗದೇ ಅಂತೂ ನಡೆದುಕೊಂಡೇ ಹೊರಟೆವು.

ಕೈಲಾಶ್ ಪರ್ವತ ಇದು ಟಿಬೆಟ್‌ನ ಪಶ್ಚಿಮದಲ್ಲಿದ್ದು, 21,778 ಅಡಿ ಎತ್ತರ ಇದೆ. ನಮ್ಮ ಪುರಾಣದ ಪ್ರಕಾರ, ಶಿವ ತನ್ನ ಅರ್ಧಾಂಗಿನಿ ಪಾರ್ವತಿಯೊಂದಿಗೆ ಇಲ್ಲಿ ಯೋಗಾರೂಢನಾಗಿದ್ದಾನೆಂಬ ಪ್ರತೀತಿ ಇದೆ. ಕೈಲಾಶ್ ಪರ್ವತ ಲಿಂಗದ ರೂಪದಲ್ಲಿ ಉತ್ತರ ಕಡೆಯಿಂದ ಕಂಡರೆ, ದಕ್ಷಿಣ ಕಡೆಯಿಂದ ದಕ್ಷಿಣಾಮೂರ್ತಿಯ ರೂಪದಲ್ಲಿ ಕಾಣುತ್ತದೆ. ಇದು ಮಂಜು ಮುಸುಕಿ ಬೆಳ್ಳಿಯ ಪರ್ವತದಂತೆ ಒಮ್ಮೆ ಕಂಡರೆ, ಇನ್ನೊಮ್ಮೆ ಸೂರ್ಯನ ರಶ್ಮಿಗೆ ಬಂಗಾರದ ಬಣ್ಣವಾಗಿ ಕಾಣುತ್ತದೆ. ಇದರ ಸುತ್ತಮುತ್ತ ಆರು ಪರ್ವತಗಳಿದ್ದು, ಕಮಲದ ಆಕಾರದಿಂದ ಕೂಡಿದೆ.





ಗಣೇಶ ಪರ್ವತ, ಹನುಮಾನ್ ಪರ್ವತ, ರಾವಣ ಪರ್ವತ, ಪದ್ಮ ಸಂಭವಗಳಿದ್ದು, ಮುಂದುಗಡೆ ನಂದಿ ಪರ್ವತವಿದೆ. ಹಿಂದು, ಜೈನ, ಬೌದ್ಧ ಮತ್ತು "ಬೋನ್‌ಪಾ" ಟಿಬೆಟ್ ಜನ ಇದನ್ನು ಅತ್ಯಂತ ಪವಿತ್ರ ಸ್ಥಳವೆಂದು ಪೂಜಿಸುತ್ತಾರೆ. ಇಲ್ಲಿಂದ ಇಂಡಸ್, ಸಟ್ಲೇಜ್, ಬ್ರಹ್ಮಪುತ್ರ ಮತ್ತು ಕರ್ನಾಲಿ (ಗಂಗಾ–ಉಪನದಿ) ನದಿಗಳು ಉಗಮಿಸುತ್ತದೆ. ಕೈಲಾಶ್ ಪರ್ವತ ಸ್ವಯಂಭು ಆಗಿದ್ದು, ಹಲವಾರು ಬೆಲೆಬಾಳುವ ಕಲ್ಲಿನಿಂದ ಕಂಗೊಳಿಸುತ್ತದೆ. ಇದರ ಸುತ್ತ ಪರಿಕ್ರಮ ಮಾಡಲು ಮೂರು ದಿವಸ ಬೇಕು ಮತ್ತು 56 ಕಿ.ಮೀ ದೂರದಿಂದ ಕೂಡಿ, ಕಲ್ಲು ಬೆಟ್ಟಗಳು, ನದಿಗಳು, ಹಿಮಕಣಿವೆಯಿಂದ ಕೂಡಿ, ಪ್ರದಕ್ಷಿಣೆ ಮಾಡುವುದು ಸುಲಭ ಸಾಧ್ಯವಲ್ಲ. ಆಮ್ಲಜನಕದ ಕೊರತೆ, ಒಮ್ಮೆಲೇ ಬದಲಾಗುವ ವಾತಾವರಣ, ನಮಗೆ ಊಹಿಸಲೂ ಆಗುವುದಿಲ್ಲ. ಡಾರ್ಚೆನಿಂದ ನಡೆದು ಹೊರಟ ನನಗೆ ಉಸಿರಾಡುವುದು ಕಷ್ಟಸಾಧ್ಯವೆನ್ನಿಸಿತು. ಕೈಯಲ್ಲಿ ಕರ್ಪೂರ ಕಟ್ಟಿಕೊಂಡು, ಅದರ ಪರಿಮಳ ಮೂಗಿಗೆ ಹಿಡಿಯುತ್ತಾ ಕೋಲಿನ ಸಹಾಯದಿಂದ ಹೆಜ್ಜೆ ಹಾಕಲೂ ಕಷ್ಟವಾದಾಗ, ಮುದ್ರೆಯ ನೆನಪಾಗಿ ಅದನ್ನು ಮಾಡುತ್ತಾ ಹೊರಟಾಗ ನನಗೆ ನಡೆಯಲು ಸಾಧ್ಯವಾಯಿತು. ಮೊದಲ ದಿನ ನಾವು ದಕ್ಷಿಣ ಕಡೆಯಿಂದ ಕೈಲಾಶ್ ಪರ್ವತ ನೋಡುತ್ತಾ ಪಶ್ಚಿಮ ಮತ್ತು ಉತ್ತರದ ಕಡೆ ನಡೆದವು. ಅಂದು ನಾವು 12–13 ಕಿ.ಮೀ, ನಡೆದು "ಡೆರಾಫುಕ್" ತಲುಪಿದೆವು. ಆ ರಾತ್ರಿ ಅಲ್ಲಿಯೇ ಟೆಂಟ್‌ನಲ್ಲಿ ತಂಗಿದೆವು. ಕೈಲಾಶ್ ಉತ್ತರ ಕಡೆಯಿಂದ ನೋಡಲು ತುಂಬಾ ಚೆನ್ನ. ಮಾರ್ಗ ಮಧ್ಯದಲ್ಲಿ ಫೋಟೋ ತೆಗೆದುಕೊಳ್ಳುತ್ತಾ ಮುಂದೆ ಸಾಗಿದ್ದೆ. ನನ್ನ ಜೊತೆ ನನ್ನ ಬೆಂಗಾವಲಿಗೆ ನಾಯಿಯೊಂದು ಯಾವಾಗಲೂ ಇತ್ತು. ಮರುದಿನ ಬೆಳಿಗ್ಗೆ 5.30ಕ್ಕೆ ಹೊರಡಬೇಕು. ಆ ದಿನ 1200 ಚೈನಾ ಕರೆನ್ಸಿ (ಯುವಾನ್) ಕೊಟ್ಟು ಕುದುರೆ ತೆಗೆದುಕೊಂಡೆ. ಎರಡನೇ ದಿವಸ ತುಂಬಾ ಕಷ್ಟದ ದಿನ. ಎತ್ತರದ ಕಲ್ಲು ಬಂಡೆ ಏರಿ ಮೇಲೆ ಹೋಗಬೇಕು. ಅಂತೂ ನೀರ ಮೇಲೆ, ಹಿಮದ ಮೇಲೆ, ಕಲ್ಲು ಮೇಲೆ ನಡೆಯುತ್ತಾ ನಾವು ಡೋಲ್ ಮಾ–ಲಾ (Dol ma-la) ಕಣಿವೆ ತಲುಪಿದೆವು. ಡೋಲ್ ಮಾ–ಲಾ ಕಣಿವೆ ತುಂಬಾ ಎತ್ತರದಲ್ಲಿದೆ (19,500 ಅಡಿ) ಇಲ್ಲಿ ಆಮ್ಲಜನಕದ ಕೊರತೆಯಿಂದ ಆಗಾಗ್ಗೆ ಜನ ಸಾವಿಗೀಡಾಗುತ್ತಾರೆ. ಅಲ್ಲಿಂದ ಮುಂದೆ ನಡೆದು ಗೌರೀ ಕುಂಡ ತಲುಪಿದೆವು. ಇದು ತುಂಬಾ ಕೆಳಗಿದೆ. ತುಂಬಾ ಕಡಿದಾದ ಬೆಟ್ಟ ಇಳಿದು ಪುನಃ ಕುದುರೆ ಏರಿದೆವು. ನಾವು ಸಂಜೆ (Zutulpuk) 'ಝುತುಲ್ ಪುಕ್' ತಲುಪಿದೆವು. ಅಲ್ಲಿ ನಮ್ಮ ಟೆಂಟ್ ತಯಾರಾಯಿತು. ಇಬ್ಬರಿಗೆ ಒಂದು ಟೆಂಟ್. ಜೋರಾಗಿ ಬೀಸುವ ಗಾಳಿ, ಹರಿಯುವ ನೀರು, ಕೊರೆಯುವ ಚಳಿ, ನಿದ್ದೆ ಇಲ್ಲದೇ ನೋವಿನಿಂದ ರಾತ್ರಿ ಕಳೆದು ಮರುದಿನದ ಪ್ರಯಾಣ ಬೆಳಿಗ್ಗೆ 5.30ಕ್ಕೆ ಶುರುವಾಯಿತು. ಮೂರನೇ ದಿನ ಹತ್ತುತ್ತಾ, ಇಳಿಯುತ್ತಾ, ಕಡಿದಾದ ದಾರಿಯೊಂದಿಗೆ ನಡೆಯುತ್ತಾ ಪರಿಕ್ರಮವನ್ನು ಪೂರ್ಣಗೊಳಿಸಿದೆವು. 56 ಕಿ.ಮೀ ಇರುವ ಪರ್ವತದ ಪರಿಕ್ರಮವನ್ನು ನಮ್ಮ ತಂಡದ 42ರಲ್ಲಿ ಹತ್ತು ಜನರಿಂದ ಮಾತ್ರ ಮಾಡಲಾಯಿತು. ನಮ್ಮ ತಂಡದಲ್ಲಿ ಹನ್ನೊಂದು ಜನ ವೈದ್ಯರಿದ್ದರೂ ಕೂಡಾ ಕಾರಣಾಂತರದಿಂದ ಅವರು ಹಿಂದೆ ಸರಿಯಬೇಕಾಯಿತು. ಇಬ್ಬರ ಆರೋಗ್ಯ ತುಂಬಾ ಹದಗೆಟ್ಟಿದ್ದು ಅಂಬ್ಯುಲೆನ್ಸ್ ಕರೆಸಬೇಕಾಯ್ತು. ನಾವು ಪರಿಕ್ರಮ ಪೂರೈಸಿ ಅವರನ್ನು ಪುನಃ ಭೇಟಿ ಮಾಡಿ, ಡಾರ್ಚೆನ್‌ನಿಂದ 'ಸಾಗಾ' ಎಂಬ ಸ್ಥಳಕ್ಕೆ ಬಂದು ರಾತ್ರಿ ಉಳಿದು, ಮರುದಿವಸ ಅಲ್ಲಿಂದ ಬಾರ್ಡರ್ ಕ್ರಾಸ್ ಮಾಡಿ ಕಾಠ್ಮಂಡು ತಲುಪಿದೆವು. ಮರುದಿವಸ ನೇಪಾಳ ದರ್ಶನ ಮಾಡಿ ಜೂನ್ 30ರಂದು ಡೆಲ್ಲಿಗೆ ವಾಪಾಸ್ಸಾದೆ. ಮನೆಯವರ ಸಹಕಾರ, ಸ್ನೇಹಿತರ, ಹಿರಿಯರ ಶುಭ ಹಾರೈಕೆಯೊಂದಿಗೆ ಯಾವ ತೊಂದರೆಯೂ ಇಲ್ಲದೇ, ನನ್ನ ಜೀವನದ ಏಕೈಕ ಬಯಕೆಯನ್ನು ಈಡೇರಿಸುವಲ್ಲಿ ಸಫಲಳಾದೆ. ಒಮ್ಮೆ ಯೋಚಿಸಿ ನೋಡಿದಾಗೇ ಎಲ್ಲಾ ಕನಸೇನೋ ಎನ್ನುವ ಭಾವನೆ ನನ್ನಲ್ಲಿ ಮೂಡುತ್ತದೆ. ಆದರೆ ನನ್ನ ಕಣ್ಣು ಕಂಡ ಆ ದೃಶ್ಯ ನನ್ನಲ್ಲಿ ಭದ್ರವಾಗಿ ಉಳಿದಿದೆ.

❑ ಸ್ವರ್ಣಲತಾ ಮೃತ್ಯುಂಜಯ


# Saujanya Printing Press

**A HOUSE OF QUALITY PRINTING**

**D-47, Okhla Industrial Area, Phase-I,**
**New Delhi - 110 020**
**Phone : 40520770, 26815778**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

ಶ್ರದ್ಧಾಂಜಲಿ

# ಅಗಲಿದ ಡಾ. ಜಿ.ಎ. ಬಿರಾದಾರ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಶ್ರು ನಮನ




ರಾಷ್ಟ್ರದ ಕ್ರಾಂತಿಕಾರಿ ಚಳುವಳಿಗಳಲ್ಲಿ ಕರ್ನಾಟಕದ ಪಾತ್ರ, ಅದರಲ್ಲೂ ಉತ್ತರ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗಳ ಕುರಿತು ಒಂದೇ ವರ್ಷದಲ್ಲಿ ಎರಡು ಕೃತಿಗಳನ್ನು ಬರೆದು ದೆಹಲಿ ಕನ್ನಡಿಗರಿಗೆಲ್ಲ ಇತಿಹಾಸದ ಕುರಿತು ಪುಳಕ ಹುಟ್ಟಿಸಿದ ಇತಿಹಾಸ ಸಂಶೋಧಕ, ಯುವ ಲೇಖಕ ಡಾ. ಜಿ.ಎ. ಬಿರಾದಾರ ಅವರು ಕಳೆದ ಜೂನ್ 29ರಂದು ನಿಧನರಾದರು. ಅಗಲಿದ ಯುವ ಚೇತನಕ್ಕೆ ದೆಹಲಿ ಕರ್ನಾಟಕ ಸಂಘದಲ್ಲಿ ಜುಲೈ 7ರಂದು ಸಂಜೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಸದಾ ನಗುಮುಖದ ಬಿರಾದಾರ್ ಅವರನ್ನು ಬಲ್ಲ ದೆಹಲಿ ಕನ್ನಡಿಗರಿಗೆ ಇದೊಂದು ಅನಿರೀಕ್ಷಿತ ಆಘಾತ, ಸ್ನೇಹಿತರಿಗೆ ಆಪ್ತನಾದವನನ್ನು ಕಳೆದುಕೊಂಡ ನೋವು, ಅಕ್ಷರಲೋಕಕ್ಕೆ ತುಂಬಲಾರದ ನಷ್ಟ. ಅಗಲಿದ ಚೇತನಕ್ಕೆ ಒಂದು ನಿಮಿಷ ಮೌನವನ್ನಾಚರಿಸುವುದರ ಮೂಲಕ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಸಂತಾಪದ ಸಭೆಯನ್ನು ಉದ್ದೇಶಿಸುತ್ತ, ಡಾ. ಜಿ.ಎ. ಬಿರಾದಾರ ಅವರ ಆಗಾಧ ಇತಿಹಾಸ ಪ್ರೇಮ, ಅಭಿಮತದೊಂದಿಗಿನ ಒಡನಾಟವನ್ನು ಮೆಲುಕು ಹಾಕಿದರು. ಇತಿಹಾಸಕ್ಕೆ ಸಂಬಂಧಿಸಿದ ಯಾವುದಾದರೂ ವಿಷಯವಿರಲಿ ನಮಗೆ ತಟ್ಟನೇ ನೆನಪಾಗುತ್ತಿದ್ದವರು ಬಿರಾದಾರ್. ಅವರನ್ನು ಕೇಳಿದರೆ ಸಾಕು- 'ಅತ್ರಿ, ನೀವೇನೂ ಚಿಂತಿ ಮಾಡಬ್ಯಾಡರಿ, ನಾನೆಲ್ಲಾ ಮಾಡಿಕೊಡ್ತೀನಿ'-ಎಂದು ತಾವೇ ಲೇಖನವನ್ನು ಬರೆದು ತಯಾರಿಸಿ, ಸ್ವತಃ ಸಂಘದ ಆಫೀಸಿನಲ್ಲಿ ಕುಳಿತು ಟೈಪಿಂಗ್‌ನಿಂದ ಪ್ರೂಫ್ ರೀಡಿಂಗ್‌ವರೆಗಿನ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುತ್ತಿದ್ದರು. ಯಾವುದೇ ಕೆಲಸವಿರಲಿ, ಮಾಹಿತಿ ಇರಲಿ ಕಾಳಜಿಯಿಂದ, ಕಳಕಳಿಯಿಂದ ತಕ್ಷಣವೇ ಸ್ಪಂದಿಸುತ್ತಿದ್ದ ಬಿರಾದಾರರ ಉದಾರ ಸರಳತೆಯನ್ನು ಮನದುಂಬಿ ನೆನೆದರು.

ಹಿರಿಯ ಕಲಾವಿದ ಭೀಮರಾವ್ ಮುರಗೋಡ್ ಅವರು ಜಿ.ಎ. ಬಿರಾದಾರ 1999 ರಲ್ಲಿ ದೆಹಲಿಗೆ ಆಗಮಿಸಿದಂದಿನಿಂದ ಮೊದಲ್ಗೊಂಡು ಕೊನೆವರೆಗೂ ತಮ್ಮ ಕುಟುಂಬದೊಂದಿಗೆ ಬೆರೆತುಹೋದ ಅವರ ಪ್ರೇಮವನ್ನೂ, ಸರಳ ಸಜ್ಜನಿಕೆಯನ್ನೂ ಮನಸಾರೆ ನೆನೆದರು. ಜಿ.ಎ. ಬಿರಾದಾರ್ ಮುರಗೋಡ ಅವರ ಮನೆಯ ಹತ್ತಿರವೇ ಮನೆ ಖರೀದಿಸಿದ್ದರಲ್ಲದೇ ಮುರಗೋಡ್ ಕುಟುಂಬ, ವಿ.ವಿ ಬಿರಾದಾರ, ಶಿವಾನಂದ ಇಂಗಳೇಶ್ವರ ಮುಂತಾದವರಿಗೆ ತುಂಬಾ ಆಪ್ತರಾಗಿದ್ದರು. ವಿ.ವಿ ಬಿರಾದಾರ ಅವರು ಜಿ.ಎ. ಬಿರಾದಾರ ಅವರ ಬರವಣಿಗೆ, ಆಗಾಗ ಮಾಜಿ ಕೇಂದ್ರ ಸಚಿವ, ಮಾಜಿ ಉಪ ಸಭಾಪತಿ ಸನ್ಮಾನ್ಯ ರೆಹಮಾನ್ ಖಾನ್ ಅವರ ಅಭಿನಂದನಾ ಗ್ರಂಥವನ್ನು ಹೊರತರಬೇಕೆನ್ನುವ ತಮ್ಮ ಬಹುದಿನಗಳ ಕನಸಿನ ಕುರಿತು ಅವರೊಂದಿಗೆ ಚರ್ಚಿಸುತ್ತಿದ್ದುದನ್ನು ಹಾಗೂ ಬಿರಾದಾರ್ ತಮ್ಮ ಮುಂದಿನ ಬರವಣಿಗೆಯಲ್ಲಿ ಇದನ್ನೂ ಕೈಗೆತ್ತಿಕೊಳ್ಳುವುದಾಗಿ ನುಡಿದದ್ದನ್ನು ಭಾರವಾದ ಹೃದಯದಿಂದ ನೆನೆದರು. 'ದಿನಕರ' ಗುಂಪಿನ ರಂಗ ಕಲಾವಿದ ಗೆಳೆಯರಿಗಾಗಿ ನಾಟಕವನ್ನೂ ಬರೆಯುವವರಿದ್ದರು. ಜಿ.ಎ. ಬಿರಾದಾರ ಅವರು ಆಗಾಧವಾದ ಗೆಳೆಯರ ಬಳಗವನ್ನು ಸಂಪಾದಿಸಿದ್ದು ತಮ್ಮ ಮುಗ್ಧ ಮನಸ್ಸಿನ ಸರಳತೆ ಮತ್ತು ನಿಷ್ಕಲ್ಮಶ ಮನಸಿನ ನಗುವಿನಿಂದ. ಹಾಗೇ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಬಿ.ಕೆ. ಬಸವರಾಜ್, ಸಿ.ಎಂ. ನಾಗರಾಜ, ಶ್ರೀನಾಥ್ ಎನ್.ಆರ್., ರೇಣುಕಾ ನಿಡಗುಂದಿ, ಟಿ.ಎಂ. ಮೈಲಾರಪ್ಪ, ಆರ್. ರೇಣುಕುಮಾರ್, ಪಿ.ಸಿ. ಶ್ರೀನಿವಾಸ, ಆನಂದ ಮುರಗೋಡ, ಶಿವಾನಂದ ಇಂಗಳೇಶ್ವರ್, ಚೆನ್ನು ಎಸ್. ಮಠದ, ಕೆ.ಎಸ್.ಜಿ. ಶೆಟ್ಟಿ, ಶ್ರೀನಿವಾಸ ಗಲಗಲಿ, ಡಾ. ಸುಮಂಗಲಾದೇವಿ, ಸೋಮನಾಥ ಬಿರಾದಾರ ಮೊದಲಾದವರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ ಜಿ.ಎ. ಬಿರಾದಾರ ಅವರ ವ್ಯಕ್ತಿತ್ವ, ಅವರೊಡನೆ ತಮ್ಮ ಒಡನಾಟ, ಸ್ನೇಹದ ದಿನಗಳನ್ನು ಸ್ಮರಿಸಿ ಭಾವಪೂರ್ಣ ನಮನಗಳನ್ನು ಸಲ್ಲಿಸಿದರು.

ಬಿರಾದಾರ ಅವರ ಪತ್ನಿ ಗೀತಾ ಬಿರಾದಾರ ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಬ್ಬರು ಪುಟ್ಟ ಮಕ್ಕಳು, ಪತ್ನಿಯನ್ನು ಅಗಲಿದ ಸರಳ, ಸಜ್ಜನಿಕೆಯ ಲೇಖಕ ಜಿ.ಎ. ಬಿರಾದಾರ ಅವರ ಅಕಾಲ ಮೃತ್ಯುವನ್ನು ನೆನಪಿಸಿಕೊಂಡರೆ ದೇವಕಣವನ್ನೇ ಅನ್ವೇಷಿಸಿದ ಮನುಷ್ಯ ಅನಿಶ್ಚಿತ ಬದುಕು, ಅನಿರೀಕ್ಷಿತ ಸಾವು ಈ ಎರಡರ ಆಳವನ್ನು ಮಾತ್ರ ಬಗೆದು ನೋಡಲು ಸಾಧ್ಯವಾಗಿಲ್ಲವೆಂಬ ಮಾತು ಅಣಕಿಸುತ್ತದೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲಿ ಎಂದು ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತೇವೆ.

❑ ಉಷಾ ಭರತಾದ್ರಿ

## ಅಧ್ಯಯನಶೀಲತೆ ಜೊತೆಗೆ ಮುಗ್ಧತೆ

ನನಗೆ ಬಿರಾದಾರ್ ಪರಿಚಯ ತೀರಾ ಇತ್ತೀಚಿನದು. ಪರಿಚಯ ಮಾಡಿಸಿದ ಶಿವಾನಂದ ಇಂಗಳೇಶ್ವರರೇ, ಅವರ ಕಣ್ಮರೆ ಸುದ್ದಿಯನ್ನೂ ಹೇಳಬೇಕಾಗಿ ಬಂದುದು ದುರದೃಷ್ಟದ ಸಂಗತಿಯಷ್ಟೇ.

ನಾನು ದಿಲ್ಲಿಯಲ್ಲಿ ಅಜಮಾಸು ಒಂದು ವರ್ಷವಿದ್ದರೂ, ಅವರನ್ನು ಭೇಟಿಯಾಗಿದ್ದು ಬೆಂಗಳೂರಿನಲ್ಲೇ. ಅದು ಕಳೆದ ವರ್ಷ ಗಾಂಧಿ ಸಾಹಿತ್ಯ ಸಂಘದಲ್ಲಿ ಅವರಿಗೆ ಮುಖ್ಯಮಂತ್ರಿಗಳಿಂದ ಪ್ರಶಸ್ತಿ ಪ್ರದಾನ ಸಂದರ್ಭ. ಪಾಂಡಿತ್ಯದ ಜೊತೆಗೆ ಮುಗ್ಧತೆಯೂ ಮೇಳೈಸಿದ್ದ ಬಿರಾದಾರರು, ಕುಮಾರಕೃಪ ಗೆಸ್ಟ್‌ಹೌಸಿಗೆ ಬಂದಿಳಿದವರೇ, ಸಂಜೆ 6.30ರ ಕಾರ್ಯಕ್ರಮಕ್ಕೆ ಮಧ್ಯಾಹ್ನವೇ ಠಾಕುಠೀಕಾಗಿ ರೆಡಿಯಾಗಿಬಿಟ್ಟಿದ್ದರು.

ಇನ್ನೂ ತುಂಬಾ ಸಮಯ ಇದೆಯಲ್ಲವೇ ಎಂದರೆ,

'ಆಟೊ ಹಿಡಿದು ಹೋಗೋವ್ಯಾಳೆಗೆ ಸರಿಯಾಗ್ತದಲ್ರೀ ಸರ' ಎಂದರು.

ಇಲ್ರೀ ಗೆಸ್ಟ್‌ಹೌಸ್ ದಾಟಿ ನಾಲ್ಕು ಹೆಜ್ಜೆ ನಡೆದರೆ ಅಲ್ಲೇ ಗಾಂಧಿ ಭವನ ಎಂದೆ. ನಂತರ ಕುಮಾರಕೃಪದ ಸುತ್ತಮುತ್ತ ತುಂತುರು ಮಳೆಯಲ್ಲಿ ನೆನೆಯುತ್ತಾ ನಡೆದಾಡಿದ್ದು ನಿನ್ನೆ-ಮೊನ್ನೆಯೋ ಎಂಬಂತಿದೆ.

ಮೊದಲ ಭೇಟಿಯಲ್ಲೇ ಅವರ ಸೌಜನ್ಯ, ಸರಳತೆ, ಸ್ನೇಹಮಯ ವ್ಯಕ್ತಿತ್ವ ಪರಿಚಯವಾಯಿತು. ಅದೆಷ್ಟೋ ವರ್ಷದ ಗೆಳೆತನವಿದ್ದಂತೆ ಮಾತನಾಡಿದೆವು. ಬಿಜಾಪುರದಿಂದ ಅವರು ತಂದಿದ್ದ ಖಡಕ್ ಜೋಳದ ರೊಟ್ಟಿಗೆ ನಾನು ಮಾರುಹೋಗದೇ ಇರಲಿಲ್ಲ.

ಈ ಪ್ರಶಸ್ತಿ ಪ್ರದಾನ ಸಮಾರಂಭದ ವರದಿಯ, ಜೊತೆಗೆ ಅವರ ಪ್ರಶಸ್ತಿ ವಿಜೇತ ಕೃತಿಯ ಕುರಿತು ನಮ್ಮ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದಾಗ, ಸಣ್ಣಮಕ್ಕಳಂತೆ ಆನಂದಪಟ್ಟಿದ್ದರು ಬಿರಾದಾರರು.

ಇತಿಹಾಸಕ್ಕೆ ಸಂಬಂಧಪಟ್ಟ ಅವರ ಕೆಲವು ಪುಸ್ತಕಗಳಲ್ಲಿ, ಅವರ ಆಳವಾದ ಅಧ್ಯಯನಶೀಲತೆ, ವಿಷಯ ಸಂಗ್ರಹಿಸುವ ಕೌಶಲ್ಯ, ತಾದಾತ್ಮ್ಯ ಕಾಣಸಿಗುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ವೇಳೆ ಮುಂಬಯಿ ಕರ್ನಾಟಕ ಪ್ರಾಂತ್ಯದಲ್ಲಿ ನಡೆದ 'ಸವಿನಯ ಕಾನೂನು ಭಂಗ'ದ ಬಗೆಗಿನ ಅವರ ಕೃತಿ ತುಂಬಾ ಮೌಲಿಕವಾದುದು. ಆ ಕಾಲದ ದಿನಪತ್ರಿಕೆಗಳು, ವಾರಪತ್ರಿಕೆಗಳು ಮತ್ತು ಇತರೆ ಪುಸ್ತಕಗಳಲ್ಲಿ ಹರಡಿಹೋಗಿದ್ದ ಮಾಹಿತಿಗಳನ್ನು ಕಲೆಹಾಕಿ ತುಂಬಾ ಮಹತ್ವದ ಕೆಲಸ ಮಾಡಿದ್ದಾರೆ. ಹೆಸರಾಂತ ಸ್ವಾತಂತ್ರ್ಯವೀರರ ವಿವರ ನೀಡುವಷ್ಟೇ ಮುಚ್ಚಟೆಯಿಂದ, ನಮಗೆ ಅನಾಮಿಕರಾಗಿದ್ದ ವೀರರ ವಿವರವನ್ನೂ ನೀಡುವ ಅವರ ಶೈಲಿ ಅನನ್ಯವಾದುದು.

ಅವರಿಂದ ಇಂಥ ಇನ್ನೂ ಹಲವು ಮೌಲಿಕ ಕೃತಿಗಳು ಹೊರಬರಲಿದ್ದವು. ಅವರ ಅಕಾಲಿಕ ಮರಣ, ಈಗಲೂ ನಂಬಲೇ ಆಗುತ್ತಿಲ್ಲ.

❑ ವೀರಣ್ಣಾರಾಯಣ, ಬೆಂಗಳೂರು

ಶ್ರದ್ಧಾಂಜಲಿ

# ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನಿಂದ ಡಾ. ಜಿ.ಎ. ಬಿರಾದಾರ ಅವರಿಗೆ ಸಂತಾಪ ಸಭೆ




ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಹೊಲಗೇರಿ ಗ್ರಾಮದ ಡಾ. ಜಿ.ಎ. ಬಿರಾದಾರ ದಿನಾಂಕ 29.06.2012ರಂದು ಸಾಯಂಕಾಲ 7 ಗಂಟೆಗೆ ನಿಧನರಾದ ಸುದ್ದಿ ತಿಳಿದು ಅತೀವ ದುಃಖವಾಯಿತು.

'ಬಿಜಾಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ'ದ ಬಗ್ಗೆ ಪಿ.ಎಚ್.ಡಿ. ಮಾಡಿದ ಇವರು ಇತಿಹಾಸ ಸಂಶೋಧಕರು. ವಿದ್ವಾಂಸರು ಹಾಗೂ ಲೇಖಕರು ಆಗಿದ್ದು, ಭಾರತ ರಾಷ್ಟ್ರೀಯ ಪತ್ರಾಗಾರ ಅಧಿಕಾರಿಯಾಗಿ ಸೇವೆ ಮಾಡುತ್ತಿದ್ದರು. ದೆಹಲಿಗೆ ಬಂದು ಒಂದು ದಶಕ ಕೂಡ ಆಗಿಲ್ಲ. ಆದರೆ ಅವರು ಬರೆದ ಮೂರು ಅಮೂಲ್ಯ ಗ್ರಂಥಗಳು ಹೊರತಂದಿದ್ದು ಶ್ಲಾಘನೀಯ ವಿಷಯವಾಗಿದೆ. ಅವರ ನಿಧನದಿಂದ ಕನ್ನಡದ ಸಾಹಿತ್ಯಕ್ಕೆ ಅಪಾರವಾದ ನಷ್ಟವಾಗಿದೆ.

ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಮತ್ತು ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ಕರುಣಿಸಲೆಂದು ಶ್ರೀ ಕೆ. ರೆಹಮಾನ್ ಖಾನ್, ರಾಜ್ಯ ಸಭೆಯ ಸದಸ್ಯರು ಹಾಗು ಮಾಜಿ ಉಪಸಭಾಪತಿಯವರು ತಮ್ಮ ಸಂತಾಪ ವ್ಯಕ್ತಪಡಿಸಿದ್ದಾರೆ.

'ಬಸವ ಇಂಟರ್‌ನ್ಯಾಶನಲ್ ಸೆಂಟರ್'ನಿಂದ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ದಿ. ಡಾ. ಜಿ.ಎ. ಬಿರಾದಾರ ಅವರ ಶ್ರದ್ಧಾಂಜಲಿ ಸಭೆ ದಿನಾಂಕ ದಿನಾಂಕ 08.07.2012ರ ಭಾನುವಾರ ಸಂಜೆ 4.30ಕ್ಕೆ ಏರ್ಪಡಿಸಲಾಗಿತ್ತು.

ದೆಹಲಿಯ ಅನೇಕ ಗಣಮಾನ್ಯರಾದ, ಮಾಜಿ ಅಧ್ಯಕ್ಷರಾದ ಶರದ್ ಜವಳಿ ಹಾಗೂ ಸ್ವರ್ಣ ಐಹೊಳ್ಳಿ, ಬಸವರಾಜ ಕಲ್ಲೂರ, ಕೆ.ಎಸ್.ಜಿ. ಶೆಟ್ಟಿ, ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ್, ಚಂದ್ರಶೇಖರ್, ಡಾ. ಅಶೋಕ್ ಗೋನಾಳ್, ಅನಿಲಕುಮಾರ್, ಟಿ.ಎಂ. ಮೈಲಾರಪ್ಪ, ಅಶೋಕ್ ಎಂ., ರೇಣುಕುಮಾರ್, ಜಮುನಾ ಮಠದ ಹಾಗೂ ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಪದಾಧಿಕಾರಿಗಳಾದ ಚೆನ್ನು ಎಸ್. ಮಠದ, ಜಗದೀಶ್, ವಿ.ವಿ. ಬಿರಾದಾರ, ಸದಸ್ಯರುಗಳಾದ ಸೋಮನಾಥ್ ಬಿರಾದಾರ, ಶಿವಾನಂದ ಸಿರ್ಸಿಕರ್ ಹೀಗೆ ಅನೇಕರು ಬಂದು ಅವರ ಆತ್ಮಕ್ಕೆ ಚಿರಶಾಂತಿಯ ನೀಡಲೆಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿಯಾಗಿರುವ ಶ್ರೀ ಬೈಕೆರೆ ನಾಗೇಶ್ ದಂಪತಿಗಳು, ಚೇರ್ಮನ್‌ರಾದ ವಿ.ಪಿ. ಬಳಿಗಾರ್ ದಂಪತಿಗಳು. ಯು. ಎನ್.ಬಿ. ರಾವ್ ದಂಪತಿಗಳು, ತರುಣ ಸಾಹಿತಿಯನ್ನು ಕಳೆದುಕೊಂಡಿದ್ದು ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟವುಂಟಾಗಿದೆ. ಅವರ ಅತ್ಮಕ್ಕೆ ಶಾಂತಿಯನ್ನು ನೀಡಲೆಂದು ಹಾರೈಸಿದ್ದಾರೆ.

❑ ವಿ.ವಿ. ಬಿರಾದಾರ

# ದೂರದ ದೆಹಲಿ ಗಗನದಲ್ಲಿ ಮಿಂಚಿ ಮಾಯವಾದ ನಕ್ಷತ್ರ

## ಗೋಲಗೇರಿ ಗೊಲ್ಲಾಳಪ್ಪ ಬಿರಾದಾರ

ಅಂದು ಸೋಮವಾರ, ಫೋನು ರಿಂಗಣಿಸಿತು. ಮನೆಗೆ ಬರುವೆ ಎಂದು ಗೊಲ್ಲಾಳಪ್ಪ ಹೇಳಿದರು. ನಾನು ಬೇರೆ ಊರಿನಲ್ಲಿದ್ದೆ. ಸಾಯಂಕಾಲ 4 ಗಂಟೆಗೆ ಮನೆ ಸೇರುವವನಿದ್ದೆ. ಅಷ್ಟು ಹೊತ್ತಿಗೆ ಬನ್ನಿ ಎಂದೆ. ಅವರು ಸಿಂದಗಿಯಿಂದ ಬಿಜಾಪುರಕ್ಕೆ ಬಂದು ನನ್ನನ್ನು ಕಂಡು ಸಾಯಂಕಾಲ 06.30ರ ಬಸ್ಸಿಗೆ ಮಂಗಳೂರಿಗೆ ಹೋಗುವವರಿದ್ದರು. ತಿರುಗಿ ಶುಕ್ರವಾರ ಬಿಜಾಪುರಕ್ಕೆ ಬಂದು ಸಿಂದಗಿ, ಅಲ್ಲಿಂದ ಕಲಬುರ್ಗಿಗೆ ಹೋಗಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಶನಿವಾರದ ಕೆಕೆ ಎಕ್ಸಪ್ರೆಸ್ಸಿನಿಂದ ರವಿವಾರ ದೆಹಲಿ ಸೇರುವವರಿದ್ದರು.

ಹೇಳಿದಂತೆ ನಾಲ್ಕು ಗಂಟೆಗೆ ಮನೆಗೆ ಬಂದರು. ದೆಹಲಿಯಲ್ಲಿ ಆಗಲೇ ಬಿಡುಗಡೆಯಾದ ಅವರ ಇತ್ತೀಚಿನ ಪುಸ್ತಕ ಕೌಜಲಗಿ ಶ್ರೀನಿವಾಸರಾಯರ ಪುಸ್ತಕವನ್ನು ಬಿಜಾಪುರದಲ್ಲಿ ವಿಚಾರ ಸಂಕಿರಣದೊಂದಿಗೆ ಮತ್ತೊಮ್ಮೆ ಅದ್ದೂರಿಯಾಗಿ ಬಿಡುಗಡೆ ಮಾಡುವ ಬಗ್ಗೆ ಮಾತನಾಡಿದೆವು. 06.15ಕ್ಕೆ ಮನೆಯಿಂದ ಹೋದರು.

ಶುಕ್ರವಾರ ಮಧ್ಯಾಹ್ನ 12ರ ಹೊತ್ತಿಗೆ ಅನಾಮಧೇಯನೊಬ್ಬ ಫೋನಿಸಿ ಬಿರಾದಾರ ಇನ್ನಿಲ್ಲ ಎಂದ. ಎದುರಿಗಿದ್ದರೆ ಎರಡು ಕೆನ್ನೆಗೆ ಬಿಗಿದು ಬಿಡುತ್ತಿದ್ದೆ. ಆದರೆ ಸುದ್ದಿ ಸತ್ಯವಾಗಿತ್ತು. ಡಾ. ಜಿ.ಎ.ಬಿರಾದಾರ ಇನ್ನಿಲ್ಲ ಎಂದು ತಿಂಗಳು ಕಳೆದರೂ ನಂಬುವುದು ಆಗುತ್ತಿಲ್ಲ. ಪರಿಚಯ ಮೂರೋ ನಾಲ್ಕು ವರುಷದ್ದಾದರೂ ಹಲವಾರು ವರುಷಗಳಿಂದ ಸ್ನೇಹವಾಗಿತ್ತೆಂಬ ಅನಿಸಿಕೆ. ಆ ಸದಾ ಹಸನ್ಮುಖ, ಅಚ್ಚ ಬಿಜಾಪುರೀ ಭಾಷೆ, ದೆಹಲಿಗೆ ಬಂದಾಗಲೆಲ್ಲ ಗಂಟೆಗಟ್ಟಲೆ ಹರಟೆ ಹೊಡೆಯುತ್ತಿದ್ದುದು ಇನ್ನಷ್ಟು ಹತ್ತಿರ ತಂದಿದ್ದುವು. ಶೈಕ್ಷಣಿಕವಾಗಿ ತೀರ ಹತ್ತಿರ ಬರಲು ಕಾರಣ ಅವರ ಉತ್ತರಕರ್ನಾಟಕದ ಮೇಲಿದ್ದ ಅಭಿಮಾನ.

ಬರೆದದ್ದು ನಾಲ್ಕು ಪುಸ್ತಕಗಳು. ಒಂದು ಅಪ್ರಕಟಿತ ಮಹಾ ಪ್ರಬಂಧ. ಎಲ್ಲವೂ ಉತ್ತರ ಕರ್ನಾಟಕ ತತ್ರಾಪಿ ಬಿಜಾಪುರ ಜಿಲ್ಲೆಗೇ ಸಂಬಂಧಿಸಿದವುಗಳಾ ಗಿದ್ದುವು. ಸಂಶೋಧನೆ, ಚಿಕಿತ್ಸಕ ಬುದ್ಧಿ ಇತ್ಯಾದಿಗಳು ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ವಲಯದಲ್ಲೇ ವಿರಳ. ಅಂಥದ್ದರಲ್ಲಿ ಶೈಕ್ಷಣಿಕ ಕ್ಷೇತ್ರವಲ್ಲದ ವಲಯದಲ್ಲಿ ಕೆಲಸ ಮಾಡುತ್ತ ಡಾ. ಬಿರಾದಾರರು ಸಾಧಿಸಿದ್ದು ಅದ್ಭುತ.

ಬಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ, ಅಖಂಡ ಕರ್ನಾಟಕ ನಿರ್ಮಾಣವಾಗುವ ಮೊದಲೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಿಜಾಪುರ ಜಿಲ್ಲೆಯ ಚೆನ್ನಬಸಪ್ಪ ಅಂಬಲಿ, ಮತ್ತು ಟಿಳಕರ ಕಾಲದ ಕಾಂಗ್ರೆಸ್ ಹೋರಾಟದಲ್ಲಿ ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದ್ದ ಬಿಜಾಪುರದ ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾವ ಎರಡು ಚರಿತ್ರ ಗ್ರಂಥಗಳು ಚಾರಿತ್ರಿಕ ಸಂಶೋಧನಾ ಗ್ರಂಥಗಳಿಗೆ ಮಾದರಿಯಾಗಿವೆ. ಅವರ ಕ್ಷೇತ್ರ ಕಾರ್ಯ, ವಿಷಯದ ಬಗ್ಗೆ ಇದ್ದ ಕುತೂಹಲ ಯಾರನ್ನೂ ಬೆರಗುಗೊಳಿಸುತ್ತವೆ.

ಒಂದು ಸಣ್ಣ ಉದಾಹರಣೆ, ಕೌಜಲಗಿ ಶ್ರೀನಿವಾಸರಾಯರ ಚರಿತ್ರೆಗೆ ಸಂಬಂಧಿಸಿದಂತೆ ಸಮಕಾಲೀನ ಸಂಯುಕ್ತ ಕರ್ನಾಟಕ ಪತ್ರಿಕೆಯ ಕೆಲವು ಪುಟಗಳ ನಕಲುಗಳನ್ನು ತರಲು ಸುಮಾರು ಎರಡು ಸಾವಿರ ರುಪಾಯಿಗಳನ್ನು ಕೊಟ್ಟಿದ್ದರು. ಆ ಪುಸ್ತಕದಿಂದ ನಿಜವಾಗಿ ಅವರಿಗೆ ಲೌಕಿಕವಾಗಿ ಅವರ ನೌಕರಿಯಲ್ಲಿ ಬಡತಿ ಇತ್ಯಾದಿ ಏನೂ ಆಗುವುದಿದ್ದಿಲ್ಲ. ಆದರೆ ವಿಷಯದ ಬಗ್ಗೆ ಇದ್ದ ಅವರ ಕಾಳಜಿ ಎದ್ದು ತೋರುತ್ತಿತ್ತು. ಪದವಿಗಳಿಗಾಗಿ ಅಭ್ಯಾಸ ಮಾಡುವವರಲ್ಲೇ ಈ ರೀತಿಯ ಕಾಳಜಿ ಅತಿ ವಿರಳ.

ಹಾಗೇ ಒಮ್ಮೆ ಮಾತನಾಡುತ್ತಿದ್ದಾಗ 1892ರಲ್ಲಿ ಬಿಜಾಪುರದಿಂದ ಹೊರಡುತ್ತಿದ್ದ 'ಕರ್ನಾಟಕ ವೈಭವ ವಾರ ಪತ್ರಿಕೆ'ಯ ಬಗ್ಗೆ ವಿಷಯ ಬಂದಾಗ ತಕ್ಷಣ ಮುಂದಿನ ಅವರ ಸಂಶೋಧನೆ ಅದುವೇ ಆಗಿದ್ದಿತು. ಆಧುನಿಕ ಕರ್ನಾಟಕ, ಭಾರತದ ಚರಿತ್ರೆಯ ಬಗ್ಗೆ ಇನ್ನೂ ಏನೆಲ್ಲ ಕನಸುಗಳನ್ನು ಕಟ್ಟಿದ್ದರು. ಅವುಗಳೆಲ್ಲ ಅವರ ಜೊತೆಗೆಯೇ ಹೋದುವು. ಇಷ್ಟು ಬೇಗ ಅಗಲಿ ಹೋಗುತ್ತಾರೆಂದು ಎಣಿಸಿರಲಿಲ್ಲ. ಅವರ ಮನೆಯವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಡಲಿ, ಅವರ ಆತ್ಮಕ್ಕೆ ಶಾಂತಿಯನ್ನು ಯಾವ ಮನಸ್ಸಿನಿಂದ ಕೋರಲಿ? ಅವುಗಳು ಕೇವಲ ಉಪಚಾರಕ್ಕೆ ! ದೂರದ ದೆಹಲಿ ಎಂಬ ಗಗನದಲ್ಲಿ ಕಂಡ ತೇಜಃಪುಂಜ ನಕ್ಷತ್ರ, ನೋಡ ನೋಡುತ್ತಿದ್ದಂತೆ ಕಳಚಿ ಬಿದ್ದಿತು. ಅದು ನಮ್ಮ ಮನೆಯದ್ದೇ ಆಗಿತ್ತೆಂದು ನೆನೆದಾಗ ಕರುಳು ಕಿತ್ತು ಬರುತ್ತಿದೆ. ಏನೆಲ್ಲ ಆವಿಷ್ಕಾರಗಳಾಗಿದ್ದರೂ ಹುಟ್ಟು-ಸಾವುಗಳ ರಹಸ್ಯವನ್ನು ಭೇದಿಸುವುದು ಆಗಿಲ್ಲವಲ್ಲ.

❑ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಬಿಜಾಪುರ

ಶ್ರದ್ಧಾಂಜಲಿ

# “ಅಪರೂಪದ ವ್ಯಕ್ತಿತ್ವವುಳ್ಳ ‘ಜೀನಿಯಸ್’ ಡಾ. ಜಿ.ಎ. ಬಿರಾದಾರರವರಿಗೆ ಶ್ರದ್ಧಾಂಜಲಿ”

ಜೂನ್ 30, 2012ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಿದ್ದ, ಚಲನಚಿತ್ರ ಹಾಗೂ ಕನ್ನಡ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ನಟಿ ಶ್ರೀಮತಿ ತಾರಾರವರಿಗೆ ಸನ್ಮಾನ ಕಾರ್ಯಕ್ರಮಕ್ಕಾಗಿ ನಾನು ಹೋಗಿದ್ದೆ, ಆದರೆ ತಿಳಿದದ್ದು ಡಾ. ಜಿ.ಎ. ಬಿರಾದಾರ ಅವರು ಹೃದಯಾಘಾತದಿಂದ ಮರಣ ಹೊಂದಿದ್ದಾರೆಂಬ ವಿಷಯ. ಕೇಳಿ ನನಗೆ ‘ದಿಗ್ಭ್ರಾಂತಿ’ ಆಯಿತು. ಅಯ್ಯೋ ದೇವರೇ ನೀನೆಷ್ಟು ಸ್ವಾರ್ಥಿ! ಬರೀ ಒಳ್ಳೆಯವರನ್ನು, ಜಾಣರನ್ನು, ಸಮಾಜಕ್ಕೆ ಉಪಯುಕ್ತರಾದವರನ್ನು ನಿನ್ನ ಬಳಿಗೆ ಕರೆಸಿಕೊಳ್ಳುವಿ ಎಂದು ಮಮ್ಮಲ ಮರುಗಿದೆ. ಕೋಪ, ಹತಾಶೆಯೊಂದಿಗೆ ಅವರೊಂದಿಗಿನ ನನ್ನ ನೆನಪುಗಳು ಈ ರೀತಿಯಾಗಿದ್ದವು.

ದೆಹಲಿಗೆ ಬಂದಾಗ, ಅವರ ಮನೆಗೆ ಭೆಟ್ಟಿ ಕೊಟ್ಟಾಗ ಬಾಡಿಗೆ ರೂಮಿನ ಬಗ್ಗೆ ಮಾರ್ಗದರ್ಶನ, ತಮ್ಮ ಹೆಂಡತಿ ಮಕ್ಕಳ ಪರಿಚಯ, ತಾವು ಹೊಸದಾಗಿ ಬಂದಾಗ ಅನುಭವಿಸಿದ ಕಷ್ಟಗಳನ್ನು ಹೇಳಿ ಹರಸಾಹಸಪಟ್ಟು ಸ್ವಂತ ಮನೆ ಮಾಡಿದ್ದರ ಬಗ್ಗೆ ಹೇಳಿದರು. ದೆಹಲಿಯಲ್ಲಿರುವವರು ಒಂದು ಮನೆ ಖರೀದಿಸಲೇಬೇಕು ಎಂದು ‘ಮನೆಯ ಮಹತ್ವ ಹೇಳಿ’ ಚಹ ಕುಡಿಸಿ, ಚಳಿಗಾಲದ ಸಮಸ್ಯೆ, ಮಕ್ಕಳ ಮನೆಯ ಸುರಕ್ಷಿತ ಎಚ್ಚರಿಕೆಗಳನ್ನು ನನಗೆ ಹೇಳಿದ್ದರು. ತದನಂತರ 2010ರಲ್ಲಿ ಅಭಿಮತ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಅವರೊಂದಿಗೆ ಕೆಲಸ ಮಾಡುವಾಗ ಅವರ ನಿಕಟ ಸಂಪರ್ಕ ಬಂದೊದಗಿತ್ತು. ಅವರ ವಿದ್ವತ್ತು ತಿಳಿಯುವ ಅವಕಾಶವೊದಗಿತ್ತು. ಇಂಗ್ಲಿಷಿನಿಂದ ಕನ್ನಡ, ಕನ್ನಡದಿಂದ–ಇಂಗ್ಲಿಷ್ ಬಹಳ ವೇಗವಾಗಿ ತರ್ಜುಮೆಗೊಳಿಸುವ ಅವರ ಭಾಷಾ ಹಿಡಿತ ನನಗೆ ಬಹಳ ಸಂತೋಷ ಅಭಿಮಾನ ಮೂಡಿಸಿತ್ತು. ಆದರೆ ಅವರೆಂದೂ ತಮ್ಮ ಜಾಣತನದ ಬಗ್ಗೆ ಅಹಂಕಾರವಿಟ್ಟುಕೊಂಡಿರಲಿಲ್ಲ. ಕೆಲವೊಂದು ಮಾತುಗಳಿಂದ ಅವರನ್ನು ಪ್ರಶ್ನಿಸಿದಾಗ, ಯಾರಿಗೆ ತಮ್ಮ ಅವಶ್ಯಕತೆ ಇದೆ ಅವರು ನನ್ನನ್ನು ಕರೆಸಿಕೊಳ್ಳುತ್ತಾರೆ. ಯಾರಿಗೆ ಬೇಡ ಅವರು ಕರೆಯುವುದಿಲ್ಲ. ಆದರೆ, ತಾನಾಗಿಯೇ ನನ್ನನ್ನು ಸೇರಿಸಿಕೊಳ್ಳಿ ನನ್ನಲ್ಲಿ ಇಂತಹ ಕಾರ್ಯಮಾಡುವ ಮನಸ್ಸಿದೆ ಎಂದು ಹೇಳಲು ಹೋಗುವುದಿಲ್ಲ ಹಾಗೂ ಆ ವಿಷಯದ ಬಗ್ಗೆ ಬೇಜಾರುಪಟ್ಟುಕೊಳ್ಳುವುದಿಲ್ಲ ಎಂದು ಸ್ಪಷ್ಟ ಹಾಗೂ ನೇರ ಮಾತುಗಳನ್ನು ಆಡುವ ಧೀಮಂತ ವ್ಯಕ್ತಿತ್ವದವರಾಗಿದ್ದರು. ಅಭಿಮತ ಪತ್ರಿಕೆಗೆ ಉತ್ತಮ ಆಧಾರ ಸಹಿತ ಅತ್ಯುತ್ತಮ ಲೇಖನಗಳನ್ನು ಬರೆಯುತ್ತಿದ್ದರು ಮತ್ತು ದೆಹಲಿ ಕನ್ನಡ ಶಾಲೆಯ ಸ್ಮರಣ ಸಂಚಿಕೆಗಾಗಿ ಉತ್ತಮ ಕಾರ್ಯನಿರ್ವಹಿಸಿದ್ದರು.

ಇನ್ನೊಂದು ದಿನ ಕರ್ನಾಟಕ ಸಂಘದಲ್ಲಿ ಅವರ ಭೆಟ್ಟಿ ಆಯಿತು. ಸಾಹಿತ್ಯ ಸಂಜೆ ಕಾರ್ಯಕ್ರಮಕ್ಕೆ ಕನ್ನಡಕ್ಕೆ ಬಂಗಾಲಿ ಭಾಷೆಗೆ ವಚನಗಳನ್ನು ಭಾಷಾಂತರಿಸಿ, ಅನೇಕ ಕೃತಿಗಳನ್ನು ಬರೆದ ಮೀರಾ ಚಕ್ರವರ್ತಿ ಅವರ ಕಾರ್ಯಕ್ರಮಕ್ಕೆ ಬರಲಿಲ್ಲವೇಕೆ? ಎಂದು ‘ಸಮಾಚಾರ’ ಓದುತ್ತಾ ಕುಳಿತ ಡಾ. ಜಿ.ಎ. ಬಿರಾದಾರ ಅವರಿಗೆ ಕೇಳಿದೆ. ತನಗೆ ಮೆಸೇಜ್ ಸಿಕ್ಕಿಲ್ಲ ಎಂದರು. ನನ್ನಿಂದ ದಿನಾಂಕ ಕೇಳಿ ತಾವು, ಊರಿಗೆ ಹೋಗಿದ್ದಾಗಿ, ಆ ದಿನ ದಿಲ್ಲಿಯಲ್ಲಿ ಇರಲಿಲ್ಲ ಎಂದು ಹೇಳಿದರು. ನಾನು ನೀವು ಇಷ್ಟು ಜಾಣರಿದ್ದೀರಿ. 270 ಶರಣ ವಚನಗಾರರ ವಚನಗಳಲ್ಲಿ ಒಬ್ಬೊಬ್ಬರ ಐದು ವಚನಗಳನ್ನು ತರ್ಜುಮೆಗೊಳಿಸಿ ಎಂದೆ. ಆಗ ಮೇಡಂ, ಗದ್ಯ ಭಾಷಾಂತರಿಸುವುದು ಸುಲಭ, ಪದ್ಯ, ವಚನಗಳನ್ನು ಭಾಷಾಂತರಿಸುವದು ಬಹಳ ಕಷ್ಟ ಎಂದರು. ಆದರೆ, ನಾನು ಮತ್ತು ಪ್ರಯತ್ನ ಮಾಡಿ, ನೀವು ಮನಸ್ಸು ಮಾಡಿದರೆ ಮಾಡುವಿರೆಂಬ ಭರವಸೆ ನನಗಿದೆ ಎಂದೆ. ನನಗೆ ಮೇಲಿಂದ ಮೇಲೆ ನನ್ನೂರಿಗೆ ಹೋಗುವುದಿರುತ್ತದೆ, ಕೆಲಸದ ಒತ್ತಡ, ವೇಳೆ ಸಿಗುವುದೇ ಕಷ್ಟ, ವೇಳೆ ಸಿಕ್ಕಾಗ ಮೂಡ್ ಇರಬೇಕು. ಆಗ ಮಾತ್ರ ಕುಳಿತರೆ ಲೇಖನಿ ಹಾಗೇ ಸ್ಪೀಡ್ ಆಗಿ ಓಡುತ್ತದೆ. ನೀವು ಸಲಹೆ ನೀಡಿದ್ದಕ್ಕೆ, ನಾನು ಪ್ರಯತ್ನ ಮಾಡುತ್ತೇನೆ ಎಂದರು. ಆದರೆ, ಅದೇ ನನ್ನ ಕೊನೆ ಭೇಟಿ, ಮಾತು ಆಗುತ್ತದೆ ಎಂದು ನಾನು ಎನಿಸಿರಲೇ ಇಲ್ಲ! ದೇವರು ಅವರಿಗೆ ಆತ್ಮ ಶಾಂತಿ, ಸ್ವರ್ಗದಲ್ಲಿ ಸ್ಥಾನಮಾಡಿಕೊಡಲಿ ಎಂದು ಪ್ರಾರ್ಥಿಸಲೇ ಅಥವಾ ಕೇವಲ 43 ವರ್ಷದಲ್ಲಿ ಮರಣ ಹೊಂದಿದ್ದರಿಂದ ಪುನರ್ಜನ್ಮ ಸಿಗಲಿ ಎಂದು ಪ್ರಾರ್ಥಿಸಲೇ?

❑ ಡಾ. ಸುಮಂಗಲಾದೇವಿ

# ಇನ್ನಿಲ್ಲದ ‘ಹಳದಿ ಚೇಳು’ – ಸುದರ್ಶನ ದೇಸಾಯಿ



‘ಹಳದಿ ಚೇಳು’ ಪತ್ತೇದಾರಿ ಕಾದಂಬರಿ ಬರೆದು ಉತ್ತರ ಕರ್ನಾಟಕದಿಂದ ಪ್ರಸಿದ್ಧರಾಗಿದ್ದ ಸುದರ್ಶನ ದೇಸಾಯಿ ಈ ಶತಮಾನದ ಪ್ರಮುಖ ಲೇಖಕರಲ್ಲಿ ಒಬ್ಬರು. ‘ಹಳದಿ ಚೇಳು’ ಎಂಬ ಕಾದಂಬರಿ ಮೂಲಕ ಅಪಾರವಾದ ಜನಪ್ರಿಯತೆಯನ್ನು ಪಡೆದರು. ಆದರೆ ಸಾಹಿತಿಯಾಗಿ ಪ್ರಸಿದ್ಧರಾಗುವ ಮುನ್ನ ರಂಗಭೂಮಿಯೊಂದಿಗೆ ನಿರಂತರವಾಗಿ ನಂಟು ಹೊಂದಿದ್ದರು. ಸುಮಾರು 100ಕ್ಕೂ ಅಧಿಕ ಪತ್ತೇದಾರಿ ಕಾದಂಬರಿಗಳನ್ನು ಬರೆದು, ರಾಜ್ಯದಾದ್ಯಂತ ಮನೆಮಾತಾಗಿದ್ದ ಸುದರ್ಶನ ದೇಸಾಯಿ (68) ಧಾರವಾಡದ ಖಾಸಗಿ ಆಸ್ಪತ್ರೆಯಲ್ಲಿ ಜುಲೈ 31, ಮಂಗಳವಾರ ಸಂಜೆ ನಿಧನ ಹೊಂದಿದರು. ಹಲವು ತಿಂಗಳಿಂದ ಸಕ್ಕರೆ ಕಾಯಿಲೆ, ತೀವ್ರ ರಕ್ತದೊತ್ತಡದಿಂದ ಬಳಲುತ್ತಿದ್ದರು.

ಪತ್ತೇದಾರಿ ಕಾದಂಬರಿ ಬರೆಯಲೆಂದೇ ಶಿಕ್ಷಕ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದ ದೇಸಾಯಿ ಸಾಹಿತ್ಯ ಕ್ಷೇತ್ರದಲ್ಲಿ ಏರಿದ ಎತ್ತರ ಅನನ್ಯವಾದುದು. ಅವರಿಗೆ ಇದೇ ಕ್ಷೇತ್ರ ಮುಂದೆ ಕೀರ್ತಿ ತಂದು ಕೊಟ್ಟಿತು. ಅವರ ಸಾಧನೆಯನ್ನು ಗುರುತಿಸಿದ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಧಾರವಾಡ ಸಾರಸ್ವತಪುರ ಬಳಿಯ ಕಾಲೊನಿಗೆ ‘ಸುದರ್ಶನ ದೇಸಾಯಿ ಕಾಲೊನಿ’ ಎಂದೇ ನಾಮಕರಣ ಮಾಡಿತ್ತು.

‘ಹಳದಿ ಚೇಳು’, ‘ಲೆದರ್ ಸೂಟ್ಕೇಸ್’, ‘ಎಂಟೆದೆ ಭಂಟ’ (ಚಲನಚಿತ್ರವೂ ಆಗಿದೆ) ಪ್ರಮುಖವಾದ ಪತ್ತೇದಾರಿ ಕಾದಂಬರಿಗಳಾಗಿದ್ದವು. ‘ಹಳದಿ ಚೇಳು’ ಕಾದಂಬರಿ ತಂದು–ಕೊಟ್ಟ ಜನಪ್ರಿಯತೆಯ ಹಿನ್ನೆಲೆಯಲ್ಲಿ ಅವರ ನಿವಾಸಕ್ಕೆ ಅದೇ ಹೆಸರನ್ನು ಇಟ್ಟಿದ್ದರು.

ಟಿವಿ ಹಾವಳಿಯಿಂದಾಗಿ ಪತ್ತೇದಾರಿ ಸಾಹಿತ್ಯ ಬಡವಾಗುತ್ತಿದೆ. ಇದನ್ನು ಪ್ರಸಿದ್ಧಗೊಳಿಸಬೇಕು ಎನ್ನುವ ತುಡಿತ ಅವರಿಗಿತ್ತು. ಇದಕ್ಕಾಗಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಪತ್ತೇದಾರಿ ಸಾಹಿತ್ಯ ಕುರಿತು ಗೋಷ್ಠಿ ಯೋಜಿಸಬೇಕು ಎನ್ನುವ ಬೇಡಿಕೆಯನ್ನು ಸದಾ ಕಾಲ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಒತ್ತಾಯಿಸುತ್ತಿದ್ದರು. ಇದು ಅನೇಕ ಬಾರಿ ಈಡೇರದಾಗ ಪತ್ತೇದಾರಿ ಸಾಹಿತ್ಯ ಸಮ್ಮೇಳನಗಳನ್ನೂ ಅವರು ಆಯೋಜಿಸಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ಇಂಥದೊಂದು ಪತ್ತೇದಾರಿ ಸಾಹಿತ್ಯ ಕುರಿತ ವಿಚಾರ ಸಂಕಿರಣವನ್ನು ಆಯೋಜಿಸಬೇಕೆಂಬ ಹಂಬಲವೂ ಅದಮ್ಯವಾಗಿತ್ತು. ಆ ಬಗ್ಗೆ ಸಂಘದ ಪದಾಧಿಕಾರಿಗಳೊಡನೆ ಅನೇಕ ಬಾರಿ ಮಾತುಕತೆಯನ್ನೂ ನಡೆಸಿದ್ದರು. ಸಾಹಿತಿಯಾಗಿ ಪ್ರಸಿದ್ಧಿಯಾಗುವುದರ ಜೊತೆಗೆ 1965ರಿಂದ 1988ರ ವರೆಗೆ ಸುಮಾರು 200 ನಾಟಕಗಳಲ್ಲಿ ಅವರು ಅಭಿನಯಿಸಿದ್ದರು. ನಂತರ 1974ರಲ್ಲಿ ಭಾಗ್ಯೋದಯ ನಾಟ್ಯ ಸಂಘ ಹಾಗೂ ಸರಸ್ವತಿ ಕಲಾ ನಿಕೇತನ ಸಂಘಗಳನ್ನು ಕಟ್ಟಿ, ನಾಟಕ ಆಡಿದರು. ಉತ್ತರ ಕರ್ನಾಟಕದ ರಂಗಭೂಮಿ ಸಂಗತಿಗಳನ್ನು ನಾಡಿಗೆ ತಿಳಿಸಬೇಕೆಂದು ‘ರಂಗತೋರಣ’ ಮಾಸಿಕ ಪತ್ರಿಕೆಯನ್ನು ನಿರಂತರವಾಗಿ ಪ್ರಕಟಿಸುತ್ತಿದ್ದರು. ಅದಕ್ಕೆ ಚಂದಾ ಸಿಗದೆ, ಸರಿಯಾದ ಪ್ರೋತ್ಸಾಹ ಸಿಗದಿದ್ದರೂ ಪ್ರಕಟಣೆಯನ್ನು ನಿಲ್ಲಿಸಿರಲಿಲ್ಲ.

ಸಾಹಿತ್ಯ ಹಾಗೂ ರಂಗಭೂಮಿಯಲ್ಲಿ ಮಿಂಚಿದ್ದ ದೇಸಾಯಿ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಜೊತೆಗೆ ಹಲವಾರು ಪ್ರಶಸ್ತಿಗಳ ಪುರಸ್ಕೃತರಾಗಿದ್ದರು. ಅಲ್ಲದೇ ಕೇಂದ್ರ ಸರ್ಕಾರದಿಂದ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದಿದ್ದರು. ಧಾರವಾಡದ ಬಡಕುಟುಂಬದಲ್ಲಿ ಜನವರಿ 14, 1945 ರಲ್ಲಿ ಜನಿಸಿದ್ದ ಅವರು, ಧಾರವಾಡದಲ್ಲಿ ಓದಿ, 34 ವರ್ಷಗಳವರೆಗೆ ಶಿಕ್ಷಕರಾಗಿ ದುಡಿದು ಧಾರವಾಡದಲ್ಲೇ ನೆಲೆ ನಿಂತರು. ಹೀಗಾಗಿ ಅವರಿಗೆ ಧಾರವಾಡ ಜನ್ಮಭೂಮಿಯೂ ಹೌದು; ಕರ್ಮಭೂಮಿಯೂ ಹೌದು. ಕೊನೆಗೆ ಅವರು ಧಾರವಾಡದಲ್ಲಿಯೇ ಅಸ್ತಂಗತರಾದರು. ಈ ಮೂಲಕ ಪತ್ತೇದಾರಿ ಕಾದಂಬರಿಗಳನ್ನು ಬರೆಯುವ ಉತ್ತರ ಕರ್ನಾಟಕದ ಏಕೈಕ ಹಿರಿಯ ತಲೆಮಾರಿನ ಲೇಖಕರನ್ನು ಕಳೆದುಕೊಂಡಂತಾಗಿದೆ.

ಅಗಲಿದ ಹಿರಿಯ ಸಾಹಿತಿ ಸುದರ್ಶನ ದೇಸಾಯಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.

ಶ್ರದ್ಧಾಂಜಲಿ

# ಜೋಗುಳ ಹಾಡಿದ ಹೂ ಮನದ ಸಾಹಿತಿ



'ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೋ ಸುಂದರ...

ಎಂಬ ಅತ್ಯಂತ ಜನಪ್ರಿಯ ಗೀತೆಯ ರಚನೆಕಾರ, ಹಿರಿಯ ಸಾಹಿತಿ ಶಂಕರಗೌಡ ಗುರುಗೌಡ (ಶಂ.ಗು.) ಬಿರಾದಾರ ಅವರು ಶುಕ್ರವಾರ ಜುಲೈ 6ರಂದು ವಿಜಾಪುರದಲ್ಲಿ ನಿಧನರಾದರು. ಈ ಕವಿತೆಯನ್ನು ಕೇಳದ.. ಹಾಡದ ಕನ್ನಡದ ಮಕ್ಕಳೇ ಇಲ್ಲ ಎನ್ನುವಷ್ಟು ಇದು ಸುಪ್ರಸಿದ್ಧ. ಅದು ಬೇರೆ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ. ದೇಶದ ಯಾವ ಮೂಲೆಯಲ್ಲೂ ಹಾಡಬಹುದಾದ ನಾವು ಎಳೆಯರು.. ಎಂಬ ಕವಿತೆ ಮಕ್ಕಳ ರಾಷ್ಟ್ರಗೀತೆಯಾಗುವ ಎಲ್ಲ ಅರ್ಹತೆ ಪಡೆದಿದೆ.

ಸಮಗ್ರ ವಿಜಾಪುರ ಜಿಲ್ಲೆಯನ್ನು ಮಕ್ಕಳ ಸಾಹಿತ್ಯದ ತೂಗು ತೊಟ್ಟಿಲು ಎಂದು ಕರೆಯುತ್ತಾರೆ. ಇಲ್ಲಿ ಈ ತೊಟ್ಟಿಲನ್ನು ಕಟ್ಟಿ ಜೋಗುಳ ಹಾಡುತ್ತ ಅದು ನಿರಂತರವಾಗಿ ತೂಗುವಂತೆ ಮಾಡಿದ ಕೀರ್ತಿ ಸಿ.ಸು.ಸಂಗಮೇಶ, ಶಂ. ಗು. ಬಿರಾದಾರ ಹಾಗೂ ಈಶ್ವರಚಂದ್ರ ಚಿಂತಾಮಣಿ ಎಂಬ ತ್ರಿಮೂರ್ತಿಗಳಿಗೆ ಸಲ್ಲುತ್ತದೆ. ಈ ಮೂವರೂ ಮಕ್ಕಳ ಸಾಹಿತ್ಯ ಸಂಗಮ ಎಂಬ ಸಂಸ್ಥೆ ಹುಟ್ಟುಹಾಕಿ, ಆ ಮೂಲಕ ಅನೇಕ ಕಾರ್ಯಕ್ರಮಗಳನ್ನು ಸಂಘಟಿಸಿ, ಮಕ್ಕಳ ಸಾಹಿತಿಗಳ ದೊಡ್ಡ ಪಡೆಯನ್ನೇ ನಿರ್ಮಿಸಿದ್ದಾರೆ. ಆ ಪಡೆ ಅವರಿಗೆ ಕೃತಜ್ಞತೆ ಸಲ್ಲಿಸಲೆಂದು, ಅವರು 75 ವರ್ಷ ದಾಟಿದ ಸಂದರ್ಭದಲ್ಲಿ ಒಂದು ಆತ್ಮೀಯ ಸಮಾರಂಭವನ್ನು ಏರ್ಪಡಿಸಿತ್ತು. ಆಗ 'ಹೂವಿನ ಹಂದರ' ಎಂಬ ಸುಂದರ ಅಭಿನಂದನಾ ಗ್ರಂಥವನ್ನು ಅವರಿಗೆ ಅರ್ಪಿಸಿ ಸಂಭ್ರಮಿಸಲಾಯಿತು.

ಶಂ.ಗು. ಮಕ್ಕಳ ಸಾಹಿತ್ಯಕ್ಕೆ ಮಾತ್ರ ಸೀಮಿತಗೊಂಡವರಲ್ಲ. ಅವರ ಕಥೆ, ಕಾದಂಬರಿ, ಲಲಿತ ಪ್ರಬಂಧ, ನಾಟಕಗಳ ಪ್ರೌಢಿಮೆಯನ್ನು ಓದಿಯೇ ಸವಿಯಬೇಕು. ಅವರ ಮಕ್ಕಳ ಕವಿತೆಗಳಂತೂ, ಮಕ್ಕಳ ಕಾವ್ಯ ಹೇಗಿರಬೇಕು ಎಂಬುದಕ್ಕೆ ಉತ್ಕೃಷ್ಟ ಉದಾಹರಣೆಗಳಾಗಿವೆ. ಅವರ ಎತ್ತರದ ನಿಲುವು, ಸುಂದರ ನಗುಮೊಗ, ಶುಭ್ರ ಉಡುಗೆ ಜೊತೆಗೆ ಹೂವಿನಂತಹ ಕೋಮಲ ಮನಸ್ಸು.. ಎಲ್ಲರಿಗೂ ಪ್ರಿಯ!

ವಿಜಾಪುರ ತಾಲ್ಲೂಕಿನ ಬಬಲೇಶ್ವರದ ಬಡ ಕುಟುಂಬದಲ್ಲಿ ಜನಿಸಿದ ಶಂ. ಗು. ಅವರಿಗೆ ಸಾಹಿತ್ಯದ ರುಚಿ ಉಣಿಸಿದವರು ಅವರ ತಂದೆ ಗುರುಗೌಡರು. ಗ್ರಾಮೀಣ ಭಾಗದ ಒಕ್ಕಲುತನದ ಮನೆತನವಾದರೂ, ಅವರ ತಂದೆ ಮನೆಯಲ್ಲಿ ಪುಸ್ತಕ ಓದಿನ ಸಂಸ್ಕೃತಿ ಬೆಳೆಸಿದ್ದರು.

ಅವರ ಸಾಹಿತ್ಯ ಕೃಷಿ ನಾಟಕದಿಂದ ಆರಂಭವಾಗಿ, ಕೈ ಬರಹ ಪತ್ರಿಕೆಗಳಲ್ಲಿ ಮುಂದುವರೆದು, ಕಥೆ, ಕವನ, ಕಾದಂಬರಿ, ಪ್ರಬಂಧ, ಮಕ್ಕಳ ಸಾಹಿತ್ಯ, ಚುಟುಕು ಮುಂತಾದ ಪ್ರಕಾರಗಳಲ್ಲಿ ಹರಳುಗಟ್ಟಿತು. ಅವರು ರಚಿಸಿದ ಸಾಹಿತ್ಯ ಕೃತಿಗಳ ಸಂಖ್ಯೆ ಬಹಳ ದೊಡ್ಡದೇನಲ್ಲ. ಆದರೆ, ಅವರು ಬರೆದುದೆಲ್ಲ ಅಪ್ಪಟ ಚಿನ್ನ.

ಅವರ ಸುಮಾರು 16 ಕೃತಿಗಳಲ್ಲಿ 8 ಕೃತಿಗಳು ಕರ್ನಾಟಕ ಸರ್ಕಾರ ಮೊದಲ್ಗೊಂಡು ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಬಹುಮಾನ ಪಡೆದು ಪುರಸ್ಕೃತಗೊಂಡಿವೆ. ಇದಲ್ಲದೇ ಅವರು ಒಂಬತ್ತು ಗ್ರಂಥಗಳನ್ನೂ ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಅಗಲಿದ ಚೇತನಕ್ಕೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ನಮನಗಳು.

❑ ಕೃಪೆ : ಪ್ರಜಾವಾಣಿ

## ನಮ್ಮ ಕನಸು

ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೋ ಸುಂದರ
ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿ
ಗೊಂದೆ ಭಾರತ ಮಂದಿರ
ಶಾಂತಿ ದಾತನು ಗಾಂಧಿ ತಾತನು
ಎದೆಯ ಬಾನಿನ ಚಂದಿರ
ಜಾತಿ ರೋಗದ ಭೀತಿ ಕಳೆಯುತ
ನೀತಿ ಮಾರ್ಗದಿ ನಡೆವೆವು
ಒಂದೆ ಮಾನವ ಕುಲವು ಎನ್ನುತ
ವಿಶ್ವ ಧರ್ಮವ ಪಡೆವೆವು
ವೈರ ಮತ್ಸರ ಸ್ವಾರ್ಥ ವಂಚನೆ
ಕ್ರಿಮಿಗಳೆಲ್ಲವ ತೊಡುವೆವು
ದೇಶ ಸೇವೆಗೆ ದೇಹ ಸವೆಸುವ
ದೀಕ್ಷೆ ಇಂದೇ ತೊಡೆವೆವು
ದೇಶ ಸೇವೆಗೆ ದೇಹ ಸವೆಸುವ
ನಮ್ಮ ಸುತ್ತಲು ಹೆಣೆದು ಕೊಳ್ಳಲಿ
ಸ್ನೇಹ ಪಾಶದ ಬಂಧನ
ಬೆಳಕು ಬೀರಲಿ ಗಂಧ ಹರಡಲಿ
ಉರಿದು ಪ್ರೇಮದ ಚಂದನ
ನಮ್ಮ ಶಕ್ತಿಗೆ ದಿವ್ಯ ಭಕ್ತಿಗೆ
ದೇಶವಾಗಲಿ ನಂದನ
ಅಂದು ಪ್ರೇಮದಿ ಎತ್ತಿ ಕೊಳ್ಳಲಿ
ಭೂಮಿ ತನ್ನಯ ಕಂದನ

ಕೊಂಕಣಿ ಅಸೋಸಿಯೇಶನ್ ದೆಹಲಿ, ಸೆಪ್ಟೆಂಬರ್ 1 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಮೊದಲ ಬಾರಿಗೆ ಕೊಂಕಣಿ ನಾಟಕ "ಫಿರಂಗಿ ಫತ್ತಾಸ್" ಪ್ರದರ್ಶನವನ್ನು ಆಯೋಜಿಸಿದೆ. ಮಾತೃಭಾಷೆಯ ಮಹತ್ವವನ್ನು ಬಿಂಬಿಸುವ ಈ ನಾಟಕವನ್ನು ರಚಿಸಿದವರು ಖ್ಯಾತ ಕೊಂಕಣಿ ನಾಟಕಕಾರ 'ಪುಂಡಲೀಕ ನಾರಾಯಣ ನಾಯಕ್'. ಕೊಂಕಣಿ ಮತ್ತು ಮರಾಠಿ ನಿರ್ದೇಶಕ ಪ್ರಶಾಂತ ಮರಡೋಲ್ಕರ್ ನಿರ್ದೇಶಿಸಿದ್ದಾರೆ. ಎಲ್ಲರಿಗೂ ಆದರದ ಸ್ವಾಗತ

## ಉಚಿತ ವೈದ್ಯಕೀಯ ತಪಾಸಣೆ

ಆಗಸ್ಟ್ 26 ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

**Quality Engineering Education with active Corporate Exposure & High Placement Percentage**

**Highly Subsidised Fee by Sri venkateswara Charitable Trust @ Rs. 40,000/- per annum**

# SRI VENKATESWARA ENGINEERING COLLEGE

Approved by AICTE & affiliated to MDU, Rohtak/DCRUST, Murthal (Sonipat) Hr.
An ISO Certified Institute run by Sri Venkateswara Charitable Trust, Hyderabad (A.P.) Estd. 1999

- 9 Campuses in South & North india
- 18000+ Students
- 14+ years Experience in Education
- 1200+ Well Qualified Faculty




University fee shall be charged extra

Free bus facility for College visit (from Jahangirpuri Metro Station, New Delhi at 10 a.m.)

# B.Tech./LEET

Civil Engg. | Mechanical Engg. | Electrical Engg.
Electronics & Communication Engg. | Computer Sc. & Engg.



- Special fee waiver for girl students.
- Reserved seats for wards of Govt. Employees, Armed Forces Personnel and Ex-Servicemen.
- AC Transport from all parts of Delhi.
- Education Loan Facility available.

**Mobile no's :**
08800729712, 07827960559, 09034891791, 09034844460
**Contact no's :**
0130-2474790-91

Campus : 40 K.M. From Delhi, Sonipat (NCR)

Karnal Bye Pass → 16KM → Kundli Border → 12KM → Bahalgarh Chowk → 05KM → Murthal (Flyover) → 07KM → College → Gannaur


SVEC

Delhi Ambala N.H.1

52nd K.M. Stone, Delhi Ambala N.H. 1, Pipli Khera, Distt. Sonipat-131039(Hr.)
Website : www.svengg.co, Email : admissions@svengg.co

ಅಭಿನಂದನೆ

# ಡಾ. ಯು.ಆರ್. ಅನಂತಮೂರ್ತಿ ಅವರಿಗೆ ವೈಕಂ ಮಹಮ್ಮದ್ ಬಷೀರ್ ಪ್ರಶಸ್ತಿ



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಹಾಗೂ ಶಿಕ್ಷಣ ತಜ್ಞ ಯು.ಆರ್. ಅನಂತಮೂರ್ತಿ ಯವರನ್ನು 18ನೇ ಬಷೀರ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಗಲ್ಫ್ ಮಲಯಾಳಿಗಳ ಸಾಂಸ್ಕೃತಿಕ ಸಂಘಟನೆ 'ಪ್ರವಾಸಿ ದೋಹಾ' ಸಂಸ್ಥೆ, ಪ್ರಸಿದ್ಧ ಮಲಯಾಳಂನ ಲೇಖಕ ವೈಕಂ ಮಹಮ್ಮದ್ ಬಷೀರ್ ಅವರ ಹೆಸರಿನಲ್ಲಿ ಈ ಪ್ರಶಸ್ತಿ ನೀಡುತ್ತಿದೆ. ಪ್ರಶಸ್ತಿಯು ರೂ. 50 ಸಾವಿರ ನಗದು ಹಾಗೂ ಸ್ಮರಣ ಫಲಕ ಹಾಗೂ ಖ್ಯಾತ ಕಲಾವಿದ ನಂಬೂದರಿ ಅವರಿಂದ ರಚಿತವಾದ ಕಲಾಕೃತಿಯನ್ನು ಒಳಗೊಂಡಿದೆ. ಪರಂಪರೆ ಜೊತೆಗಿನ ನಿರಂತರ ಸಂಘರ್ಷವನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿರುವ ಅನಂತಮೂರ್ತಿ ಪಾಶ್ಚಾತ್ಯ ಸಂಸ್ಕೃತಿಯನ್ನು ಆಧುನಿಕತೆಯ ಹೆಸರಿನಲ್ಲಿ ಕುರುಡಾಗಿ ಅನುಕರಿಸುವವರಿಂದಲೂ ಭಿನ್ನರಾಗಿದ್ದಾರೆ. ಅವರು ಭಾರತೀಯ ಸಂಸ್ಕೃತಿಯ ಬಹುತ್ವವನ್ನು ಒಂದು ವಾಸ್ತವ ಎಂದು ಪರಿಗಣಿಸಿರುವ ಲೇಖಕ. ಇಂಗ್ಲಿಷ್ ಭಾಷೆಯ ಶಿಕ್ಷಕರಾದರೂ ತಮ್ಮ ಮಾತೃಭಾಷೆ ಕನ್ನಡದಲ್ಲಿ ಸಾಹಿತ್ಯ ರಚಿಸಿರುವ, ವೈಕಂ ಅವರನ್ನು ಇತರ ದೇಶಗಳಲ್ಲಿ ಪರಿಚಯಿಸಿದ ಅನಂತಮೂರ್ತಿ ಪ್ರಶಸ್ತಿಗೆ ಅರ್ಹರು ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಲೇಖಕ ಎಂ.ಟಿ. ವಾಸುದೇವನ್ ನಾಯರ್, ಪ್ರವಾಸಿ ಟ್ರಸ್ಟ್‌ನ ಬಾಬು ಮಾಥರ್ ಮತ್ತು ಎಂ.ಎ. ರೆಹಮಾನ್ ಅವರನ್ನೊಳಗೊಂಡ ತೀರ್ಪುಗಾರರ ಸಮಿತಿ ಅನಂತಮೂರ್ತಿಯವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಬಷೀರ್ ಕೇರಳದ ಮಹತ್ವದ ಕಾದಂಬರಿಕಾರರು.

**ವೈಕಂ ಮಹಮ್ಮದ್ ಬಷೀರ್ ಪ್ರಶಸ್ತಿ ಪಡೆದ ಹಿರಿಯ ಸಾಹಿತಿ ಅನಂತಮೂರ್ತಿ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**


# ಪಂಪ ಮತ್ತು ಗುಬ್ಬಿ ವೀರಣ್ಣ ಪ್ರಶಸ್ತಿ



ಡಾ. ಜಿ.ಎಚ್. ನಾಯಕ್

ಕನ್ನಡದ ಸೃಜನೇತರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸಾಹಿತಿ ಹಾಗೂ ವಿಮರ್ಶಕ ಡಾ. ಜಿ.ಎಚ್.ನಾಯಕ್ ಅವರನ್ನು 2010ನೇ ಸಾಲಿನ 'ಪಂಪ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಅವರ ಕೃತಿಗಳಲ್ಲಿ ಸಮಕಾಲೀನ (1973), ಅನಿವಾರ್ಯ (1980), ನಿರಪೇಕ್ಷ (1984), ನಿಜದನಿ (1988), ವಿನಯ ವಿಮರ್ಶೆ(1991), ಸಕಾಲಿಕ (1995), ಹರಿಶ್ಚಂದ್ರ ಕಾವ್ಯ (2002), ಗುಣಗೌರವ (2002), ದಲಿತ ಹೋರಾಟ: ಗಂಭೀರ ಸವಾಲುಗಳು (2004), ಕೃತಿಸಾಕ್ಷಿ (2006), ಸ್ಥಿತಪ್ರಜ್ಞ (2007), ಮತ್ತೆ ಮತ್ತೆ ಪಂಪ(2009), ಸಾಹಿತ್ಯ ಸಮೀಕ್ಷೆ (2009) ಪ್ರಮುಖವಾದವುಗಳು. ಇದಲ್ಲದೇ ಸಂವೇದನೆ, ಕನ್ನಡ ಸಣ್ಣಕತೆಗಳು, ಹೊಸಗನ್ನಡ ಕವಿತೆ, ಶತಮಾನದ ಕನ್ನಡ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಹೊರತಂದಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರೊ. ನಾಯಕ್ ಉತ್ತಮ ಬರಹಗಾರರು. ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ ಮುಂತಾದ ಹಲವಾರು ಗೌರವಗಳು ಅವರನ್ನು ಅರಸಿ ಬಂದಿದ್ದು, ಇದೀಗ ಸಂದಿರುವ 'ಪಂಪ ಪ್ರಶಸ್ತಿ' ಅವರು ಸಲ್ಲಿಸಿರುವ ಸಾಹಿತ್ಯ ಸೇವೆಗೆ ಸಂದಿರುವ ರಾಜ್ಯದ ಉನ್ನತ ಗೌರವವಾಗಿದೆ.

ಗೋವಿಂದ ಎಚ್ ನಾಯಕ್ ಅವರು ಸೆಪ್ಟೆಂಬರ್ 18, 1935ರಂದು ಅಂಕೋಲಾದ ಬಳಿಯ ಸೂರ್ವೆ ಎಂಬ ಹಳ್ಳಿಯಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ನಾಯಕ್ ಅವರು ಅಪಾರ ಶಿಷ್ಯ ವೃಂದ ಹೊಂದಿದವರಾಗಿದ್ದಾರೆ.



ಎಲ್.ಬಿ.ಕೆ. ಅಲ್ದಾಳ

ರಂಗಭೂಮಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ನೀಡುವ 2011ನೇ ಸಾಲಿನ ಡಾ. ಗುಬ್ಬಿ ವೀರಣ್ಣ ಪ್ರಶಸ್ತಿಯು ವೃತ್ತಿ ಹಾಗೂ ಗ್ರಾಮೀಣ ರಂಗಭೂಮಿಯ ಹಿರಿಯ ನಾಟಕಕಾರ, ನಿರ್ದೇಶಕ ಎಲ್.ಬಿ.ಕೆ. ಅಲ್ದಾಳ ಅವರಿಗೆ ಸಂದಿದೆ. ಅಲ್ದಾಳ ಅವರ ರಂಗಸೇವೆಯನ್ನು ಗೌರವಿಸಿ ರಾಜ್ಯೋತ್ಸವ, ನಾಟಕ ಅಕಾಡೆಮಿ ಸೇರಿದಂತೆ ಹತ್ತಾರು ಪ್ರಶಸ್ತಿ, ಸನ್ಮಾನಗಳನ್ನು ನೀಡಿ ಗೌರವಿಸಲಾಗಿದೆ. ಇದೀಗ ಕನ್ನಡ ರಂಗಭೂಮಿಯ ಅತ್ಯುನ್ನತ ಪುರಸ್ಕಾರವಾದ ಗುಬ್ಬಿ ವೀರಣ್ಣ ಪ್ರಶಸ್ತಿ ಅವರ ಮಡಿಲಿಗೆ. ರಂಗ ಕಲಾವಿದರ ಕುರಿತ ಅಭಿನಂದನಾ ಗ್ರಂಥಗಳು ಹೊರಬಂದಿರುವುದು ಕೈಬೆರಳೆಣಿಕೆಯಷ್ಟು ಮಾತ್ರ. ಅವುಗಳ ಪೈಕಿ ಅಲ್ದಾಳ ಮಾಸ್ತರರ ಕುರಿತು ಹೊರತಂದಿರುವ 'ರಂಗ ಸಂತ ಜಂಗಮ'ವೂ ಒಂದು.

1938ರಲ್ಲಿ ವಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕು ಬನ್ನಿಹಟ್ಟಿಯಲ್ಲಿ ಜನಿಸಿದ ಅಲ್ದಾಳ ಮಾಸ್ತರ ಯುವಕರಾಗಿದ್ದಾಗಲೇ ಬಂದು ನೆಲೆಸಿದ್ದು ಗುಲ್ಬರ್ಗ ಜಿಲ್ಲೆ ಜೇವರಗಿ ತಾಲ್ಲೂಕು ಮಳ್ಳಿಗೆಯಲ್ಲಿ. ಪತ್ನಿ ಅಮೀನ್ಬಿ, ಪುತ್ರರಾದ ಮಹಮದ್ ರಫಿ ಹಾಗೂ ಮಹಮದ್ ಶಫಿ ಹಾಗೂ ಮೊಮ್ಮಕ್ಕಳೊಂದಿಗೆ ವಾಸ. ಅವರದು ಯಾವುದೇ ವ್ಯಸನಗಳಿಲ್ಲದ ಸರಳ ಜೀವನ.

ನಿಜಗುಣ ಶಿವಯೋಗಿ, ದಾಸರು, ತತ್ವಪದಕಾರರು, ವಚನಗಳು, ಡಿವಿಜಿ ಕಗ್ಗ, ಕನ್ನಡದ ಕುರಾನ್ ಮುಂತಾದವು ಅವರ ಸಂಗಾತಿಗಳು. ಯುವ ಲೇಖಕರು ಕೊಟ್ಟ ಪುಸ್ತಕಗಳನ್ನು ಆದ್ಯಂತವಾಗಿ ಓದಿ ಪ್ರತಿಕ್ರಿಯಿಸುವುದು ಅವರ ಸಜ್ಜನಿಕೆಯ ದ್ಯೋತಕ. ಸಂತರ ಕುರಿತ ಯಶಸ್ವಿ ನಾಟಕಗಳನ್ನು ಕೊಟ್ಟ ಈ ಕವಿಯನ್ನು ಈ ಭಾಗದ ಜನ ಅತ್ಯಂತ ಗೌರವದಿಂದ ಕಾಣುತ್ತಾರೆ. ಇಲ್ಲಿಯ ಜನಕ್ಕೆ ಅಲ್ದಾಳ ಕವಿಯೂ ಒಬ್ಬ ಅವಧೂತನಂತೆ!

ಎರಡೂ ಪ್ರಶಸ್ತಿಗಳು ತಲಾ ಮೂರು ಲಕ್ಷ ರೂ. ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿವೆ.

**ಪಂಪ ಪ್ರಶಸ್ತಿ ಪಡೆದ ಜಿ.ಎಚ್. ನಾಯಕರಿಗೆ ಮತ್ತು ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಕವಿ ಎಲ್.ಬಿ.ಕೆ. ಅಲ್ದಾಳ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವ ಪೂರ್ವಕ ಅಭಿನಂದನೆಗಳು.**

**Delhi Karnataka Sangha's Abhimatha Monthly,**
**August -2012, Price Rs.1/-  RNI Regn. No. 53405/91, DL-SW-15/4016/10-11-12**
**Printout Date : August 8th / 9th, Postal Date :10th / 11th, Total Pages-24**



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770